ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 18 ಗುರುವಾರ 2024

ಸಂಪುಟ: 44 | ಸಂಚಿಕೆ: 271 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮಾ.1ರಿಂದ ದ್ವಿತೀಯ ಪಿಯು; ಮಾ.25ರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ



ಬೆಂಗಳೂರು: ದ್ವಿತೀಯ ಪಿಯುಸಿ ಮತ್ತು SSLC ಪರೀಕ್ಷೆಯ ಅಂತಿಮ ವೇಳಾಪಟ್ಟಿ ಪ್ರಕಟಗೊಂಡಿದೆ. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯಿಂದ ಅಂತಿಮ ವೇಳಾಪಟ್ಟಿ ಪ್ರಕಟ ಮಾಡಿದ್ದು, ದ್ವಿತೀಯ ಪಿಯುಸಿ ಪರೀಕ್ಷೆ ಮಾರ್ಚ್ 1ರಿಂದ ಮಾರ್ಚ್ 22ವರೆಗೆ ನಡೆಯಲಿದೆ. ಇನ್ನು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಾರ್ಚ್ 25 ರಿಂದ ಏಪ್ರಿಲ್ 6ವರೆಗೆ ನಡೆಯಲಿದೆ. ● 10ನೇ ಪುಟಕ್ಕೆ

ಆಸ್ತಿಗಳ ಮೂಲ ದಾಖಲಾತಿ ಡಿಜಿಟಲೀಕರಣ

ವರ್ಷಾಂತ್ಯಕ್ಕೆ ಪೂರ್ಣ

ಕಂದಾಯ ಸಚಿವ ಕೃಷ್ಣಭೈರೇಗೌಡ ಮಾಹಿತಿ

- 31 ಜಿಲ್ಲೆಯ ಒಂದೊಂದು ತಾಲೂಕಲ್ಲಿ ಪ್ರಾಯೋಗಿಕ ಕಾರ್ಯ
- ದಾಖಲಾತಿ ಕಳೆದು ಹೋಗಲ್ಲ, ಅಕ್ರಮವಾಗಿ ತಿದ್ದಲು ಸಾಧ್ಯವಿಲ್ಲ
- ವಸೂಲಾತಿಗೆ ಕಡಿವಾಣ; ಸರ್ಕಾರಿ ಕಚೇರಿಗೆ ಅಲೆಯುವುದು ತಪ್ಪುತ್ತೆ



ಮೈಸೂರು, ಜ.17(ಬಿಎಲ್‌ಯು)– ಕಂದಾಯ ಇಲಾಖೆ ವ್ಯಾಪ್ತಿಯ ಆಸ್ತಿಗಳ ಮೂಲ ಭೂ ದಾಖಲಾತಿಗಳನ್ನು ಡಿಜಿಟಲೀಕರಣ ಮಾಡುವ ಕಾರ್ಯವನ್ನು ಈ ತಿಂಗಳಿನಿಂದ ಆರಂಭಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ತಿಳಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಕಂದಾಯ ಇಲಾಖೆಯಲ್ಲಿರುವ ಭೂ ದಾಖಲಾತಿಗಳನ್ನು ಡಿಜಿಟಲೀಕರಣ ಮಾಡುವ ಕಾರ್ಯವನ್ನು ರಾಜ್ಯದ 31 ಜಿಲ್ಲೆಯ ಒಂದೊಂದು ತಾಲೂಕಲ್ಲಿ ಪ್ರಾಯೋಗಿಕವಾಗಿ ಈಗಾಗಲೇ ಆರಂಭಿಸಲಾಗಿದೆ. ಯಶಸ್ವಿ ನಂತರ ರಾಜ್ಯದ ಎಲ್ಲಾ ತಾಲೂಕುಗಳಲ್ಲಿ ಡಿಜಿಟಲೀಕರಣ ಮಾಡಿ ವರ್ಷಾಂತ್ಯಕ್ಕೆ ಪೂರ್ಣಗೊಳಿಸಲಾಗುವುದು ಎಂದು ಹೇಳಿದರು.

ಆಸ್ತಿಗಳ ಭೂ ದಾಖಲಾತಿಗಳನ್ನು ಡಿಜಿಟಲೀಕರಣ ಮಾಡಿದರೆ ಜನರು ಸರ್ಕಾರಿ ಕಚೇರಿಗೆ ಅಲೆಯುವ ಪ್ರಮೇಯವಿರುವುದಿಲ್ಲ. ತಾವು ಕುಳಿತಲ್ಲೇ ಆನ್‌ಲೈನ್ ಮೂಲಕ ದಾಖಲಾತಿಗಳನ್ನು ವೀಕ್ಷಿಸಬಹುದು, ಜೊತೆಗೆ ಪಡೆಯಬಹುದು ಎಂದು ಹೇಳಿದರು. ಕಂದಾಯ ಇಲಾಖೆಯ ರೆಕಾರ್ಡ್ ರೂಮ್‌ನಲ್ಲಿ ಆಸ್ತಿಗಳ ದಾಖಲಾತಿ ಕೆಲವು ವೇಳೆ ಕಳೆದು ಹೋಗುತ್ತದೆ. ಜೊತೆಗೆ ಕೆಲವರಿಂದ ಅಕ್ರಮವಾಗಿ ತಿದ್ದುವ ಕೆಲಸಗಳು ನಡೆಯುತ್ತವೆ. ಇದರಿಂದ ಜನರು ತೊಂದರೆಗೊಳಗಾಗುತ್ತಾರೆ ಎಂದರು.

ಜನರು ಆಸ್ತಿ ದಾಖಲಾತಿಗಳನ್ನು ಪಡೆಯಲು ಸರ್ಕಾರಿ ಕಚೇರಿಗಳಿಗೆ ಅಲೆಯಬೇಕಾಗುತ್ತದೆ. ● 10ನೇ ಪುಟಕ್ಕೆ

ಖಾಸಗಿ ಕಟ್ಟಡಗಳಲ್ಲಿರುವ ಸರ್ಕಾರಿ ಕಚೇರಿ ಶೀಘ್ರ ತೆರವು

ಖಾಸಗಿ ಕಟ್ಟಡಗಳಲ್ಲಿ ಬಾಡಿಗೆಯಡಿ ನಡೆಯುತ್ತಿರುವ ಸರ್ಕಾರಿ ಕಚೇರಿಗಳನ್ನು ಶೀಘ್ರವೇ ತೆರವು ಮಾಡಿ ಸರ್ಕಾರಿ ಕಟ್ಟಡಗಳಿಗೆ ಸ್ಥಳಾಂತರ ಮಾಡಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ಭರವಸೆ ನೀಡಿದರು. ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸೇರಿದಂತೆ ಇತರೆ ಸರ್ಕಾರಿ ಕಚೇರಿಗಳಲ್ಲಿ ಕೋಣೆಗಳು ಖಾಲಿ ಇವೆ. ಆದರೆ ಸಬ್ ರಿಜಿಸ್ಟ್ರಾರ್ ಕಚೇರಿ ಸೇರಿದಂತೆ ಹಲವು ಸರ್ಕಾರಿ ಕಚೇರಿಗಳು ಖಾಸಗಿ ಕಟ್ಟಡದಲ್ಲಿ ಬಾಡಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿವೆ. ಖಾಸಗಿ ಕಟ್ಟಡಗಳ ಮಾಲೀಕರ ಲಾಬಿಯಿಂದ ದಂಧೆ ನಡೆಯುತ್ತಿದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಕೃಷ್ಣಭೈರೇಗೌಡ, ಈ ಬಗ್ಗೆ ಸ್ಥಳೀಯ ಶಾಸಕರಿಂದ ಮಾಹಿತಿ ಪಡೆಯುತ್ತೇನೆ. ಶೀಘ್ರವೇ ಖಾಸಗಿ ಕಟ್ಟಡಗಳಲ್ಲಿ ಬಾಡಿಗೆಗಿರುವ ಸರ್ಕಾರಿ ಕಚೇರಿಗಳನ್ನು ತೆರವು ಮಾಡಲಾಗುವುದು. ನಂತರ ಖಾಲಿ ಇರುವ ಸರ್ಕಾರಿ ಕಟ್ಟಡಗಳಿಗೆ ಸ್ಥಳಾಂತರ ಮಾಡಲಾಗುವುದು ಎಂದು ಕೃಷ್ಣಭೈರೇಗೌಡ ತಿಳಿಸಿದರು.

ಲೋಕ ಸಮರ ಸಂಬಂಧ ಅಮಿತ್ ಶಾ, ನಡ್ಡಾರೊಂದಿಗೆ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಮಾತುಕತೆ



ನವದೆಹಲಿಯಲ್ಲಿ ಬುಧವಾರ ಸಂಜೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಅಭಿನಂದಿಸಿದರು. ಈ ವೇಳೆ ಜೆಡಿಎಸ್ ಅವರೊಂದಿಗೆ ಲೋಕಸಭಾ ಚುನಾವಣೆ ಸಂಬಂಧ ಮಾತುಕತೆ ನಡೆಸಿದರು.

ನವದೆಹಲಿ,ಜ.17–ಮುಂಬರುವ ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರೊಂದಿಗೆ ಜೆಡಿಎಸ್ ರಾಜ್ಯಾಧ್ಯಕ್ಷರೂ ಆದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಬುಧವಾರ ಸಂಜೆ ಮಹತ್ವದ ಮಾತುಕತೆ ನಡೆಸಿದರು. ಅಮಿತ್ ಶಾ ಅವರ ನಿವಾಸದಲ್ಲಿ ನಡೆದ ಈ ಸಭೆ ಯಲ್ಲಿ ಕುಮಾರಸ್ವಾಮಿ ಜೊತೆ ಅವರ ಪುತ್ರರೂ ಆದ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮಾಜಿ ಸಂಸದ ಕುಪೇಂದ್ರರೆಡ್ಡಿ ಉಪಸ್ಥಿತರಿದ್ದರು. ಅಮಿತ್ ಶಾ ಮತ್ತು ನಡ್ಡಾ ಅವರ ಜೊತೆ ಮೈತ್ರಿ ವಿಷಯವೂ ● 6ನೇ ಪುಟಕ್ಕೆ

ಅನಿರ್ದಿಷ್ಟಾವಧಿ ಲಾರಿ ಮುಷ್ಕರ ಆರಂಭ



ಮೈಸೂರಿನ ಹಳೇ ಆರ್‌ಎಂಸಿ ಮಾರುಕಟ್ಟೆಯಲ್ಲಿ ಲಾರಿ ಚಾಲಕರು ಪ್ರತಿಭಟನೆ ನಡೆಸಿದರು.

ಮೈಸೂರು, ಜ.17(ಆರ್‌ಕೆ)–ಹಿಟ್ ಅಂಡ್ ರನ್ ಪ್ರಕರಣಗಳಲ್ಲಿ ಶಿಕ್ಷೆ ಮತ್ತು ದಂಡ ವಿಧಿಸುವ ಕಾರ್ಯ ವಿರೋಧಿಸಿ ಲಾರಿ ಚಾಲಕರು ಇಂದು ಮಧ್ಯರಾತ್ರಿಯಿಂದ ರಾಜ್ಯಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದ್ದಾರೆ.

ಮೈಸೂರಿನ ಹಳೇ ಆರ್‌ಎಂಸಿ ಮಾರುಕಟ್ಟೆಯಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಮೈಸೂರು ಜಿಲ್ಲಾ ಲಾರಿ ಮಾಲೀಕರು ಮತ್ತು ಚಾಲಕರ ಒಕ್ಕೂಟದ ಉಪಾಧ್ಯಕ್ಷ ಅಬ್ದುಲ್ ಖಾದರ್ ಶಾಹಿದ್, ಕೇಂದ್ರ ಸರ್ಕಾರವು ಅಪಘಾತದ ಸಂದರ್ಭ ಹಿಟ್ ಅಂಡ್ ರನ್ ಮಾಡಿದ ಪ್ರಕರಣಗಳಲ್ಲಿ ಲಾರಿ ಚಾಲಕರಿಗೆ 10 ವರ್ಷ ಕಠಿಣ ಶಿಕ್ಷೆ ಹಾಗೂ 10 ಲಕ್ಷ ರೂ. ದಂಡ ವಿಧಿಸುವ ವಿಧೇಯಕ ಜಾರಿ ಮಾಡುತ್ತಿರುವುದು ಖಂಡನೀಯ ಎಂದರು. ಅಪಘಾತವಾದಾಗ ನಮ್ಮದು ತಪ್ಪಿಲ್ಲದಿದ್ದರೂ ಭಾರಿ ವಾಹನ ಎಂಬ ಕಾರಣಕ್ಕೆ ಹಿಂದೆ–ಮುಂದೆ ನೋಡದೇ ಜನರು ಹಲ್ಲೆ ಮಾಡಿ ವಾಹನ ಜಖಂಗೊಳಿಸುವುದರಿಂದ ಹೆದರಿ ಚಾಲಕರು ನಿಲ್ಲಿಸದೇ ಹೋಗುತ್ತಾರೆ. ಕೆಲ ಸಂದರ್ಭಗಳಲ್ಲಿ ವಾಹನ ಬಿಟ್ಟು ಪರಾರಿಯಾಗುವುದೂ ಉಂಟು. ಹಾಗೆಂದ ಮಾತ್ರಕ್ಕೆ ಹಿಟ್ ಅಂಡ್ ರನ್ ಕೇಸ್ ಹಾಕಿ ಈ ಪ್ರಮಾಣದ ಶಿಕ್ಷೆ ಮತ್ತು ದಂಡ ವಿಧಿಸುವುದು ಸರಿಯಲ್ಲ ಎಂದರು. ಇದರಿಂದ ಚಾಲಕರು ಮತ್ತು ಅವರನ್ನು ಅವಲಂಬಿಸಿರುವ ಕುಟುಂಬವೇ ಬೀದಿಗೆ ಬರುತ್ತದೆ. ಇಷ್ಟೆಲ್ಲಾ ತೊಂದರೆಯಾಗುವುದಾದರೆ ಚಾಲಕರು ● 10ನೇ ಪುಟಕ್ಕೆ

ಜೀಪ್, ಓಮ್ನಿ ಮುಖಾಮುಖಿ ಡಿಕ್ಕಿ

ತಂದೆ, ಮಗಳು ಸಾವು

ಮಡಿಕೇರಿ–ಕುಶಾಲನಗರ ಹೆದ್ದಾರಿಯಲ್ಲಿ ಆನೆಕಾಡು ಬಳಿ ದುರಂತ



ಮಡಿಕೇರಿ–ಕುಶಾಲನಗರ ಹೆದ್ದಾರಿಯಲ್ಲಿ ಆನೆಕಾಡು ಬಳಿ ನಡೆದ ಅಪಘಾತದಲ್ಲಿ ಓಮ್ನಿ ಸಂಪೂರ್ಣವಾಗಿ ನಜ್ಜುಗುಜ್ಜಾಗಿರುವುದು.

ಮಡಿಕೇರಿ, ಜ.17–ಬೊಲೆರೋ ಜೀಪ್ ಮತ್ತು ಮಾರುತಿ ಓಮ್ನಿ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ, ತಂದೆ ಹಾಗೂ ಮಗಳು ದುರ್ಮರಣಕ್ಕೀಡಾದ ಘಟನೆ ಮಡಿಕೇರಿ–ಕುಶಾಲನಗರ ರಾಷ್ಟ್ರೀಯ ಹೆದ್ದಾರಿಯ ಆನೆಕಾಡು ಬಳಿ ಬುಧವಾರ ಮಧ್ಯಾಹ್ನ ನಡೆದಿದೆ.

ಕುಶಾಲನಗರ ತಾಲೂಕಿನ ಬಸವನಹಳ್ಳಿ ಗ್ರಾಮದ ನಿವಾಸಿಯಾದ ನಿವೃತ್ತ ಸೈನಿಕ ರಾಜೇಶ್ ದೇವಯ್ಯ(38) ಹಾಗೂ ಅವರ ಪುತ್ರಿ ನ್ಯಾನ್ಸಿ ಬೊಳ್ಳಮ್ಮ(3) ದುರಂತ ಸಾವಿಗೀಡಾದವರು. ● 6ನೇ ಪುಟಕ್ಕೆ

ಸಿಎಂ ಬದಲಾವಣೆ ಮಾಡೋದು ಹೈಕಮಾಂಡ್‌ಗೆ ಬಿಟ್ಟ ವಿಚಾರ



ಪರಮೇಶ್ವರ್

ಬೆಂಗಳೂರು: ಸಿಎಂ ಬದಲಾವಣೆ ಮಾಡೋದು, ಮುಂದುವರೆಸೋದು ಹೈಕಮಾಂಡ್‌ಗೆ ಬಿಟ್ಟ ವಿಚಾರ ಎಂದು ಗೃಹ ಸಚಿವ ಪರಮೇಶ್ವರ್ ತಿಳಿಸಿದ್ದಾರೆ. ಲೋಕಸಭೆಯಲ್ಲಿ ಹೆಚ್ಚು ಸ್ಥಾನ ಗೆದ್ದರೆ 5 ವರ್ಷ ಸಿದ್ದರಾಮಯ್ಯ ಸಿಎಂ ಆಗಿ ಇರುತ್ತಾರೆ ಎಂಬ ಯತೀಂದ್ರ ಸಿದ್ದರಾಮಯ್ಯರ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಲೋಕಸಭೆಯಲ್ಲಿ ಸಿದ್ದರಾಮಯ್ಯ ಒಬ್ಬರೇ ಅಲ್ಲ. ಕೆಪಿಸಿಸಿ ಅಧ್ಯಕ್ಷರು, ನಾವೆಲ್ಲರೂ ಇದ್ದೇವೆ. ನಾವೆಲ್ಲ ಸೇರಿ 28 ಕ್ಷೇತ್ರ ಗೆಲ್ಲಬೇಕು ಅಂತ ಪ್ರಯತ್ನ ಮಾಡ್ತೀವಿ. ಅಂತಿಮವಾಗಿ ಜನ ಹೇಗೆ ಸಹಕಾರ ಕೊಡ್ತಾರೆ, ಮತ ಹಾಕ್ತಾರೆ ಅನ್ನೋದು ಜನರಿಗೆ ಬಿಟ್ಟಿದ್ದು ಎಂದು ಹೇಳಿದ್ದಾರೆ. ನಮಗೆ ವಿಶ್ವಾಸ ಇದೆ. ನಾವು ಕಾರ್ಯಕ್ರಮ ಕೊಟ್ಟಿದ್ದೇವೆ. ಗ್ಯಾರಂಟಿ ಅನುಷ್ಠಾನ ಮಾಡಿದ್ದೇವೆ. ಜನ ಸಮುದಾಯಕ್ಕೆ ಈ ಸರ್ಕಾರದ ಬಗ್ಗೆ ಒಳ್ಳೆಯ ಅಭಿಪ್ರಾಯ ಇದೆ. ಹಾಗಾಗಿ ನಾವು ಹೆಚ್ಚು ಸ್ಥಾನ ಗೆಲ್ಲಬೇಕು ಅಂತ ಹೇಳಿ ನಾವೆಲ್ಲ ಸಂಕಲ್ಪ ಮಾಡಿದ್ದೇವೆ. ಹೈಕಮಾಂಡ್ ಕೂಡಾ ನಮಗೆ ಇದನ್ನೇ ಹೇಳಿದೆ ಎಂದರು.

ಕ್ಷೇತ್ರ ಗೆದ್ದುಕೊಂಡು ಬರಬೇಕು!: ಸಿಎಂ ಮುಂದುವರಿಸೋದು, ಬಿಡೋದು ಹೈಕಮಾಂಡ್‌ಗೆ ಬಿಟ್ಟ ವಿಚಾರ. ಆ ತೀರ್ಮಾನ ನಮ್ಮ ಹಂತದಲ್ಲಿ ● 10ನೇ ಪುಟಕ್ಕೆ

ಲೋಕಸಭೆ ಅಧಿಕ ಸ್ಥಾನ ಗೆದ್ದರೆ

ಸಿದ್ದರಾಮಯ್ಯರೇ ಪೂರ್ಣಾವಧಿ ಸಿಎಂ!



ಬೆಂಗಳೂರು, ಜ.17(ಕೆಎಂಶಿ)–ಲೋಕಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಭರ್ಜರಿ ಜಯ ತಂದುಕೊಟ್ಟರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪೂರ್ಣಾವಧಿ ಅಧಿಕಾರದಲ್ಲಿ ಇರುತ್ತಾರೆ ಎಂದು ಅವರ ಪುತ್ರ ಹಾಗೂ ಮಾಜಿ ಶಾಸಕ ಡಾ.ಯತೀಂದ್ರ ನೀಡಿರುವ ಹೇಳಿಕೆ ಪ್ರದೇಶ ಕಾಂಗ್ರೆಸ್‌ನಲ್ಲಿ ಅಲ್ಲೋಲ–ಕಲ್ಲೋಲ ಸೃಷ್ಟಿಸಿದೆ. ಹೊಳೆನರಸೀಪುರ ತಾಲೂಕಿನಲ್ಲಿ ತಮ್ಮ ಸಮುದಾಯದ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ನೀವು ನಮ್ಮ ತಂದೆಯವರಿಗೆ ಬೆನ್ನೆಲುಬಾಗಿ ನಿಂತಿದ್ದರಿಂದ ಎರಡು ಬಾರಿ ಮುಖ್ಯಮಂತ್ರಿ ಆಗಲು ಸಾಧ್ಯವಾಯಿತು. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಅದೇ ರೀತಿ ಬೆಂಬಲ ನೀಡಿ ನಮ್ಮ ತಂದೆ ಯವರ ಕೈಬಲಪಡಿಸಿ ಎಂದು ಮನವಿ ಮಾಡಿದ್ದಾರೆ.

ಕಾಂಗ್ರೆಸ್‌ನಲ್ಲಿ ಅಲ್ಲೋಲ–ಕಲ್ಲೋಲ

ಈ ಮನವಿಯೇ ಕಾಂಗ್ರೆಸ್‌ನಲ್ಲಿ ದೊಡ್ಡ ಚರ್ಚೆಗೆ ಗ್ರಾಸವಾಗಿದೆ, ಇದುವರೆಗೂ ಕೆಲವು ಸಚಿ ವರು ಸಿದ್ದರಾಮಯ್ಯ ಅವರೇ ಐದು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಅಧಿಕಾರದಲ್ಲಿ ಇರುತ್ತಾರೆಂದು ಹೇಳಿಕೆ ನೀಡಿದ್ದರು. ಆದರೆ, ಇದೀಗ ಅವರ ಪುತ್ರನೇ ಇಂತಹ ಹೇಳಿಕೆ ಸಾರ್ವಜನಿಕವಾಗಿ ನೀಡಿರುವುದು ಚುನಾವಣೆಯ ದೂರದೃಷ್ಟಿಯಿಂದಲೋ ಅಥವಾ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಟಾಂಗ್ ಕೊಡಲೋ ಎಂಬ ಬಗ್ಗೆ ಚರ್ಚೆ ನಡೆದಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲೇ ಲೋಕಸಭೆ ಚುನಾವಣೆ

ಯಾವುದೇ ಅನುಮಾನ ಬೇಡ: ಡಿಸಿಎಂ ಡಿಕೆಶಿ



ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲೇ ಲೋಕಸಭೆ ಚುನಾವಣೆಯನ್ನು ಎದುರಿಸುತ್ತೇವೆ. ಈ ಬಗ್ಗೆ ಯಾವುದೇ ಅನುಮಾನ ಬೇಡ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಬುಧವಾರ ಹೇಳಿದ್ದಾರೆ. ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅತೀ ಹೆಚ್ಚು ಸ್ಥಾನಗಳಿಸಿದರೆ ಸಿದ್ದರಾಮಯ್ಯ ಅವರೇ ಪೂರ್ಣಾವಧಿ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ ಎಂದು ಸಿಎಂ ಪುತ್ರ ಯತೀಂದ್ರ ಅವರು ಹೇಳಿದ್ದು, ● 10ನೇ ಪುಟಕ್ಕೆ

ಡಿ.ಕೆ.ಶಿವಕುಮಾರ್ ನೋಡಿದ್ರೆ ನನಗೆ ಪಾಪ ಅನ್ನಿಸುತ್ತೆ...!?



ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಲೇವಡಿ

- ಪೂರ್ಣಾವಧಿ ಸಿಎಂ ಆಗಲು ಸಿದ್ದರಾಮಯ್ಯ ಪ್ಲಾನ್
- ಬೆಂಬಲಿಗರ ಹೆಗಲ ಮೇಲೆ ಬಂದೂಕಿಟ್ಟು ಗುಂಡು
- ಡಿಕೆಶಿಗೆ ಸಿಎಂ ಸಿದ್ದರಾಮಯ್ಯರೇ ನಿಜವಾದ ವಿರೋಧಿ
- ಸಿದ್ದರಾಮಯ್ಯಗೆ ಸ್ವಜಾತಿ, ಮುಸ್ಲಿಂರ ಬಗ್ಗೆ ಮಾತ್ರ ಪ್ರೀತಿ

ಮೈಸೂರು, ಜ.17(ಬಿಎಲ್‌ಯು)–ನಾನೇ ಪೂರ್ಣಾವಧಿ ಸಿಎಂ ಎಂದು ತಮ್ಮ ಪುತ್ರ ಡಾ.ಯತೀಂದ್ರ ಮೂಲಕವೂ ಈಗ ಸಿದ್ದರಾಮಯ್ಯ ಸಂದೇಶ ರವಾನಿಸಿದ್ದಾರೆ. ಇದರಿಂದ ಮುಖ್ಯಮಂತ್ರಿ ಸ್ಥಾನದ ಮೇಲೆ ಆಸೆ ಇಟ್ಟುಕೊಂಡಿರುವ ಡಿ.ಕೆ. ಶಿವಕುಮಾರ್ ನೋಡಿದರೆ ನನಗೆ ಪಾಪ ಅನ್ನಿಸುತ್ತೆ ಎಂದು ಸಂಸದ ಪ್ರತಾಪ್‌ಸಿಂಹ ಲೇವಡಿ ಮಾಡಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ತಮ್ಮ ತಂದೆಯೇ ಐದು ವರ್ಷ ಸಿಎಂ ಆಗಿರುತ್ತಾರೆ ಎಂಬ ಡಾ.ಯತೀಂದ್ರ ಹೇಳಿಕೆಗೆ ಅವರು ಈ ಪ್ರತಿಕ್ರಿಯೆ ನೀಡಿದರು. ಎಸ್.ಎಂ.ಕೃಷ್ಣ ನಂತರ ಒಕ್ಕಲಿಗ ಮುಖ್ಯಮಂತ್ರಿ ಆಗುವ ಮತ್ತೊಂದು ಅವಕಾಶ ಬಂದಿದೆ ಎಂದು ವಿಧಾನಸಭಾ ಚುನಾವಣೆಯಲ್ಲಿ ಡಿ.ಕೆ.ಶಿವಕುಮಾರ್ ಒಕ್ಕಲಿಗರ ಮತ ಕೇಳಿದ್ದರು. ಅದೇ ರೀತಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಡಿ.ಕೆ.ಶಿವಕುಮಾರ್ ಪಕ್ಷವನ್ನು ಬಲಿಷ್ಠವಾಗಿ ಕಟ್ಟಿ, ಬಂಡವಾಳ ಕೂಡ ಹಾಕಿದ್ದರು. ಆದರೆ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಸಿದ್ದರಾಮಯ್ಯ ಹಠ ಹಿಡಿದು ಮೊದಲ ಅವಧಿಗೆ ಸಿಎಂ ಆದರು. ಸಿಎಂ ಖುರ್ಚಿಯಲ್ಲಿ ಕೂರುತ್ತಿದ್ದಂತೆ ಈಗ ನಾನೇ ಪೂರ್ಣಾವಧಿ ಸಿಎಂ ಆಗಬೇಕೆಂದು ಪ್ಲಾನ್ ಮಾಡಿದ್ದಾರೆ ಈ ಸಂಬಂಧ ಮೊದಲು ಎಂ.ಬಿ.ಪಾಟೀಲ್, ಸತೀಶ್ ಜಾರಕಿಹೊಳಿ, ರಾಜಣ್ಣ ಮೂಲಕ ಹೇಳಿಕೆ ಕೊಡಿಸಿದ್ದರು. ಈಗ ಮತ್ತೆ ತಮ್ಮ ಪುತ್ರ ಡಾ.ಯತೀಂದ್ರ ಮೂಲಕ ಪೂರ್ಣಾವಧಿ ಸಿಎಂ ಎಂದು ಹೇಳಿಕೆ ಕೊಡಿಸಿದ್ದಾರೆ. ಈ ಮೂಲಕ ತಮ್ಮ ಬೆಂಬಲಿಗರ ಹೆಗಲ ಮೇಲೆ ಬಂದೂಕು ಇಟ್ಟು ಸಿದ್ದರಾಮಯ್ಯ ಗುಂಡು ಹೊಡೆಯುತ್ತಿದ್ದಾರೆ. ಇದರಿಂದ ಸಿಎಂ ಖುರ್ಚಿ ಮೇಲೆ ಆಸೆ ಇಟ್ಟುಕೊಂಡಿರುವ ಡಿ.ಕೆ.ಶಿವ ಕುಮಾರ್ ಅವರ ಬಗ್ಗೆ ನನಗೆ ಪಾಪ ಅನ್ನಿಸುತ್ತದೆ. ಡಿ.ಕೆ.ಶಿವಕುಮಾರ್ ಅವರಿಗೆ ವಿರೋಧಿಗಳು ಬೇರೆ ಎಲ್ಲೂ ಇಲ್ಲ ಅವರ ಕಾಂಗ್ರೆಸ್ ಪಕ್ಷದಲ್ಲೇ ಇದ್ದಾರೆ. ಸಿದ್ದರಾಮಯ್ಯ ಅವರೇ ಡಿ.ಕೆ.ಶಿವಕುಮಾರ್ ಅವರ ನಿಜವಾದ ವಿರೋಧಿ ಎಂದು ಪ್ರತಾಪ್ ಸಿಂಹ ಹೇಳಿದರು. ಡಿ.ಕೆ.ಶಿವಕುಮಾರ್ ಸಿಎಂ ಆಗುತ್ತಾರೆ ಎಂದು ಒಕ್ಕಲಿಗರು ಮತ ಹಾಕಿದರು. ಆದರೆ ಈಗ ದೋಖಾ ಮಾಡಿದ್ದಾರೆ ಎಂದು ಟೀಕಿಸಿದರು. ಸಿದ್ದರಾಮಯ್ಯ ಎಲ್ಲರ ನಡುವೆ ಜಗಳ ಇಟ್ಟು ತಾವು ಅಧಿಕಾರದಲ್ಲಿ ಮುಂದುವರೆಯುವ ಪ್ರಯತ್ನ ಮಾಡುತ್ತಿದ್ದಾರೆ. ಇಂತಹ ತಂತ್ರಗಾರಿಕೆಯಿಂದ ಪೂರ್ಣಾವಧಿ ಸಿಎಂ ಆಗಿರುತ್ತಾರೆ. ಯಾವುದೇ ಕಾರಣಕ್ಕೂ ಅವರು ಸಿಎಂ ಚೇರ್ ಬಿಡುವುದಿಲ್ಲ ಎಂದರು. ಸ್ವಜಾತಿ ಹಾಗೂ ಮುಸ್ಲಿಂರು ನಮ್ಮ ತಂದೆ ಕೈ ಹಿಡಿದರು ಎಂದು ಡಾ.ಯತೀಂದ್ರರೇ ಹೇಳಿದ್ದಾರೆ. ಹಾಗಾದರೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಒಕ್ಕಲಿಗರು ಮತ ಹಾಕಲಿಲ್ಲವೇ, ವರುಣದಲ್ಲಿ ಲಿಂಗಾಯಿತರು ಮತ ಹಾಕಲಿಲ್ಲವೇ ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ, ಸಿದ್ದರಾಮಯ್ಯ ಅವರಿಗೆ ಸ್ವಜಾತಿ ಮತ್ತು ಮುಸ್ಲಿಂರ ಮೇಲೆ ಮಾತ್ರ ಪ್ರೀತಿ ಎಂದು ಆರೋಪಿಸಿದರು.

ಮೈಸೂರಿನಿಂದ ಅಯೋಧ್ಯೆಗೆ ಹೋಗುವವರಿಗೆ ವಸತಿ ವ್ಯವಸ್ಥೆ

ಅಯೋಧ್ಯೆಯಲ್ಲಿ ಬಾಲರಾಮನ ದರ್ಶನಕ್ಕೆ ಮೈಸೂರಿನಿಂದ ವಿಶೇಷ ರೈಲಿನಲ್ಲಿ ಹೋಗುವವರಿಗೆ ಅಯೋಧ್ಯೆಯಲ್ಲಿ ವಸತಿ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಸಂಸದ ಪ್ರತಾಪ್ ಸಿಂಹ ಭರವಸೆ ನೀಡಿದರು. ಫೆ.4 ಮತ್ತು 18ರಂದು ಅಯೋಧ್ಯೆಗೆ ರೈಲು ಸಂಚಾರದ ವ್ಯವಸ್ಥೆ ಕಲ್ಪಿಸಲಾಗಿದೆ. ಒಟ್ಟು 22 ಬೋಗಿಗಳಲ್ಲಿ 1,280 ಆಸನದ ವ್ಯವಸ್ಥೆ ಇದ್ದು, ಇನ್ನು ಬುಕಿಂಗ್ ಓಪನ್ ಆಗಿಲ್ಲ. ಈ ಸಂಬಂಧ ತಯಾರಿಗಳು ನಡೆಯುತ್ತಿದ್ದು, ಒಂದೆರಡು ದಿನದಲ್ಲಿ ವಿವರ ಪ್ರಕಟಿಸಲಾಗುವುದು. ಮೈಸೂರಿನಿಂದ ಅಯೋಧ್ಯೆಗೆ ಹೋಗುವವರಿಗೆ ಅಲ್ಲಿ ವಸತಿ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಪ್ರತಾಪ್‌ಸಿಂಹ ತಿಳಿಸಿದರು.

ಕೋಲಾರದಲ್ಲಿ ಶ್ರೀರಾಮನ ಫ್ಲೆಕ್ಸ್ ಹರಿದ ಪ್ರಕರಣಕ್ಕೆ ಪ್ರತಿಕ್ರಿಯೆ ನೀಡಿದ ಪ್ರತಾಪ್ ಸಿಂಹ, ಕಾಂಗ್ರೆಸ್ ಆಡಳಿತಾವಧಿಯಲ್ಲಿ ರಾಮನಿಗೆ ಮನ್ನಣೆ ಇಲ್ಲ ಎಂಬುದು ಸದಾ ಕಾಲದ ಸತ್ಯ. ಕರ್ನಾಟಕದಲ್ಲಿ ರಾಮ ಭಕ್ತರ ಆಶಯಕ್ಕೆ ಪೂರಕವಾದ ಸರ್ಕಾರವಿಲ್ಲ ಎಂಬುದು ಇದರಿಂದ ಅರ್ಥವಾಗುತ್ತದೆ ಎಂದರು.

ಮೈಸೂರಿನಿಂದ ವಿಮಾನಗಳ ಹಾರಾಟ ಸಂಖ್ಯೆ ಹೆಚ್ಚಳ

ಮೈಸೂರು ವಿಮಾನ ನಿಲ್ದಾಣದಿಂದ ವಿಮಾನಗಳ ಹಾರಾಟ ಸಂಖ್ಯೆ ಹೆಚ್ಚಿಸಲಾಗುವುದು ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದರು. ಈಗ ಇಲ್ಲಿಂದ ಹಾರಾಟ ನಡೆಸುತ್ತಿರುವ ವಿಮಾನಗಳ ಸಂಖ್ಯೆ ಕಡಿಮೆ ಆಗುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಮೈಸೂರಿನಿಂದ ಹಾರಾಟ ನಡೆಸುತ್ತಿದ್ದ ವಿಮಾನಗಳ ರಿಪೇರಿ ಕಾರ್ಯ ನಡೆಯುತ್ತಿದೆ. ಹಾಗಾಗಿ ವಿಮಾನಗಳ ಸಂಖ್ಯೆ ಕಡಿಮೆಯಾಗಿದೆ ಎಂದು ಸ್ಪಷ್ಟಪಡಿಸಿದರು.

ಮೈಸೂರಿಂದ ವಿಮಾನ ಹಾರಾಟ ನಡೆಸಲು ಏರ್ ಇಂಡಿಯಾ, ಇಂಡಿಗೊ ಹಾಗೂ ಸ್ಟಾರ್ ಏರ್ ಕಂಪನಿಗಳ ಜೊತೆ ಮಾತುಕತೆ ನಡೆಸಲಾಗುತ್ತಿದೆ. ಈ ಮೂಲಕ ಮುಂದಿನ ದಿನಗಳಲ್ಲಿ ಮೈಸೂರಿನಿಂದ ಹಾರಾಟ ಮಾಡುವ ವಿಮಾನಗಳ ಸಂಖ್ಯೆ ಹೆಚ್ಚಳವಾಗುವುದು ಎಂದು ಪ್ರತಾಪ್ ಸಿಂಹ ಪುನರುಚ್ಚರಿಸಿದರು.

ನಾಳೆಯಿಂದ ಬೆಂಗಳೂರಲ್ಲಿ ಉದ್ಯಮಿ ಒಕ್ಕಲಿಗ ಸಮಾವೇಶ


ಸುದ್ದಿಗೋಷ್ಠಿಯಲ್ಲಿ ರವಿ ಶಂಕರ್ ಮಾತನಾಡಿದರು. ಚಿತ್ರದಲ್ಲಿ ಪಾಲಿಕೆ ಮಾಜಿ ಸದಸ್ಯ ಶಿವ ಕುಮಾರ್, ದೊರೆಸ್ವಾಮಿ, ಸಿದ್ದರಾಜು ಇದ್ದಾರೆ.

ಮೈಸೂರು,ಜ.17(ಜಿಎ)–ಫಸ್ಟ್ ಸರ್ಕಲ್ ಸೊಸೈಟಿಯಿಂದ ಬೆಂಗಳೂರಿನ ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ಜ.19ರಿಂದ 21ರವರೆಗೆ ಉದ್ಯಮಿ ಒಕ್ಕಲಿಗ ಸಮಾವೇಶ ಎಫ್.ಸಿ. ಎಕ್ಸ್ ಪೋ–2024 ಆಯೋಜಿಸಲಾಗಿದೆ ಎಂದು ಸೊಸೈಟಿಯ ಸಮುದಾಯ ವಿಭಾಗದ ಚೇರ್ಮನ್ ರವಿಶಂಕರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾವೇಶವನ್ನು ಜ.19ರಂದು ಬೆಳಗ್ಗೆ 10ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟಿಸುವರು. ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮುಖ್ಯ ಅತಿಥಿಗಳಾಗಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಮಾಜಿ ಕೇಂದ್ರ ಸಚಿವರಾದ ಎಸ್.ಎಂ.ಕೃಷ್ಣ, ಸಮುದಾಯದ ವಿವಿಧ ಕ್ಷೇತ್ರದ ಗಣ್ಯರು ಸೇರಿದಂತೆ 20 ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸುವರು ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರಮುಖರಾದ ಪಾಲಿಕೆ ಮಾಜಿ ಸದಸ್ಯ ಶಿವಕುಮಾರ್, ದೊರೆಸ್ವಾಮಿ, ಸಿದ್ದರಾಜು ಉಪಸ್ಥಿತರಿದ್ದರು.

> “ ನೂರಕ್ಕೂ ಹೆಚ್ಚು ಒಕ್ಕಲಿಗ ಉದ್ದಿಮೆದಾರರು ತಮ್ಮ ಸೇವೆ ಮತ್ತು ಸರಕುಗಳನ್ನು ಸಮಾವೇಶದಲ್ಲಿ ಪ್ರದರ್ಶಿಸಲಿದ್ದಾರೆ. 12 ಉದ್ಯಮ ಕ್ಷೇತ್ರಗಳ ಬಗ್ಗೆ ಚಿಂತನ ಮಂಥನ, ಒಕ್ಕಲಿಗ ಆಹಾರ ಪದ್ಧತಿ ಪರಿಚಯ, ಸಂಸ್ಕೃತಿ ಪರಿಚಯಿಸುವ ದೇವಿ ಮಹಾತ್ಮೆ ಯಕ್ಷಗಾನ, ಕರ್ನಾಟಕ–ತಮಿಳುನಾಡು ಒಕ್ಕಲಿಗ ಉದ್ಯಮಿಗಳ ಸಮನ್ವಯದ ಚರ್ಚೆ ಹಾಗೂ ಗಂಗವಾಡಿ ರಾಜವಂಶದ ಲಾಂಛನ ಪ್ರದರ್ಶನ ಆಯೋಜಿಸಲಾಗಿದೆ. ಒಕ್ಕಲಿಗ ವ್ಯಾಪಾರಿಗಳ ಡಿಜಿಟಲ್ ಮಾರುಕಟ್ಟೆ ಮತ್ತು ಜಾಲತಾಣದ ಆ್ಯಪ್‌ಗಳನ್ನೂ ಬಿಡುಗಡೆ ಮಾಡಲಾಗುವುದು.
>
> –ರವಿಶಂಕರ್

ಜಿಲ್ಲೆಯಲ್ಲಿ ಜೇನು ಕುರುಬ ವಿಶೇಷ ಕರ್ತವ್ಯ ಅಧಿಕಾರಿಗಳ ಕಚೇರಿ ಪುನರಾರಂಭಕ್ಕೆ ಆಗ್ರಹ


ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಜೆ.ಟಿ.ರಾಜಪ್ಪ ಮಾತನಾಡಿದರು. ಚಿತ್ರದಲ್ಲಿ ಸಂಘದ ಪದಾಧಿಕಾರಿಗಳನ್ನು ಕಾಣಬಹುದು.

ಮೈಸೂರು,ಜ.17(ಜಿಎ)–ಜಿಲ್ಲೆಯಲ್ಲಿ ಜೇನು ಕುರುಬ ವಿಶೇಷ ಕರ್ತವ್ಯಾಧಿಕಾರಿಗಳ ಕಚೇರಿ ಪುನರಾರಂಭಿಸಿ, ಸಮುದಾಯಕ್ಕೆ ಸೂಕ್ತ ಸೌಲಭ್ಯ ದೊರಕುವಂತೆ ಕ್ರಮ ಕೈಗೊಳ್ಳಬೇಕು ಎಂದು ಜೇನು ಕುರುಬ ಅಭಿವೃದ್ಧಿ ಸಂಘ ಒತ್ತಾಯಿಸಿದೆ.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಜೆ.ಟಿ.ರಾಜಪ್ಪ ಮಾತನಾಡಿ, 2006ರಲ್ಲಿ ಹುಣಸೂರು ತಾಲೂಕಿನಲ್ಲಿ ಇದ್ದ ಜೇನು ಕುರುಬರ ಕಚೇರಿಯನ್ನು ಸ್ಥಗಿತಗೊಳಿಸಲಾಗಿದೆ. ಸಮುದಾಯಕ್ಕೆ ನೀಡುವ ಪೌಷ್ಟಿಕ ಆಹಾರವೂ ಕಳೆದ 3 ತಿಂಗಳಿಂದ ವಿತರಿಸಿಲ್ಲ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಬಸವಣ್ಣ, ಕಾರ್ಯದರ್ಶಿ ಜೆ.ಟಿ.ಚಂದ್ರು, ಸದಸ್ಯರಾದ ಜಯಪ್ಪ ರವಿ, ಸಿದ್ದು, ಮಾಸ್ತಿ, ತಿಮ್ಮಯ್ಯ, ಲಿಂಗಪ್ಪ ಉಪಸ್ಥಿತರಿದ್ದರು.

> “ ಕಳೆದ ಎರಡು ವರ್ಷಗಳಿಂದ ಜಿಲ್ಲೆಯ ಪರಿಶಿಷ್ಟ ವರ್ಗಗಳ ಸಮಗ್ರ ಯೋಜನೆಗಳ ಬಗ್ಗೆ ಸಮುದಾಯದ ಮುಖಂಡರಿಂದ ಸಮಸ್ಯೆ ಆಲಿಸಲು ಪ್ರಯತ್ನಿಸಿಲ್ಲ. ಯೋಜನೆ ಅಧಿಕಾರಿ ಮುನಿರಾಜು ಸಮುದಾಯದ ಸಮಸ್ಯೆ ಬಗ್ಗೆ ನಿರ್ಲಕ್ಷ್ಯ ತೋರುತ್ತಿದ್ದು, ಈ ಬಗ್ಗೆ ಅಪರ ಜಿಲ್ಲಾಧಿಕಾರಿಗೆ ದೂರು ನೀಡಿದರೂ ಕ್ರಮ ಕೈಗೊಂಡಿಲ್ಲ. ಹೀಗೆಯೇ ಮುಂದುವರೆದರೆ ಉಗ್ರ ಪ್ರತಿಭಟನೆ ಮಾಡಬೇಕಾಗುತ್ತದೆ.
>
> –ಜೆ.ಟಿ.ರಾಜಪ್ಪ


ಅಯೋಧ್ಯೆ ಶ್ರೀ ರಾಮ ದೇವರ ಮಂತ್ರಾಕ್ಷತೆಯನ್ನು ಬಿಜೆಪಿ ಮುಖಂಡ ಎಸ್.ಜಯಪ್ರಕಾಶ್ ರಾಮಾನುಜ ರಸ್ತೆಯ ನಿವಾಸಿಗಳಿಗೆ ಶ್ರೀ ಕರುಮಾರಿಯಮ್ಮ ದೇವಸ್ಥಾನದ ವತಿಯಿಂದ ವಿತರಿಸಿದರು. ರಘುನಾಥ್, ಬಿಜೆಪಿ ಅಧ್ಯಕ್ಷೆ ಶ್ರೀಮತಿ ಮಂಜುಳ, ಟ್ರಸ್ಟ್‌ನ ಕೃಷ್ಣ, ಮಲ್ಲೇಶ್, ಭಜನಾ ಮಂಡಳಿಯ ಗಿರಿಜಾ, ಬಿಜೆಪಿ ಮುಖಂಡರಾದ ಮಹೇಶ್‌ಗೌಡ, ಶ್ರೀನಿವಾಸ್, ವಿಷ್ಣು ಮತ್ತಿತರರು ಇದ್ದಾರೆ.

ಜ.26ಕ್ಕೆ ‘ಕೋಳಿ ಎಸ್ರು’, ‘ಹದಿನೇಳೆಂಟು’ ಚಿತ್ರಗಳ ಬಿಡುಗಡೆ


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಚಂಪಾ ಪಿ.ಶೆಟ್ಟಿ ಮಾತನಾಡಿದರು. ಚಿತ್ರದಲ್ಲಿ ಚಿತ್ರತಂಡವನ್ನು ಕಾಣಬಹುದು.

ಮೈಸೂರು,ಜ.17(ಜಿಎ)–ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಅನೇಕ ಪ್ರಶಸ್ತಿ ಪಡೆದುಕೊಂಡಿರುವ ‘ಕೋಳಿ ಎಸ್ರು’ ಮತ್ತು ‘ಹದಿನೇಳೆಂಟು’ ಚಿತ್ರಗಳು ಜ.26ರಂದು ರಾಜ್ಯಾದ್ಯಂತ ತೆರೆ ಕಾಣಲಿದೆ ಎಂದು ಚಿತ್ರಗಳ ನಿರ್ದೇಶಕರು ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ನಿರ್ದೇಶಕಿ ಚಂಪಾ ಪಿ.ಶೆಟ್ಟಿ ಮಾತನಾಡಿ, ಎರಡೂ ಸಿನಿಮಾಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಸ್ಪರ್ಧೆ, ಚಿತ್ರೋತ್ಸವಗಳಲ್ಲಿ ಮೆಚ್ಚುಗೆ ಗಳಿಸಿದ್ದು, 24ಕ್ಕೂ ಹೆಚ್ಚು ಪ್ರಶಸ್ತಿಗಳನ್ನು ಗಳಿಸಿವೆ. ಕೋಳಿ ಎಸ್ರು ಕಾ.ತ. ಚಿಕ್ಕಣ್ಣ ಅವರ ಕಥೆ ಆಧಾರಿತವಾಗಿದ್ದು, ತಿ.ನರಸೀಪುರ ಸುತ್ತಮುತ್ತ ಚಿತ್ರೀಕರಣ ನಡೆದಿದೆ. ಚಿತ್ರಗಳನ್ನು ಹೆಚ್ಚಿನ ಜನರಿಗೆ ತಲುಪಿಸುವ ಸಲುವಾಗಿ ನಾವು ಎರಡು ತಂಡದವರು ಸೇರಿ ಹೊಸ ಯೋಜನೆ ಹಾಕಿಕೊಂಡಿದ್ದೇವೆ. ಪರಸ್ಪರ.ಲೈವ್ ಎಂಬ ವೆಬ್‌ಸೈಟ್ ಮೂಲಕ ಎರಡು ಚಿತ್ರಗಳ ಟಿಕೆಟ್‌ಗಳನ್ನು ಮಾರಾಟ ಮಾಡಲು ಆರಂಭಿಸಿದ್ದೇವೆ ಎಂದರು.

400 ರೂ. ಪಾವತಿಸಿ ಎರಡು ಚಿತ್ರಗಳ ಒಂದೊಂದು ಟಿಕೆಟ್ ಪಡೆಯಬಹುದು. ಒಂದಕ್ಕಿಂತ ಹೆಚ್ಚು ಟಿಕೆಟ್‌ಗಳನ್ನೂ ಪಡೆಯಬಹುದು ಎಂದು ನಿರ್ದೇಶಕ ಪೃಥ್ವಿ ಕೋಣನೂರು ತಿಳಿಸಿದರು. ಕೋಳಿ ಎಸ್ರು ಚಿತ್ರದಲ್ಲಿ ಅಭಿನಯಿಸಿರುವ ಅಕ್ಷತಾ ಪಾಂಡವಪುರ, ಅಪೇಕ್ಷ ನಾಗರಾಜ್ ಹಾಗೂ ಹದಿನೇಳೆಂಟು ಚಿತ್ರದಲ್ಲಿ ನಟಿಸಿರುವ ನೀರಜ್ ಮ್ಯಾಥ್ಯೂ ತಮ್ಮ ಪಾತ್ರದ ಕುರಿತು ಮಾಹಿತಿ ನೀಡಿದರು.

ನೂತನ ನಿರ್ದೇಶಕರ ಆಯ್ಕೆ

ಮೈಸೂರು,ಜ.17–ಮೈಸೂರಿನ ದಿ ಸಿಟಿಜನ್ಸ್ ಹೌಸ್ ಮಾರ್ಟ್‌ಗೇಜ್ ಮತ್ತು ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿಗೆ 2024ರಿಂದ 2029ನೇ ಸಾಲಿಗೆ ಆಡಳಿತ ಮಂಡಲಿ ನಿರ್ದೇಶಕರನ್ನು ಆಯ್ಕೆ ಮಾಡಲಾಗಿದೆ. ಆರ್.ಜಗದೀಶ್‌ಕುಮಾರ್, ಎ.ಮಹೇಶ್, ಎ.ಮಾಲಾ, ಎಂ.ಕೆ.ಮೋಹನ್‌ರಾವ್, ಎನ್.ಜಿ.ರಮೇಶ್, ಶಿವಶಂಕರ್, ಡಿ.ರೇವತಿ, ಹೆಚ್.ಎಸ್.ಪದ್ಮ, ವಿದ್ಯಾಶ್ರೀ ಮತ್ತು ರಾಧಾ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ನಿಷೇಧಿತ ಪ್ಲಾಸ್ಟಿಕ್ ಮಾರುವ ಅಂಗಡಿ ಲೈಸೆನ್ಸ್ ರದ್ದುಗೊಳಿಸಿ

ಮೈಸೂರು ಜಿಪಂ ಸಭಾಂಗಣದಲ್ಲಿ ಅಧಿಕಾರಿಗಳಿಗೆ ಹಸಿರು ನ್ಯಾಯ ಮಂಡಳಿ ರಾಜ್ಯ ಸಮಿತಿ ಅಧ್ಯಕ್ಷ ನ್ಯಾಯಮೂರ್ತಿ ಸುಭಾಷ್ ಬಿ.ಆಡಿ ಕಟ್ಟುನಿಟ್ಟಿನ ಸೂಚನೆ


ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಘನತ್ಯಾಜ್ಯ ವಿಲೇವಾರಿ ಹಾಗೂ ನಿರ್ವಹಣೆ ಕುರಿತಂತೆ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ರಾಜ್ಯ ಸಮಿತಿ ಅಧ್ಯಕ್ಷರಾದ ನ್ಯಾಯಮೂರ್ತಿ ಸುಭಾಷ್ ಬಿ.ಆಡಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಮೈಸೂರು, ಜ.17(ಆರ್‌ಕೆ)–ನಿಷೇಧಿತ ಪ್ಲಾಸ್ಟಿಕ್ ಪದಾರ್ಥ ಮಾರಾಟ ಮಾಡುವ ಅಂಗಡಿಗಳ ಟ್ರೇಡ್ ಲೈಸೆನ್ಸ್ ರದ್ದುಗೊಳಿಸಿ ಎಂದು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ರಾಜ್ಯ ಸಮಿತಿ ಅಧ್ಯಕ್ಷರಾದ ನ್ಯಾಯಮೂರ್ತಿ ಸುಭಾಷ್ ಬಿ.ಆಡಿ ಅವರು ಇಂದಿಲ್ಲಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಘನತ್ಯಾಜ್ಯ ವಿಲೇವಾರಿ ಹಾಗೂ ನಿರ್ವಹಣೆ ಕುರಿತಂತೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಪ್ಲಾಸ್ಟಿಕ್ ಬಳಕೆ ನಿಷೇಧಿಸಲಾಗಿದ್ದು, ನಿಯಮ ಉಲ್ಲಂಘಿಸಿ ಪ್ಲಾಸ್ಟಿಕ್ ದಾಸ್ತಾನು, ಮಾರಾಟ ಮಾಡುವವರ ವಿರುದ್ಧವಷ್ಟೇ ಅಲ್ಲದೇ ಬಳಕೆ ಮಾಡುವವರ ವಿರುದ್ಧವೂ ಕ್ರಮ ವಹಿಸಬೇಕು ಎಂದು ಸೂಚಿಸಿದರು.

ಆರೋಗ್ಯಾಧಿಕಾರಿಗಳು ಪೊಲೀಸ್ ಸಹಾಯ ಪಡೆದು ಕಾರ್ಯಾಚರಣೆ ನಡೆಸಿ ಪರಿಶೀಲಿಸಬೇಕು. ಪ್ಲಾಸ್ಟಿಕ್ ಬಳಕೆ, ಮಾರಾಟ ಮಾಡದಂತೆ ಸಾಕಷ್ಟು ಜಾಗೃತಿ ಮೂಡಿಸಿದರೂ ನಿರ್ಲಕ್ಷಿಸುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಅನಿವಾರ್ಯ ಎಂದ ನ್ಯಾ. ಸುಭಾಷ್ ಆಡಿ ಅವರು, ಉತ್ಪತ್ತಿಯಾಗುವ ತ್ಯಾಜ್ಯ ವಿಲೇವಾರಿ, ಮರು ಬಳಕೆ, ವೈಜ್ಞಾನಿಕ ರೀತಿಯಲ್ಲಿ ನಿರ್ವಹಣೆ ಮಾಡುವ ಮೂಲಕ ಸ್ವಚ್ಛತೆ ಕಾಪಾಡುವಂತೆ ಸೂಚನೆ ನೀಡಿದರು.

ಒಣ ಮತ್ತು ಹಸಿ ಕಸ ಬೇರ್ಪಡಿಸಿ ನೀಡಬೇಕೆಂದು ಜನರಿಗೆ ಸಾಕಷ್ಟು ತಿಳುವಳಿಕೆ ನೀಡಬೇಕು. ಬೀದಿಬದಿ ವ್ಯಾಪಾರಿಗಳು ಸ್ವಚ್ಛತೆ ಬಗ್ಗೆ ಕಾಳಜಿ ವಹಿಸುವಂತೆ ಸೂಚನೆ ನೀಡಿ, ಆಗಿಂದಾಗ್ಗೆ ಸ್ಥಳಕ್ಕೆ ಭೇಟಿ ನೀಡಿ ಮೇಲ್ವಿಚಾರಣೆ ಮಾಡುವ ಮೂಲಕ ನೈರ್ಮಲ್ಯ ಕಾಪಾಡಬೇಕೆಂದು ಇದೇ ಸಂದರ್ಭ ಸಲಹೆ ನೀಡಿದರು.

ಪ್ರವಾಸಿಗರು ಭೇಟಿ ನೀಡುವ ಚಾಮುಂಡಿಬೆಟ್ಟದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಿ, ಹಳೇ ಅಂಗಡಿಗಳನ್ನು ಹೊಸದಾಗಿ ನಿರ್ಮಿಸಿರುವ ಮಳಿಗೆಗಳಿಗೆ ಸ್ಥಳಾಂತರಿಸಬೇಕು. ನಿಯಮ ಉಲ್ಲಂಘಿಸಿ ಅಂಗಡಿ ನಡೆಸುತ್ತಿದ್ದರೂ ಗ್ರಾಮ ಪಂಚಾಯ್ತಿ ಅಧಿಕಾರಿಗಳು ಸುಮ್ಮನಿರುವುದೇಕೆ? ಎಂದು ಇದೇ ವೇಳೆ ಸುಭಾಷ್ ಆಡಿ ಅಧಿಕಾರಿಗಳನ್ನು ಪ್ರಶ್ನಿಸಿದರು.

ಮೈಸೂರು ನಗರದಲ್ಲಿ ಮನೆ ಮನೆಯಿಂದ ಸಂಗ್ರಹಿಸುವಾಗಲೇ ಒಣ ಮತ್ತು ಹಸಿ ಕಸ ಬೇರ್ಪಡಿಸಲಾಗುತ್ತಿದ್ದು, ವೈಜ್ಞಾನಿಕವಾಗಿ ವಿಲೇವಾರಿ ಮಾಡುತ್ತಿದ್ದೇವೆ. ಮೂರು ಕಡೆ ಸಂಗ್ರಹ, ಮರು ಬಳಕೆ ಘಟಕಗಳಲ್ಲಿ ಸೂಕ್ತ ನಿರ್ವಹಣೆ ಮಾಡುತ್ತಿದ್ದೇವೆ ಎಂದು ಮೈಸೂರು ಪಾಲಿಕೆ ಕಮಿಷ್ನರ್ ಅಶಾದ್ ಉರ್ ರಹಮಾನ್ ಷರೀಫ್ ಅವರು ಸುಭಾಷ್ ಬಿ.ಆಡಿ ಅವರಿಗೆ ವಿವರಿಸಿದರು.

> “ ಅಪಾಯಕಾರಿ ರಾಸಾಯನಿಕಗಳನ್ನು ಘನ ತ್ಯಾಜ್ಯದಿಂದ ಬೇರ್ಪಡಿಸಿ ಪ್ರತ್ಯೇಕವಾಗಿ ವಿಲೇವಾರಿ ಮಾಡಿ ಮಳೆ ನೀರು, ಚರಂಡಿ, ಒಳಚರಂಡಿ, ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಘಟಕದಂತಹ ಮೂಲ ಸೌಲಭ್ಯ ಕಲ್ಪಿಸದ ವಸತಿ ಬಡಾವಣೆಗಳಲ್ಲಿ ನಿವೇಶನ ಬಿಡುಗಡೆ ಮಾಡಬಾರದು. ನಕ್ಷೆಗೆ ಅನುಮೋದನೆ ನೀಡುವಾಗಲೇ ಪ್ಲಾನಿಂಗ್ ಅಥಾರಿಟಿ ಅಧಿಕಾರಿಗಳು ಈ ಷರತ್ತುಗಳನ್ನು ವಿಧಿಸಬೇಕು.
>
> –ಸುಭಾಷ್ ಬಿ.ಆಡಿ


ಮೈಸೂರು ಬಿಜೆಪಿ ನಗರಾಧ್ಯಕ್ಷರಾಗಿ ಆಯ್ಕೆಯಾದ ಮಾಜಿ ಶಾಸಕ ಎಲ್.ನಾಗೇಂದ್ರ ಅವರನ್ನು ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಮುಖಂಡರಾದ ಡಿ.ಮಹೇಶ್ ನಾಯಕ, ಗಿರಿಧರ್, ಅನಿಲ್, ಕಾರ್ಯಕರ್ತರು ಅಭಿನಂದಿಸಿದರು.


ಮೈಸೂರು ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಆದಿಚುಂಚನಗಿರಿ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು.

ಜ.20ರಂದು ಜೇನು ಕೃಷಿ ತರಬೇತಿ

ಮೈಸೂರು, ಜ.17– ತೋಟಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್, ಮೈಸೂರು ತಾಲೂಕು ವತಿಯಿಂದ ಜ.20ರಂದು ಜೇನು ಕೃಷಿ ತರಬೇತಿ ಕಾರ್ಯಕ್ರಮವನ್ನು ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಹತ್ತಿರ ಕರ್ಜನ್ ಪಾರ್ಕ್‌ನ ಡಾ.ಎಂ.ಹೆಚ್.ಮರೀಗೌಡ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ವಿಚಾರ ಸಂಕಿರಣದಲ್ಲಿ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಸದುಪಯೋಗವನ್ನು ಪಡೆದುಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ತೋಟಗಾರಿಕೆ ಅಧಿಕಾರಿ ಕಸಬ ಹೋಬಳಿ ದೂ.ಸಂ. 9901387284, ಸಹಾಯಕ ತೋಟಗಾರಿಕೆ ಅಧಿಕಾರಿ ವರುಣ ಹೋಬಳಿ ದೂ.ಸಂ. 7259592484, ಸಹಾಯಕ ತೋಟಗಾರಿಕೆ ಅಧಿಕಾರಿ ಜಯಪುರ ಹೋಬಳಿ ದೂ.ಸಂ.8904673607, ಸಹಾಯಕ ತೋಟಗಾರಿಕೆ ಅಧಿಕಾರಿ ಇಲವಾಲ ಹೋಬಳಿ ದೂ.ಸಂ. 9986086262 ಸಂಪರ್ಕಿಸಿ ಹೆಸರನ್ನು ನೋಂದಾಯಿಸಿಕೊಳ್ಳಬಹುದು.


ಮೈಸೂರಿನ ವಿಕ್ರಾಂತ್ ಟೈರ್ಸ್‌ನ ವಿಕ್ರಾಂತ್ ಬಸವ ಬಳಗದ 2024ರ ನೂತನ ವರ್ಷದ ಕ್ಯಾಲೆಂಡರ್ ಅನ್ನು ಕುದೇರು ಮಠದ ಶ್ರೀಗಳು ಬಿಡುಗಡೆ ಮಾಡಿದರು. ಈ ವೇಳೆ ಸಂಘದ ಅಧ್ಯಕ್ಷ, ಪದಾಧಿಕಾರಿಗಳು, ಸದಸ್ಯರು ಹಾಜರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು, ಜ.17– ಹೂಟಗಳ್ಳಿ ಉಪವಿಭಾಗದ ವ್ಯಾಪ್ತಿಯಲ್ಲಿ ರಸ್ತೆ ಕಾಮಗಾರಿ ನಿಮಿತ್ತ ಜ.18ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಮರಟಿಕ್ಯಾತನಹಳ್ಳಿ ಮುಖ್ಯರಸ್ತೆ, ಗ್ರಾಮ, ಸಿಲ್ವರ್ ಸ್ಪ್ರಿಂಗ್ ಬಡಾವಣೆ, ಸುವರ್ಣ ನಗರ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ನಿಲುಗಡೆಯಾಗಲಿದ್ದು, ಸಾರ್ವಜನಿಕರು ಹಾಗೂ ಕೈಗಾರಿಕೋದ್ಯಮಿಗಳು ಸಹಕರಿಸಬೇಕೆಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಉಚಿತ ಮೂತ್ರ ಜನಕಾಂಗ ರೋಗ ತಪಾಸಣಾ ಶಿಬಿರ

ಮೈಸೂರು, ಜ.17–ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಜ.24ರವರೆಗೆ ಉಚಿತ ಮೂತ್ರಜನಕಾಂಗ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಮೂತ್ರಜನಕಾಂಗಗಳಲ್ಲಿ ಕಲ್ಲು, ಮೂತ್ರಜನಕಾಂಗಗಳ ವಿಫಲತೆ, ಮೂತ್ರ ತೊಂದರೆ, ಸಕ್ಕರೆಕಾಯಿಲೆ ಮತ್ತು ಏರು ರಕ್ತದೊತ್ತಡ ಮುಂತಾದ ಸಮಸ್ಯೆಗಳಿರುವವರು ಕೂಡಲೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ 0821–2533600, 9986399862 ಸಂಪರ್ಕಿಸಬಹುದು.

ಜಿ.ವಿನಯಶ್ರೀಗೆ ಪಿಎಚ್.ಡಿ ಪದವಿ



ಮೈಸೂರು,ಜ.17–ಡಾ.ತುಮ್ ಕುಂಟಿ ದೇವಿದಾಸ್ ಅವರ ಮಾರ್ಗದರ್ಶನದಲ್ಲಿ ಜಿ. ವಿನಯಶ್ರೀ ಅವರು ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಗುಲ್ಬರ್ಗಾ ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಅಯೋಧ್ಯೆ ರಾಮಲಲ್ಲಾ ಮೂರ್ತಿ ನಿರ್ಮಾತೃ ಅರುಣ್ ಯೋಗಿರಾಜ್ ಕುಟುಂಬಕ್ಕೆ ಮೈಸೂರು ನಗರ, ಜಿಲ್ಲಾ ವಿಶ್ವಕರ್ಮ ಸಮಾಜದಿಂದ ಅಭಿನಂದನೆ



ಮೈಸೂರು ನಗರ, ಜಿಲ್ಲಾ ವಿಶ್ವಕರ್ಮ ಸಮಾಜದ ಪದಾಧಿಕಾರಿಗಳು ಅರುಣ್ ಯೋಗಿರಾಜ್ ಅವರ ತಾಯಿ ಸುಸ್ವತಮ್ಮ, ಸಹೋದರ ಸೂರ್ಯಪ್ರಕಾಶ್, ಅರುಣ್ ಧರ್ಮಪತ್ನಿ ವಿಜೇತ ಅರುಣ್, ಸಹೋದರಿ ಚೇತನ ಸುನಿಲ್ ಅವರನ್ನು ಆತ್ಮೀಯವಾಗಿ ಅಭಿನಂದಿಸಿದರು.

ಮೈಸೂರು,ಜ.17–ಅಯೋಧ್ಯೆ ರಾಮಲಲ್ಲಾ ಮೂರ್ತಿ ನಿರ್ಮಾತೃ ಅರುಣ್ ಯೋಗಿರಾಜ್ ಅವರ ಮೈಸೂರಿನ ಮನೆಗೆ ಬುಧವಾರ ಭೇಟಿ ನೀಡಿದ ಮೈಸೂರು ನಗರ ಮತ್ತು ಜಿಲ್ಲಾ ವಿಶ್ವಕರ್ಮ ಸಮಾಜದ ಪದಾಧಿಕಾರಿಗಳು ಅರುಣ್ ಯೋಗಿರಾಜ್ ಅವರ ತಾಯಿ ಶ್ರೀಮತಿ ಸರಸ್ವತಮ್ಮ, ಸಹೋದರ ಸೂರ್ಯಪ್ರಕಾಶ್ ಹಾಗೂ ಅರುಣ್ ಧರ್ಮಪತ್ನಿ ಶ್ರೀಮತಿ ವಿಜೇತ ಅರುಣ್, ಸಹೋದರಿ ಶ್ರೀಮತಿ ಚೇತನ ಸುನಿಲ್ ಅವರನ್ನು ಅಭಿನಂದಿಸಿದರು.

ಈ ಸಂದರ್ಭದಲ್ಲಿ ನಗರಪಾಲಿಕೆ ಮಾಜಿ ಸದಸ್ಯರಾದ ರಮೇಶ್, ಶ್ರೀಮತಿ ಛಾಯಾದೇವಿ, ಮೈಸೂರು ಜಿಲ್ಲಾ ವಿಶ್ವಕರ್ಮ ಒಕ್ಕೂಟದ ಅಧ್ಯಕ್ಷ ಹುಚ್ಚಪ್ಪಚಾರ್, ಜಿಲ್ಲಾ ವಿಶ್ವಕರ್ಮ ಸಂಘದ ಅಧ್ಯಕ್ಷ ರಿಷಿ ವಿಶ್ವಕರ್ಮ, ಪ್ರಧಾನ ಕಾರ್ಯದರ್ಶಿ ಸಿ.ಟಿ.ಆಚಾರ್ಯ, ಉಪಾಧ್ಯಕ್ಷ ಲೋಹಿತೇಶಚಾರ್, ಬಡಗಿ ಸಂಘದ ಅಧ್ಯಕ್ಷ ಎಂ.ಮೊಗಣ್ಣಚಾರ್, ವಿಶ್ವಕರ್ಮ ವಿದ್ಯಾವರ್ಧಕ ಸಂಘದ ಗೌರವಾಧ್ಯಕ್ಷ ಟಿ.ನಾಗರಾಜ್, ನಿರ್ದೇಶಕರುಗಳಾದ ಜಯಕುಮಾರ್, ಬಿಲ್ಡರ್ ವೆಂಕಟೇಶ್, ಅಮರಶಿಲ್ಪಿ ವೇದಿಕೆ ಅಧ್ಯಕ್ಷ ನಾಗರಾಜ್, ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಲೋಕೇಶ್, ಶಿಲ್ಪಿಗಳಾದ ಮುರಳೀಧರ ಸಿದ್ದಲಿಂಗಪುರ, ಚಿನ್ನಬೆಳ್ಳಿ ಸಂಘದ ಅಧ್ಯಕ್ಷ ಸುರೇಶ್ ಗೋಲ್ಡ್, ಕಾಳಿಕಾಂಬ ಕಮ್ಮಟೇಶ್ವರಸ್ವಾಮಿ ದೇವಸ್ಥಾನದ ವಸಂತಕುಮಾರ್, ಹೆಬ್ಬಾಳ್‌ನ ಹಿರಿಯ ಮುಖಂಡರಾದ ಈಶ್ವರಚಾರ್, ಅರ್ಕೇಶ್ವರಚಾರ್, ಮಂಜು, ಪುಟ್ಟರಾಜು, ಹಂಚ್ಯಾ ಪುಟ್ಟಸೋಮಾಚಾರ್, ನೀಲಕಂಠ, ಚಿಕ್ಕಾಡೆ ಶಿವು, ಕೃಷ್ಣಪ್ಪ, ಶ್ರೀ ಶನೇಶ್ವರಸ್ವಾಮಿ ಭಕ್ತ ಮಂಡಳಿಯ ನಿರ್ದೇಶಕರಾದ ಆನಂದ್, ವಿವೇಕ, ಉಮೇಶ, ಶ್ರೀಧರ್, ಮಹೇಶ, ಯೋಗಾನಂದ, ಚೆಲುವರಾಜು, ನಾರಾಯಣ, ಮಹಿಳಾ ಮುಖಂಡರಾದ ಶೀಮತಿ ನಾಗಮ್ಮ, ಶ್ರೀಮತಿ ಪುಷ್ಪ, ಶ್ರೀಮತಿ ಶ್ರೀಲಕ್ಷ್ಮಿ ಇನ್ನಿತರರಿದ್ದರು.

ಈ ವೇಳೆ ಮಾತನಾಡಿದ ಮುಖಂಡರು, ಅಯೋಧ್ಯೆಯ ರಾಮಮಂದಿರದ ಗರ್ಭಗುಡಿಯಲ್ಲಿ ಪ್ರತಿಷ್ಠಾಪನೆ ಮಾಡಲು ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ವಿಶ್ವಕರ್ಮ ಅವರು ಕೆತ್ತನೆ ಮಾಡಿರುವ ರಾಮಲಲ್ಲಾ ಮೂರ್ತಿಯನ್ನು ಆಯ್ಕೆ ಮಾಡಿರುವುದು ದೇಶಾದ್ಯಂತ ವಿಶ್ವಕರ್ಮ ಸಮಾಜದ ಶಿಲ್ಪಕಲೆಗೆ ಸಂದ ಗೌರವವಾಗಿದೆ. ಈ ಮೂರ್ತಿಯನ್ನು ಆಯ್ಕೆ ಮಾಡಿದ ಶ್ರೀ ರಾಮ ಜನ್ಮ ಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಎಲ್ಲಾ ಸದಸ್ಯರು, ಈ ಮಹತ್ಕಾರ್ಯಕ್ಕೆ ಕಾರಣಕರ್ತರಾದ ಪ್ರಧಾನಿ ನರೇಂದ್ರ ಮೋದಿ, ಅರುಣ್ ಯೋಗಿರಾಜ್ ಅವರ ಶಿಲ್ಪಕಲೆಗೆ ಪ್ರೋತ್ಸಾಹಿಸಿ ಕೇದಾರನಾಥದಲ್ಲಿ ಶ್ರೀ ಶಂಕರಾಚಾರ್ಯರ ಪ್ರತಿಮೆ ನಿರ್ಮಾಣ, ಇಂಡಿಯಾ ಗೇಟ್ ಬಳಿ ನೇತಾಜಿ ಸುಭಾಷ್ ಚಂದ್ರಬೋಸ್ ಪುತ್ಥಳಿ ನಿರ್ಮಾಣ ಮಾಡಲು ಅವಕಾಶ ಮಾಡಿಕೊಟ್ಟು, ಅಯೋಧ್ಯೆಯಲ್ಲಿಯೂ ರಾಮಲಲ್ಲಾ ಮೂರ್ತಿಯ ಕೆತ್ತನೆಗೆ ಅವಕಾಶ ಮಾಡಿದ ಸಂಸದ ಪ್ರತಾಪ್ ಸಿಂಹರವರಿಗೆ ಸಮಸ್ತ ವಿಶ್ವಕರ್ಮ ಸಮಾಜದ ಪರವಾಗಿ ಧನ್ಯವಾದಗಳನ್ನು ಸಲ್ಲಿಸುತ್ತಿರುವುದಾಗಿ ಹೇಳಿದರು. ಅಯೋಧ್ಯದಲ್ಲಿ ರಾಮಲಲ್ಲಾ ಮೂರ್ತಿ ಅರಳಿರುವುದು ಹೆಚ್.ಡಿ.ಕೋಟೆ ತಾಲೂಕಿನ ಕೃಷ್ಣ ಶಿಲೆ ಎಂಬ ಸಂಗತಿ ಪ್ರಭು ಶ್ರೀ ರಾಮಮಂದಿರದ ಜತೆ ಕನ್ನಡಿಗರ ಶ್ರದ್ಧೆ ಗಾಢಗೊಳಿಸಿದೆ ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.1.2024 ಗುರುವಾರ, ಮಳೆ ನಕ್ಷತ್ರ: ಉತ್ತರಾಷಾಢ 11.1.2024 ರಿಂದ 23.01.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಉಭಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯುವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ– ಮೈಸೂರಿನ ಎನ್. ರವಿಶಂಕರ್, 6.40 ಪದ ಸಂಸ್ಕೃತಿ, ಪ್ರಸ್ತುತಿ– ಡಾ.ಹೆಚ್.ವಿ. ನಾಗರಾಜರಾವ್, 10.00 ಮಾರುತಿ ಪ್ರಸಾದ್ ಎಸ್.ಆರ್. –ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆ–ಆರ್.ಮಹೇಶ್, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತಿ–ವನ್ಯಜೀವಿ ಚರ್ಮ ಪ್ರಸಾದನ ಕಲೆ ಬಗ್ಗೆ ಈ ಕಲೆಯಲ್ಲಿ ತೊಡಗಿಸಿಕೊಂಡಿರುವ ಕೆ.ಮಂಜುಳಾ ಹಾಗೂ ಬಿ.ಆರ್. ಮನೋಹರ್ ಅವರೊಡನೆ ಸಂದರ್ಶನ. ಸಂದರ್ಶಕರು– ಜಿ. ಶಾಂತಕುಮಾರ್, 6.50 ಕೃಷಿರಂಗ–ಮೌಲ್ಯವರ್ಧನೆಯ ಮಹತ್ವ ಕುರಿತು ಸಂವಾದ. ಭಾಗವಹಿಸುತ್ತಾರೆ ಬಿ.ಇ. ನಿಶ್ಚಿತ ಹಾಗೂ ಕೆ. ಮಹೇಶ್ವರಿ. ನಡೆಸಿಕೊಡುತ್ತಾರೆ ಎನ್.ಕೇಶವಮೂರ್ತಿ, 8.00 ಯುವವಾಣಿ–ಹಲೋ ಯುವವಾಣಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಕುರಿತು ಸಾಮಾನ್ಯ ಜ್ಞಾನ ರಸಪ್ರಶ್ನೆ ಕಾರ್ಯಕ್ರಮ. ನಡೆಸಿಕೊಡುತ್ತಾರೆ ನಿವೇದಿತಾ ಎಚ್., 10.00 ಪಶುಸಂಪತ್ತು ಮಾಲಿಕೆಯಲ್ಲಿ ನಾಟಕ “ಆಶಾ ಕಿರಣ” ರಚನೆ–ಡಾ.ವಿ.ಚಂದ್ರಶೇಖರಮೂರ್ತಿ, ನಿರ್ದೇಶನ ಹಾಗೂ ನಿರ್ವಹಣ–ಪ್ರಭುಸ್ವಾಮಿ ಮಳಿಮಠ, 10.30 ಸವಿನೆನಪು

- **ಶ್ರೀರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಅಯೋಧ್ಯೆಯಲ್ಲಿ ಶ್ರೀರಾಮ ದೇವರ ಪ್ರತಿಷ್ಠಾಪನೆ ಅಂಗವಾಗಿ ಶ್ರೀರಾಮತಾರಕ ಜಪಯಜ್ಞ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ, ಬೆಳಗ್ಗೆ 7 ಗಂಟೆಗೆ.
- **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.
- **ನೆಹರೂ ಯುವ ಕೇಂದ್ರ, ಮೈಸೂರು ನಗರ ಸಂಚಾರ ಪೊಲೀಸ್, ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್:** ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ, ಉದ್ಘಾಟನೆ: ಸಹಾಯಕ ಪೊಲೀಸ್ ಆಯುಕ್ತ ಹೆಚ್.ಪರಶುರಾಮಪ್ಪ, ಅಧ್ಯಕ್ಷತೆ: ಸಿಪಿಸಿ ಪಾಲಿಟೆಕ್ನಿಕ್ ಪ್ರಾಂಶುಪಾಲ ಪ್ರಕಾಶ್, ಸ್ಥಳ: ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್, ಬೆಳಗ್ಗೆ 10ಕ್ಕೆ.
- **ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ:** ಮನೆ ಮನೆಗೆ ಅಯೋಧ್ಯೆ ಶ್ರೀರಾಮ ಭಾವಚಿತ್ರ ಸಮರ್ಪಣೆ, ಭಾಗವಹಿಸುವವರು: ನಗರ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಹಿರಿಯ ವಿಪ್ರ ಮುಖಂಡ ಡಾ.ಕೆ.ರಘುರಾಂ ವಾಜಪೇಯಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್, ಸತ್ಯನಾರಾಯಣ, ಸ್ಥಳ: ಕೃಷ್ಣಮೂರ್ತಿಪುರಂ ಬಡಾವಣೆಯ ಗುಬ್ಬಚ್ಚಿ ಶಾಲೆ ಮುಂಭಾಗದಿಂದ, ಬೆಳಗ್ಗೆ 10ಕ್ಕೆ.
- **ಬೀ9 :** ಫಾರ್ಮರ್ಸ್ ಬೀಕೀಪಿಂಗ್ ಅಕಾಡೆಮಿ ಅಂಡ್ ಟ್ರೈನಿಂಗ್ ಸೆಂಟರ್ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು: ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಕಾರ್ಮಿಕ ಸಚಿವ ಹಾಗೂ ಧಾರವಾಡ ಜಿಲ್ಲೆ ಉಸ್ತುವಾರಿ ಸಚಿವ ಸಂತೋಷ್ ಎಸ್.ಲಾಡ್, ಶಾಸಕರಾದ ಕೆ.ಹರೀಶ್‌ಗೌಡ, ಡಿ.ರವಿಶಂಕರ್, ಅನಿಲ್ ಚಿಕ್ಕಮಾದು, ದರ್ಶನ್ ಧ್ರುವನಾರಾಯಣ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಶ್ರೀಮತಿ ಅಶ್ವಿನಿ ಪುನೀತ್ ರಾಜ್‌ಕುಮಾರ್, ಸ್ಥಳ: ಪ್ಲಾಟ್ 49/ಬಿ, ಬ್ಲಾಕ್ 4, ರಿಂಗ್ ರಸ್ತೆ, ಮೀನಾಕುಂಟೆ, ಹೆಬ್ಬಾಳು, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 11.30ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಅತಿಥಿ ಉಪನ್ಯಾಸಕ ಡಾ.ರವಿಚಂದ್ರ ಅವರಿಂದ ಭಾರತದ ಸಂವಿಧಾನ ಮತ್ತು ಮೂಲಭೂತ ಹಕ್ಕುಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ: ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಕುವೆಂಪುನಗರದ ನಿಲಯಪಾಲಕ ರಾಮಚಂದ್ರ, ಸ್ಥಳ: ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ಕುವೆಂಪುನಗರ, ಸಂಜೆ 6ಕ್ಕೆ.
- **ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ:** ಅಯೋಧ್ಯೆಯಲ್ಲಿ ಶ್ರೀರಾಮಮಂದಿರ ಉದ್ಘಾಟನಾ ಪರ್ವಕಾಲದ ನಿಮಿತ್ತ ಸಮಗ್ರ ರಾಮಾಯಣ ಪ್ರವಚನ ಮಾಲಿಕೆ, ಪಂಡಿತ್ ಶ್ರೀ ಹರೀನಾಚಾರ್ಯ ಸಂಡೂರರಿಂದ ಅರಣ್ಯಕಾಂಡ ಕುರಿತು ಉಪನ್ಯಾಸ, ಸ್ಥಳ: ಶ್ರೀ ಉತ್ತರಾದಿ ಮಠ, ಸಂಜೆ 6ರಿಂದ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಚಿನ್ಮಯ ಮಿಷನ್ :** ಪಂಡಿತ್ ಕೃಷ್ಣರಾವ್ ಪ್ರಕಾಶ್ ಅವರಿಂದ ಶ್ರೀಮದ್ ಭಾಗವತ–11ನೇ ಸ್ಕಂದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ

ಅಧಿಕಾರಿಗಳಿಗೆ ಗಂಟೆಗಟ್ಟಲೆ ಪಾಠ ಮಾಡಿದ ಕಂದಾಯ ಸಚಿವ ಕೃಷ್ಣ ಭೈರೇಗೌಡ

● ಸಚಿವರ ಕಣ್ಣಿಗೆ ಕಟ್ಟಿದ ಅಧಿಕಾರಿಗಳ ನಿರ್ಲಕ್ಷತೆ; ಕರ್ತವ್ಯದಲ್ಲಿ ವಿಳಂಬ ಧೋರಣೆ ● ಮುಖ್ಯಮಂತ್ರಿ ಜನತಾ ದರ್ಶನದಲ್ಲಿ ಅಧಿಕ ದೂರು ಕಂದಾಯ ಇಲಾಖೆಗೆ ಸಂಬಂಧಿಸಿದವು ● ನಾಗರಿಕರ ತೆರಿಗೆ ಹಣದಲ್ಲಿ ಬದುಕುವ ನಾವು-ನೀವು ಅವರ ಕೆಲಸ ಮಾಡದಿದ್ದರೆ ಒಳ್ಳೆಯದಾಗಲ್ಲ

ಮೈಸೂರು, ಜ.17(ಎಂಕೆ)– ರೈತರಿಗೆ ಬರ ಪರಿಹಾರ ನೀಡುವುದಕ್ಕಿಂತ ಮುಖ್ಯವಾದ ಬೇರೆ ಕೆಲಸ ಇದೆಯಾ? 'ಫ್ರೂಟ್ಸ್' ತಂತ್ರಾಂಶ ನವೀಕರಿಸಲಾಗಿದೆಯೇ? ಹೈಕೋರ್ಟ್ ಕೇಸ್‌ಗಳ ಬಗ್ಗೆ ಇಷ್ಟು ತಾತ್ಸಾರವೇಕೆ? ಇ–ಆಫೀಸ್ ಅನುಷ್ಠಾನ ಮಾಡಿಕೊಂಡಿಲ್ಲವೇಕೆ? ಸರ್ವೆ ವಿಳಂಬವಾಗುತ್ತಿರುವುದೇಕೆ? ಸಾಲ ವಸೂಲಿ ಮಾಡಲು ನಿಮಗೆ ಆಸಕ್ತಿ ಇಲ್ಲವೇ? ಕಂದಾಯ ಗ್ರಾಮಗಳು ಎಷ್ಟಾಗಿವೆ? ಹೀಗೆ ಪ್ರಶ್ನೆಗಳ ಸುರಿಮಳೆಗೈದ ಕಂದಾಯ ಸಚಿವ ಕೃಷ್ಣ ಭೈರೇಗೌಡರು, ಸರ್ಕಾರದ ಸೌಲಭ್ಯ ತಲುಪಿಸುವಲ್ಲಿ ನಮ್ಮ ಜವಾಬ್ದಾರಿ ಹೆಚ್ಚಿರುತ್ತದೆ, ಒಗ್ಗಟಿನಿಂದ ಕಷ್ಟಪಟ್ಟು ಕೆಲಸ ಮಾಡಿದರಷ್ಟೇ ಕಂದಾಯ ಇಲಾಖೆಗೆ, ಸರ್ಕಾರಕ್ಕೆ ಒಳ್ಳೆ ಹೆಸರು ಬರುವುದು ಎಂದು ಅಧಿಕಾರಿಗಳಿಗೆ ಕರ್ತವ್ಯ ಪಾಠ ಮಾಡಿದರು.



ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಕಂದಾಯ ಸಚಿವ ಕೃಷ್ಣಭೈರೇಗೌಡರು ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಶಾಸಕರಾದ ಜಿ.ಟಿ. ದೇವೇಗೌಡ, ಜಿ.ಡಿ.ಹರೀಶ್‌ಗೌಡ, ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಪ್ರಾದೇಶಿಕ ಆಯುಕ್ತ ಜೆ.ಸಿ.ಪ್ರಕಾಶ್, ಡಿಸಿ ಡಾ.ರಾಜೇಂದ್ರ ಇದ್ದರು.

ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಬುಧವಾರ ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಸಚಿವರು, ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರಲ್ಲದೆ ಜವಾಬ್ದಾರಿ ಅರಿತು ಕೆಲಸ ಮಾಡುವಂತೆ ತಾಕೀತು ಮಾಡಿದರು. ಬರ ಪರಿಹಾರ ಹಣದ ದುರ್ಬಳಕೆ ತಡೆಯುವ ಹಾಗೂ ರೈತರಿಗೆ ಶೀಘ್ರ ಪರಿಹಾರ ನೀಡುವ ಸಲುವಾಗಿ ರೈತರ ಜಮೀನಿನ ವಿಸ್ತೀರ್ಣದ ಮಾಹಿತಿ ಸಂಗಹಿಸುವ 'ಫ್ರೂಟ್ಸ್' ತಂತ್ರಾಂಶವನ್ನು ನವೀಕರಿಸುವಂತೆ ಆದೇಶಿಸಿ ಹಲವು ತಿಂಗಳಾಗಿವೆ. ಆದರೂ, ಮೈಸೂರಿನಲ್ಲಿ 'ಫ್ರೂಟ್ಸ್' ತಂತ್ರಾಂಶ ನವೀಕರಣ ಶೇ.75ರಷ್ಟು ಮೀರಿಲ್ಲ ಎಂದು ಅಸಮಾಧಾನ ಹೊರಹಾಕಿದರು.

ಬರಗಾಲದಿಂದ ರೈತರು ಸಂಕಷ್ಟಕ್ಕೀಡಾಗಿದ್ದಾರೆ. ಪರಿಹಾರ ಕೇಳಿ ಕೇಂದ್ರಕ್ಕೆ ಮನವಿ ಸಲ್ಲಿಸಿದ್ದು, ಅದರಂತೆ ಕೇಂದ್ರ ತಂಡವೂ ರಾಜ್ಯಕ್ಕೆ ಆಗಮಿಸಿ ಬರ ಅಧ್ಯಯನ ನಡೆಸಿದೆ. ಆದರೆ ಇಂದಿಗೂ ಕೇಂದ್ರದಿಂದ ಪರಿಹಾರ ಹಣ ಬಂದಿಲ್ಲ. ಹೀಗಾಗಿ ಮೊದಲ ಕಂತಿನ ಹಣವನ್ನು ರಾಜ್ಯ ಸರ್ಕಾರವೇ ಭರಿಸಲು ನಿರ್ಧರಿಸಿದೆ. ಆದರೆ, 'ಫ್ರೂಟ್ಸ್' ತಂತ್ರಾಂಶ ನವೀಕರಿಸದೆ ಅಧಿಕಾರಿಗಳು ಅಸಡ್ಡೆ ತೋರುವುದು ಸರಿಯಲ್ಲ. ಫ್ರೂಟ್ಸ್ ತಂತ್ರಾಂಶ ನವೀಕರಿಸದೆ ರೈತರಿಗೆ ನ್ಯಾಯಯುತ ಪರಿಹಾರ ನೀಡಲು ಸಾಧ್ಯವಿಲ್ಲ. ರೈತರು ತಮ್ಮ ಜಮೀನಿನ ವಿಸ್ತೀರ್ಣವನ್ನು ನಮೂದಿಸಲು ಮುಂದಾಗದಿದ್ದರೆ ಜಿಲ್ಲಾಧಿಕಾರಿ ಹಾಗೂ ತಹಶಿಲ್ದಾರರು ಪತ್ರಿಕಾ ಪ್ರಕಟಣೆ ನೀಡಿ, ರೈತರಲ್ಲಿ ಅರಿವು ಮೂಡಿಸಿ ಮುಂದಿನ ವಾರದಲ್ಲಿ ನವೀಕರಣದ ಕೆಲಸ ಮುಗಿಸುವಂತೆ ಗಡುವು ನೀಡಿದರು.

ಕುಡಿಯುವ ನೀರಿನ ಬಗ್ಗೆ ಇರಲಿ ಎಚ್ಚರ: ಮೈಸೂರು ಜಿಲ್ಲೆಯಲ್ಲಿ ಸದ್ಯಕ್ಕೆ ಕುಡಿಯುವ ನೀರಿನ ಸಮಸ್ಯೆ ಇಲ್ಲ ಎಂದು ಹೇಳಲಾಗಿದೆ. ಆದರೆ, ಬೇಸಿಗೆಯಲ್ಲಿ ಸಮಸ್ಯೆ ಕಂಡುಬರುವ ಸಾಧ್ಯತೆ ಇದೆ. ಹೀಗಾಗಿ ಅಧಿಕಾರಿಗಳು ಮುನ್ನೆಚ್ಚರಿಕೆ ವಹಿಸಬೇಕು. ಶಾಸಕರ ನೇತೃತ್ವದ ಟಾಸ್ಕ್ ಫೋರ್ಸ್ ಸಭೆ ನಡೆಸಬೇಕು. ಈಗಲೇ ಖಾಸಗಿ ಟ್ಯಾಂಕರ್ ಹಾಗೂ ಬೋರ್‌ವೆಲ್‌ಗಳನ್ನು ಗುರುತಿಸಿ ಇಟ್ಟುಕೊಳ್ಳಬೇಕು. ಕೆಟ್ಟು ನಿಂತಿರುವ ಬೋರ್‌ವೆಲ್‌ಗಳನ್ನು ದುರಸ್ಥಿ ಮಾಡಲು ಸರ್ಕಾರದಿಂದ ಹಣ ಮೀಸಲಿಡಲಾಗಿದ್ದು, ಅದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸೂಚಿಸಿದರಲ್ಲದೆ ಜಾನುವಾರುಗಳಿಗೆ ಮೇವಿನ ಪೂರೈಕೆಗೆ ಅನುಕೂಲವಾಗುವಂತೆ ರಾಜ್ಯಾದ್ಯಂತ 7,63,000 ಮೇವಿನ ಬೀಜದ ಕಿಟ್‌ಗಳನ್ನು ವಿತರಿಸಲಾಗಿದೆ. ಈ ಕಿಟ್‌ಗಳನ್ನು ಗ್ರಾಪಂ ಮಟ್ಟದಲ್ಲಿ ಪಾರದರ್ಶಕವಾಗಿ ವಿತರಿಸಬೇಕು. ಈ ಕೆಲಸಕ್ಕೆ ಹಾಲು ಉತ್ಪಾಕರ ಸಹಕಾರ ಸಂಘದ ಸಹಾಯ ಪಡೆದುಕೊಳ್ಳಿ ಎಂದು ಸಚಿವರು ಸಲಹೆ ನೀಡಿದರು.

ಕಂದಾಯ ಗ್ರಾಮಗಳ ಶೀಘ್ರ ಘೋಷಣೆಗೆ ಸೂಚನೆ: ಕಂದಾಯ ಇಲಾಖೆಗೆ ಸೇರದ ಕಾರಣ ಕಂದಾಯೇತರ ಜನವಸತಿ ನಿವಾಸಿಗಳು ಅಭಿವೃದ್ಧಿ ಯೋಜನೆಗಳಿಂದ ವಂಚಿತರಾಗುತ್ತಿದ್ದಾರೆ. ಹೀಗಾಗಿ ಕರ್ನಾಟಕ ಭೂ ಕಂದಾಯ ಕಾಯಿದೆಗೆ ತಿದ್ದುಪಡಿ ತಂದು ತಾಂಡ, ಹಟ್ಟಿ, ಕ್ಯಾಂಪ್, ಹಾಡಿ ಹಾಗೂ ಕೊಪ್ಪಲುಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು 2017 ರಲ್ಲೇ ಕಾನೂನು ಮಾಡಲಾಗಿದೆ. ಮೈಸೂರು ಜಿಲ್ಲೆಯಲ್ಲಿ ಒಟ್ಟು 110 ಕಂದಾಯ ಗ್ರಾಮಗಳನ್ನು ಗುರುತಿಸಲಾಗಿದೆ. ಆದರೆ, ಈವರೆಗೆ 52 ಗ್ರಾಮಗಳಿಗೆ ಮಾತ್ರ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಬಾಕಿ ಉಳಿದ ಗ್ರಾಮಗಳನ್ನೂ ಶೀಘ್ರವಾಗಿ ಕಂದಾಯ ಗ್ರಾಮಗಳೆಂದು ಘೋಷಿಸಿ. ಜಿಲ್ಲೆಯಲ್ಲಿ ಒಟ್ಟಾರೆ 20,163 ಮನೆಗಳಿಗೆ ಹಕ್ಕುಪತ್ರ ನೀಡಬೇಕಿದ್ದು, 2884 ಮನೆಗಳಿಗೆ ಮಾತ್ರ ಹಕ್ಕುಪತ್ರ ನೀಡಲಾಗಿದೆ. ಹೀಗಾಗಿ ಉಳಿದ ಮನೆಗಳಿಗೂ ಶೀಘ್ರ ಹಕ್ಕು ಪತ್ರ ನೀಡಲು ಕ್ರಮವಹಿಸಿ. ಅಲ್ಲದೆ, ಮತ್ತಷ್ಟು ಅರ್ಹ ಗ್ರಾಮಗಳಿದ್ದರೆ, ಸರ್ಕಾರಕ್ಕೆ ಶೀಘ್ರ ಪ್ರಸ್ತಾವನೆ ಸಲ್ಲಿಸಿ ಬಡವರ ಪರವಾಗಿ ಕೆಲಸ ಮಾಡಿ ಎಂದು ಕಿವಿಮಾತು ಹೇಳಿದರಲ್ಲದೆ ಪೌತಿ ಖಾತೆ ಅಭಿಯಾನ ಚುರುಕುಗೊಳಿಸಿ ಎಂದರು.

ಬಗರ್ ಹುಕುಂ ಅರ್ಜಿ ವಿಲೇಗೆ ಒತ್ತು: ನಮೂನೆ 50, 53, 57ಕ್ಕೆ ಸಂಬಂಧಿಸಿದಂತೆ ಅಕ್ರಮ–ಸಕ್ರಮಗೊಳಿಸಿ ಸಾಗುವಳಿ ಚೀಟಿ ನೀಡಲು ಕೋರಿ ಲಕ್ಷಾಂತರ ಜನ ಅರ್ಜಿ ಸಲ್ಲಿಸಿದ್ದಾರೆ. ಆದರೆ, ಅರ್ಹರಿಗೆ ಮಾತ್ರ ಜಮೀನು ಮಂಜೂರು ಮಾಡಬೇಕು. ಈ ಹಿಂದೆ ಬಗರ್ ಹುಕುಂ ಸಾಗುವಳಿ ಚೀಟಿ ನೀಡುವ ವೇಳೆ ಅನರ್ಹರಿಗೂ ಜಮೀನು ಮಂಜೂರು ಮಾಡಲಾಗಿದೆ. ನಿಯಮ ಮೀರಿ ಸಾಕಷ್ಟು ಅಕ್ರಮ ನಡೆಸಲಾಗಿದೆ. ಆದರೆ ಮುಂದೆ ಅಂತಹ ಯಾವುದೇ ಪ್ರಹಸನಗಳಿಗೆ ಆಸ್ಪದವಿರಬಾರದು. ಬಗರ್ ಹುಕುಂ ಅರ್ಜಿ ವಿಲೇವಾರಿ ಸಂದರ್ಭದಲ್ಲಿ ಅಧಿಕಾರಿಗಳು ಯಾವುದೇ ಪ್ರಭಾವಿಗಳಿಗೆ ಅಥವಾ ರಾಜಕೀಯ ಪಕ್ಷದ ನಾಯಕರಿಗೆ ಅನುಕೂಲ ಮಾಡಿಕೊಡುವ ಬದಲು ಬಡ ಜನರಿಗೆ ಮತ್ತು ಅರ್ಹರಿಗೆ ನ್ಯಾಯ ಒದಗಿಸಲು ಬದ್ಧರಾಗಿರಬೇಕು. ಸಾಗುವಳಿ ಚೀಟಿ ನೀಡುತ್ತಿದ್ದಂತೆ ಹೊಸ ಸರ್ವೇ ನಂಬರ್ ಪೋಡಿಯನ್ನೂ ಒದಗಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಹೈಕೋರ್ಟ್ ಕೇಸ್‌ಗಳ ಬಗ್ಗೆ ಇಷ್ಟು ತಾತ್ಸಾರವೇಕೆ?: ಮೈಸೂರು ಜಿಲ್ಲೆಯ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ಒಟ್ಟು 721 ಪ್ರಕರಣಗಳಿವೆ. ಈ ಪೈಕಿ 386 ಪ್ರಕರಣಗಳಲ್ಲಿ ತೆಗೆದುಕೊಂಡಿರುವ ಕ್ರಮ ಶೂನ್ಯ. ತಹಶೀಲ್ದಾರರು ನ್ಯಾಯಾಲಯದಲ್ಲಿ ಕನಿಷ್ಠ ವಕಾಲತ್ತನ್ನೂ ಸಲ್ಲಿಸಿಲ್ಲ. ವಕಾಲತ್ತು ಸಲ್ಲಿಸಲು ಏನ್ರೀ ಸಮಸ್ಯೆ ಎಂದು ಗದರಿದ ಕೃಷ್ಣ ಬೈರೇಗೌಡ, ಕಳೆದ ಆಗಸ್ಟ್ ತಿಂಗಳಿಂದ ಸತತ ಸೂಚನೆ ನೀಡಿದ ನಂತರವೂ ಜಿಲ್ಲೆಯ ಅಧಿಕ ಸಂಖ್ಯೆಯ ಪ್ರಕರಣಗಳು ಹೈಕೋರ್ಟ್‌ನಲ್ಲಿವೆ. ತಹಶೀಲ್ದಾರರು ಹಾಗೂ ಎಸಿಗಳು ಈ ಬಗ್ಗೆ ಯಾವುದೇ ಕ್ರಮ ಜರುಗಿಸಿಲ್ಲ. ಹೈಕೋರ್ಟ್ ಕಂದಾಯ ಇಲಾಖೆಯನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದು, ನೀವು ಮಾಡುವ ಕೆಲಸಕ್ಕೆ ಸರ್ಕಾರದ ಜಮೀನು ಖಾಸಗಿಯವರ ಪಾಲಾಗಲು ನಾವು ಸಹಿ ಹಾಕಬೇಕಾ? ಎಂದು ಅವರು ಕಿಡಿಕಾರಿದರಲ್ಲದೆ ತಹಶೀಲ್ದಾರರು ಈಗಲಾದರೂ ತಮ್ಮ ಜವಾಬ್ದಾರಿ ಅರಿತು ಕೆಲಸ ಮಾಡಬೇಕು, ಹೈಕೋರ್ಟ್‌ನಲ್ಲಿರುವ ಎಲ್ಲಾ ಪ್ರಕರಣಗಳಲ್ಲೂ ವಕಾಲತ್ತು ಸಲ್ಲಿಸಬೇಕು. ಮೂರು ತಿಂಗಳಲ್ಲಿ ಪ್ರಗತಿ ಕಾಣದಿದ್ದಲ್ಲಿ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ, ಪ್ರಾದೇಶಿಕ ಆಯುಕ್ತ ಜೆ.ಸಿ.ಪ್ರಕಾಶ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಅಪರ ಜಿಲ್ಲಾಧಿಕಾರಿ ಲೋಕನಾಥ್, ಕಂದಾಯ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಬಡವರ ಕಣ್ಣೀರು ಒರೆಸಿದರೆ ದೇವರ ಅನುಗ್ರಹ ಪಡೆದಂತೆ: ಜಿಟಿಡಿ

ವಾಟರ್ ಬೋರ್ಡ್‌ನಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ಕಳೆದ 10 ತಿಂಗಳಿಂದ ಸಂಬಳವಾಗಿಲ್ಲ ಎಂಬ ಮಾತುಗಳು ಕೇಳಿಬಂದಿವೆ ಎಂದು ಕಂದಾಯ ಸಚಿವರ ಗಮನ ಸೆಳೆದ ಶಾಸಕ ಜಿ.ಟಿ.ದೇವೇಗೌಡರು, ಗ್ರಾಮಗಳಲ್ಲಿರುವ ಸರ್ಕಾರದ ಭೂಮಿಯನ್ನು ಮೀಸಲಿಡಬೇಕು. ರಾಜ ಕಾಲುವೆ ಒತ್ತುವರಿ ತೆರವು ಕಾರ್ಯ ಮುಂದುವರೆಯಬೇಕು. ಕೆರೆ ಒತ್ತುವರಿ ತೆರವು ಪೂರ್ಣಗೊಂಡಿಲ್ಲ. ಅಧಿಕಾರಿಗಳು ಬಡವರ ಕಣ್ಣೀರು ಒರೆಸಿದರೆ ದೇವರ ಅನುಗ್ರಹ ಪಡೆದಂತೆ. ಎಲ್ಲೆಂದರೆ ಖಾಸಗಿ ಬಡಾವಣೆಗಳಾಗುತ್ತಿವೆ. ರೈತರ ರಕ್ಷಣೆ ಮಾಡಿದರೆ, ದೇವರು ನಿಮ್ಮ ಕುಟುಂಬವನ್ನು ಕಾಯುತ್ತಾನೆ. ನಮ್ಮ ವೃತ್ತಿ, ಕರ್ತವ್ಯದ ಬಗ್ಗೆ ಅರಿವಿರಲಿ ಎಂದರಲ್ಲದೆ ಕಂದಾಯ ಸಚಿವರಾದ ಕೃಷ್ಣಭೈರೇಗೌಡರಂತೆ ಯಾವ ಮಂತ್ರಿಯೂ ಈ ರೀತಿ ತಿದ್ದಿ ತೀಡುವುದಿಲ್ಲ. ಮುಂದಿನ ಬಾರಿ ಅವರು ಮೈಸೂರಿಗೆ ಬಂದಾಗ ನಿಮ್ಮ ಕಾರ್ಯವೈಖರಿ ಕಂಡು ಅವರೇ ಅಭಿನಂದಿಸುವಂತೆ ಕಾರ್ಯನಿರ್ವಹಿಸಿ ಎಂದು ಹುರಿದುಂಬಿಸಿದರು.

ಇ–ಆಫೀಸ್ ಬಳಸದ ಅಧಿಕಾರಿಗಳಿಗೆ ನೋಟಿಸ್

"ಇ–ಆಫೀಸ್ ಬಳಕೆಯ ಬಗ್ಗೆಯೂ ಚರ್ಚಿಸಿದ ಸಚಿವರು, ಕಡ್ಡಾಯ ಇ–ಆಫೀಸ್ ಬಳಕೆಗೆ ಸೂಚಿಸಿ ಆರು ತಿಂಗಳಾಗಿದೆ. ಮೈಸೂರಿನ ಎಲ್ಲಾ ತಾಲೂಕುಗಳಲ್ಲೂ ಇ–ಆಫೀಸ್ ಅನುಷ್ಠಾನವಾಗಿದೆ ಎಂದು ವರದಿ ನೀಡಿದ್ದೀರಿ. ಆದರೆ, ಇ–ಆಫೀಸ್ ನಲ್ಲಿ ಎಷ್ಟು ಫೈಲ್‌ಗಳು ರಚಿಸಲಾಗುತ್ತಿದೆ? ಎಂದು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ, ಉಪವಿಭಾಗಾಧಿಕಾರಿ ಕಚೇರಿಯಿಂದ ಜಿಲ್ಲಾಧಿಕಾರಿ ಕಚೇರಿಗೆ ಎಲ್ಲಾ ಕಡತಗಳನ್ನೂ ಇ–ಆಫೀಸ್ ಮೂಲಕವೇ ಕಳುಹಿಸಲಾಗುತ್ತಿದೆ. ತಹಶೀಲ್ದಾರ್ ಕಚೇರಿಗಳಲ್ಲೂ ಈ ಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿದೆ ಎಂದರು. ಕೂಡಲೇ ಮಾತು ಆರಂಭಿಸಿದ ಸಚಿವರು, ಎಲ್ಲಾ ತಹಶೀಲ್ದಾರ್‌ಗಳೂ ಇನ್ಮುಂದೆ ಇ–ಆಫೀಸ್ ಮೂಲಕವೇ ಕಡತಗಳ ವಿಲೇವಾರಿ ನಡೆಸಬೇಕು. ಭೌತಿಕ ಕಡತಗಳನ್ನು ಸ್ವೀಕರಿಸುವುದಿಲ್ಲ. ಶೇ.80ಕ್ಕೂ ಹೆಚ್ಚು ಕಡತಗಳನ್ನು ಇ–ಆಫೀಸ್ ಮೂಲಕ ವಿಲೇವಾರಿ ನಡೆಸದ ಅಧಿಕಾರಿಗಳಿಗೆ ನೋಟಿಸ್ ನೀಡಲಾಗುವುದು ಎಂದರು.

ಆಧಾರ್ ಲಿಂಕ್‌ಗೆ ಆದ್ಯತೆ

ರೈತರ ಆರ್‌ಟಿಸಿ ಜೊತೆಗೆ ಆಧಾರ್ ಲಿಂಕ್ ಜೋಡಣೆ ನಮ್ಮ ಮುಂದಿನ ಆದ್ಯತೆಯಾಗಬೇಕು. ರಾಜ್ಯದಲ್ಲಿ ಸಣ್ಣ ರೈತರ ಸಂಖ್ಯೆ ಕನಿಷ್ಠ ಶೇ.77ರಷ್ಟಿದೆ. ಆದರೆ, ಕೇಂದ್ರ ಸರ್ಕಾರದ ಅಂಕಿ ಅಂಶದ ಪ್ರಕಾರ ಈ ಸಂಖ್ಯೆ ಕೇವಲ ಶೇ.44ರಷ್ಟು ಮಾತ್ರ. ಪರಿಣಾಮ ಕೇಂದ್ರದ ಮಾನದಂಡದ ಪ್ರಕಾರ ರಾಜ್ಯಕ್ಕೆ ಕನಿಷ್ಠ ಮೊತ್ತದ ಬರ ಪರಿಹಾರ ಲಭ್ಯವಾಗುತ್ತಿದೆ. ಹೀಗಾಗಿ ಫ್ರೂಟ್ಸ್ ತಂತ್ರಾಂಶದಲ್ಲಿ ರೈತರ ಮಾಹಿತಿ ನಮೂದಿಸುವಾಗ ಅವರ ಆರ್‌ಟಿಸಿ ಜೊತೆಗೆ ಆಧಾರ್ ಲಿಂಕ್ ಮಾಡಬೇಕು. ಆ ಮೂಲಕ ಪರಿಹಾರದ ಹಣ ತಲುಪಿಸುವ ಜೊತೆಗೆ ರಾಜ್ಯದ ರೈತರ ನಿಖರ ಅಂಕಿ–ಅಂಶ ಪಡೆಯಬಹುದು. ಇದರಿಂದ ಪರಿಹಾರದ ಹಣ ಅನ್ಯರ ಪಾಲಾಗುವುದು ತಪ್ಪುತ್ತದೆ. ಅರ್ಜಿಗಳ ಅಪ್ಡೇಟ್, ವೆರಿಫೀಕೇಷನ್ ಪೂರ್ಣಗೊಳಿಸಿದರಷ್ಟೇ ಪರಿಹಾರದ ಹಣ ನೀಡಲು ಸಾಧ್ಯ –ಕೃಷ್ಣ ಭೈರೇಗೌಡ, ಸಚಿವ

ಕಂದಾಯ ಇಲಾಖೆ ಸಮಸ್ಯೆಗಳೇ ಜಾಸ್ತಿ...!

ಸಿಎಂ ಜನತಾ ದರ್ಶನ ವೇಳೆ ಬರುವ ದೂರುಗಳಲ್ಲಿ ಬಹುತೇಕ ಕಂದಾಯ ಇಲಾಖೆಯವೇ ಆಗಿರುತ್ತವೆ. ನೂರಾರು ಕಿ.ಮೀ ದೂರದಿಂದ ಬಂದು ಸಾರ್ವಜನಿಕರು ದೂರು ನೀಡುತ್ತಾರೆಂದರೆ ಡಿಸಿ, ಎಸಿ, ತಹಶೀಲ್ದಾರರು ಏನು ಕೆಲಸ ಮಾಡುತ್ತಿದ್ದೀರಿ ಎಂದು ಗರಂ ಆದ ಕಂದಾಯ ಸಚಿವ ಕೃಷ್ಣ ಭೈರೇಗೌಡರು, ನಕಾಶೆಯಲ್ಲಿರುವ ಕಾಲುದಾರಿ ಒತ್ತುವರಿ ಬಿಡಿಸಿಕೊಡಲು ತಮ್ಮಿಂದ ಆಗದಿದ್ದರೆ ಅದಕ್ಕೂ ಸಚಿವರು ಬರಬೇಕಾ?.. ಹಾಗಾದರೆ ತಮ್ಮ ಕೆಲಸವೇನು? ಮೊದಲು ಇಂತಹ ಮನೋಭಾವನೆಯಿಂದ ಹೊರಬನ್ನಿ, ನಾವು ನೀವು ಕೂಡಿ ಕೆಲಸ ಮಾಡೋಣ. ಜನರ ತೆರಿಗೆ ಹಣದಲ್ಲಿ ಜೀವನ ನಡೆಸುವ ನಾವು–ನೀವು ಅವರ ಜೀವನ ಹೈರಾಣ ಮಾಡಬಾರದು ಎಂದು ಕೃಷ್ಣಭೈರೇಗೌಡ ಹೇಳಿದರು.

ಡಿಸಿ ಕಚೇರಿಯಲ್ಲೇ ಸಬ್ ರಿಜಿಸ್ಟ್ರಾರ್ ಕಚೇರಿ

ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲಿ ಡಬಲ್ ಪೇಮೆಂಟ್ ಕೇಳ್ತಾರೆ ಎಂಬ ದೂರುಗಳಿವೆ. ಸಬ್ ರಿಜಿಸ್ಟ್ರಾರ್‌ಗಳು ರಾಘವೇಂದ್ರ ಸ್ವಾಮಿ ಆಣೆಗೂ ನನಗೆ ಗೊತ್ತಿಲ್ಲ ಎನ್ನುತ್ತಾರೆ... ಹಾಗಾದರೆ ಲಂಚ ಪಡೆಯುತ್ತಿರುವವರು ಯಾರು ಎಂದ ಸಚಿವರು, ಮೈಸೂರಿನ ನೂತನ ಡಿಸಿ ಕಟ್ಟಡದಲ್ಲಿ ಒಂದು ಸಬ್ ರಿಜಿಸ್ಟ್ರಾರ್ ಕಚೇರಿ ತೆರೆಯಿರಿ. ಇದರಿಂದ ಸಾಕಷ್ಟು ಜನರಿಗೆ ಅನುಕೂಲವಾಗುತ್ತದೆ ಎಂದು ಸಲಹೆ ನೀಡಿದರು.

ಗ್ರಾಮ ಪಂಚಾಯಿತಿಯಲ್ಲಿ ಆರ್‌ಐ, ವಿಎ

ಗ್ರಾಮ ಲೆಕ್ಕಿಗರು ಹಾಗೂ ರೆವಿನ್ಯೂ ಅಧಿಕಾರಿಗಳು ವಾರಕ್ಕೊಂದು ದಿನ ಗ್ರಾಪಂ ಕಚೇರಿಯಲ್ಲಿ ಲಭ್ಯವಿರುವಂತೆ ಸರ್ಕಾರ ವ್ಯವಸ್ಥೆ ಮಾಡಬೇಕು. ಇದರಿಂದ ರೈತರಿಗೆ ಅನುಕೂಲವಾಗುತ್ತದೆ ಎಂಬ ಶಾಸಕ ಜಿ.ಟಿ.ದೇವೇಗೌಡರ ಮನವಿಗೆ ಪ್ರತಿಕ್ರಿಯಿಸಿದ ಸಚಿವರು, ಈ ಹಿಂದೆಯೇ ಈ ಬಗೆಗೆ ಚರ್ಚೆ ಆಗಿದೆ. ಮತ್ತೊಮ್ಮೆ ಚರ್ಚಿಸಿ ಜಾರಿಗೊಳಿಸಲಾಗುವುದು ಎಂದು ಭರವಸೆ ನೀಡಿದರು. ಅಲ್ಲದೆ ಗ್ರಾಮಗಳಲ್ಲಿ ಸಾರ್ವಜನಿಕ ಸ್ಮಶಾನಕ್ಕೆ ಸರ್ಕಾರಿ ಜಾಗವಿಲ್ಲದಿದ್ದರೆ, ಕಾನೂನಿನ ಮಿತಿಯೊಳಗೆ ಖಾಸಗಿ ಭೂಮಿಯನ್ನು ಖರೀದಿಸಲು ಅವಕಾಶ ಇದೆ ಎಂದು ತಿಳಿಸಿದರು.

ರೆಕಾರ್ಡ್ಸ್ ರೂಂ ಡಿಜಿಟಲೀಕರಣಕ್ಕೆ ಕ್ರಮ

ಕಂದಾಯ ಇಲಾಖೆಯ ರೆಕಾರ್ಡ್ಸ್ ರೂಂಗಳಲ್ಲಿ ಸಾಕಷ್ಟು ತಪ್ಪುಗಳಾಗುತಿದ್ದು, ದಾಖಲೆಗಳು ಕಳೆದು ಹೋಗುವುದು, ಖಾಸಗಿ ವ್ಯಕ್ತಿಗಳು ಅಲ್ಲಿ ದರ್ಬಾರ್ ನಡೆಸುವುದನ್ನು ತಪ್ಪಿಸಲು ರೆಕಾರ್ಡ್ ರೂಂ ಡಿಜಟಲೀಕರಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ರಾಜ್ಯದ 31 ಜಿಲ್ಲೆಗಳ ರೆಕಾರ್ಡ್ ರೂಂಗಳು ಈ ವರ್ಷದ ಅಂತ್ಯದೊಳಗೆ ಡಿಜಟಲೀಕರಣವಾಗುವುದರೊಂದಿಗೆ ಸಬ್ ರಿಜಿಸ್ಟ್ರಾರ್ ಕಛೇರಿಗಳೂ ಡಿಜಿಟಲ್ ಆಗಲಿವೆ ಇದರಿಂದ ಜನರೇ ದಾಖಲೆಗಳನ್ನು ಪರಿಶೀಲಿಸಿಕೊಳ್ಳಬಹುದು. ಹಾಗೆಯೇ ನಕಲಿ ಸಾಗುವಳಿ ಚೀಟಿ ತಡೆಗಟ್ಟುವ ಸಲುವಾಗಿ ಡಿಜಿಟಲ್ ಸಾಗುವಳಿ ನೀಡಲು ತೀರ್ಮಾನಿಸಲಾಗಿದೆ ಎಂದರು.

ಮೋಸ ಮಾಡುವವರನ್ನು ಕರೆದು ಸನ್ಮಾನಿಸಿ

ಸಾಲ ವಸೂಲಿ ಮಾಡಲು ಅಧಿಕಾರಿಗಳು ಹಿಂದೇಟು ಹಾಕುತ್ತಿರುವುದೇಕೆ ಎಂದು ಪ್ರಶ್ನಿಸಿದ ಸಚಿವರು, ಸರ್ಕಾರಕ್ಕೆ ಮೋಸ ಮಾಡುವವರನ್ನು ಕರೆದು ಸನ್ಮಾನಿಸಿ, ಪ್ರಶಸ್ತಿ ಕೊಡಿ ಎಂದು ವ್ಯಂಗ್ಯವಾಡಿದರು. ಮನೆಗೆ ಕನ್ನಹಾಕಿದವರ ಉದ್ಧಾರವನ್ನೇಕೆ ಮಾಡುತ್ತಿದ್ದೀರಿ.. ಸರ್ಕಾರಕ್ಕೆ ಬರಬೇಕಾದ ಹಣ ಇನ್ನೂ ಸರಿಯಾಗಿ ವಸೂಲಿ ಆಗಿಲ್ಲ. ಈ ಬಗ್ಗೆ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ವಹಿಸಬೇಕು ಎಂದು ಸೂಚಿಸಿದರು.



ಜನವರಿ 22ರಂದು ಅಯೋಧ್ಯೆಯಲ್ಲಿ ಶ್ರೀ ರಾಮಲಲ್ಲಾನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ಕಾರ್ಯಸಿದ್ಧಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಬುಧವಾರ ಸ್ವಚ್ಛತಾ ಕಾರ್ಯ ನಡೆಸಲಾಯಿತು. ಈ ವೇಳೆ ರಾಜ್ಯ ಬಿಜೆಪಿ ಉಪಾಧ್ಯಕ್ಷ ಎಂ.ರಾಜೇಂದ್ರ, ಸಂಸದ ಪ್ರತಾಪ್ ಸಿಂಹ, ಶಾಸಕ ಟಿ.ಎಸ್.ಶ್ರೀವತ್ಸ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಸಚ್ಚಿದಾನಂದ ಆಶ್ರಮದ ಎಕ್ಸಿಕ್ಯೂಟಿವ್ ಟ್ರಸ್ಟ್ ಎಚ್.ವಿ.ಪ್ರಸಾದ್, ಬಿಜೆಪಿ ಮುಖಂಡರು ಇನ್ನಿತರರಿದ್ದರು.

ಚಾಮರಾಜನಗರದ ಉಮ್ಮತ್ತೂರಿನ ಪ್ರಗತಿಪರ ರೈತ ಮಹಿಳೆ
ವರ್ಷಾ ಶ್ರೀಕಂಠಸ್ವಾಮಿಗೆ ಪ್ರಗತಿಪರ ರೈತ ಪ್ರಶಸ್ತಿ



ವರ್ಷಾ ಶ್ರೀಕಂಠಸ್ವಾಮಿ ಅವರಿಗೆ 'ಪ್ರಗತಿಪರ ರೈತ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಮೈಸೂರು,ಜ.17(ಪಿಎಂ)–ಚಾಮರಾಜನಗರದ ಉಮ್ಮತ್ತೂರಿನ ಪ್ರಗತಿಪರ ರೈತ ಮಹಿಳೆ ವರ್ಷಾ ಶ್ರೀಕಂಠಸ್ವಾಮಿ ಅವರಿಗೆ ರೋಟರಿ ಮೈಸೂರು ಮಿಡ್‌ಟೌನ್ ವತಿಯಿಂದ 'ಹೆಚ್.ರಾಮಚಂದ್ರೇಗೌಡ ಸ್ಮಾರಕ ಪ್ರಗತಿಪರ ರೈತ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಆಕಾಶವಾಣಿ ಮೈಸೂರಿನ ಕಾರ್ಯಕ್ರಮ ಕಾರ್ಯನಿರ್ವಾಹಕ ಎನ್.ಕೇಶವಮೂರ್ತಿ ಅವರು ವರ್ಷಾ ಶ್ರೀಕಂಠಸ್ವಾಮಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

'ಆಕೃತಿ ಪರಿಸರ ಸ್ನೇಹಿ ಎಂಟರ್‌ಪ್ರೈಸಸ್' ಸಣ್ಣ ಉದ್ಯಮದ ಮೂಲಕ ಬಾಳೆ ದಿಂಡಿನ ನಾರಿನಿಂದ ಕರಕುಶಲ ಸಾಮಗ್ರಿಗಳು ಹಾಗೂ ಆಹಾರ ಪದಾರ್ಥಗಳ ಉತ್ಪಾದನೆಯಲ್ಲಿ ವರ್ಷಾ ಶ್ರೀಕಂಠಸ್ವಾಮಿ ಯಶಸ್ಸು ಸಾಧಿಸಿದ್ದು, ಇವರ ಕಾರ್ಯವೈಖರಿಯನ್ನು ಪ್ರಧಾನಿ ಮೋದಿಯವರು ತಮ್ಮ 'ಮನ್ ಕಿ ಬಾತ್' ರೇಡಿಯೋ ಕಾರ್ಯಕ್ರಮದಲ್ಲಿ ಉಲ್ಲೇಖಿಸಿ, ಪ್ರಶಂಸೆ ವ್ಯಕ್ತಪಡಿಸಿದ್ದರು.

ಇಂದು 'ಪ್ರಗತಿಪರ ರೈತ ಪ್ರಶಸ್ತಿ' ಸ್ವೀಕರಿಸಿ ಮಾತನಾಡಿದ ವರ್ಷಾ ಶ್ರೀಕಂಠಸ್ವಾಮಿ, ಈ ಪ್ರಶಸ್ತಿ ನೀಡಿದ್ದು ಖುಷಿ ತಂದಿದೆ. ಜೊತೆಗೆ ನನ್ನ ಜವಾಬ್ದಾರಿ ಹೆಚ್ಚಾಗಿದೆ. ಇನ್ನಷ್ಟು ಜನಕ್ಕೆ ಅನುಕೂಲ ಕಲ್ಪಿಸುವುದಕ್ಕೆ ಪ್ರೋತ್ಸಾಹ ಕೊಟ್ಟಂತಾಗಿದೆ. ನಾನು ಮೂಲತಃ ಮೈಸೂರು ನಿವಾಸಿ. ಆದರೆ ನಮ್ಮ ತೋಟ ಉಮ್ಮತ್ತೂರಿನಲ್ಲಿದೆ. ಕೋವಿಡ್ ಸಂದರ್ಭದಲ್ಲಿ ನಾವು ಅಲ್ಲೇ ಹೋಗಿ ನೆಲೆಸಿದೆವು. ಆ ಸಂದರ್ಭದಲ್ಲಿ ನಮ್ಮ ತೋಟದ ಬಾಳೆ ಖರೀದಿಸುವವರು ಇರದೇ ತೊಂದರೆ ಅನುಭವಿಸಬೇಕಾಯಿತು. ಆಗ ಬೇರೊಂದು ಮಾರ್ಗೋಪಾಯದ ಆಲೋಚನೆ ಬಂದಿತು ಎಂದು ತಿಳಿಸಿದರು.

ಜೊತೆಗೆ ಗ್ರಾಮೀಣ ಪ್ರದೇಶದ ಮಹಿಳೆಯರಿಗೂ ಉದ್ಯೋಗ ಕಲ್ಪಿಸಬೇಕೆಂಬ ನಿಟ್ಟಿನಲ್ಲಿ ತೊಡಗಿಸಿಕೊಂಡೆ. ಸಣ್ಣ ಪ್ರಮಾಣದ ಉದ್ಯಮ ಮಾಡಬೇಕೆಂದು ಮುಂದುವರೆದೆ. ಪ್ರಧಾನಿಯವರು ತಮ್ಮ 'ಮನ್ ಕಿ ಬಾತ್'ನಲ್ಲಿ ತಮಿಳುನಾಡಿನಲ್ಲಿ ಒಬ್ಬರು ಬಾಳೆ ತಟ್ಟೆಯಿಂದ ಕರಕುಶಲ ಸಾಮಗ್ರಿ ತಯಾರು ಮಾಡುತ್ತಿರುವ ಬಗ್ಗೆ ಪ್ರಸ್ತಾಪ ಮಾಡಿದ್ದರು. ಇದನ್ನು ಕೇಳಿ ನಾವೇಕೆ ಈ ನಿಟ್ಟಿನಲ್ಲಿ ಪ್ರಯತ್ನ ಮಾಡಬಾರದೆಂಬ ಯೋಚನೆ ಮಾಡಿ, ತಮಿಳುನಾಡಿಗೆ ಭೇಟಿ ನೀಡಿ ಅವರ ಕಾರ್ಯವೈಖರಿ ನೋಡಿ ಬಂದೆ ಎಂದು ವಿವರಿಸಿದರು.

ಬಳಿಕ ಒಂದು ವರ್ಷ ಕಾಲ ನಾನೇನು ಮಾಡಬಹುದೆಂದು ಸಂಶೋಧನೆಯಲ್ಲಿ ತೊಡಗಿದೆ. ನಂತರ ಸಣ್ಣ ಉದ್ಯಮ ಆರಂಭಿಸಿದೆ. ಬುಡದಿಂದ ನಾರು ತೆಗೆದು ಅದರಿಂದ ಕರಕುಶಲ ವಸ್ತುಗಳನ್ನು ತಯಾರಿಸುತ್ತೇವೆ. ಮ್ಯಾಟ್, ಗಿಫ್ಟ್ ಬಾಕ್ಸ್, ಕೈಚೀಲ ಮೊದಲಾದ ಸಾಮಗ್ರಿ ಮಾಡುತ್ತಿದ್ದೇವೆ. ಈ ಪ್ರಕ್ರಿಯೆಯಲ್ಲಿ ಉತ್ಪಾದನೆಯಾಗುವ ತ್ಯಾಜ್ಯವನ್ನೂ ಗೊಬ್ಬರವಾಗಿ ಬಳಕೆ ಮಾಡುತ್ತಿದ್ದೇವೆ. ಜೊತೆಗೆ ಬಾಳೆ ದಿಂಡಿನಿಂದ ಉಪ್ಪಿನಕಾಯಿ, ಜೂಸ್, ಬಾಳೆ ಹೂವಿನ ಚಟ್ನಿ ಪುಡಿ ಉತ್ಪಾದನೆ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಬಾಳೆಯೂ ಕಲ್ಪವೃಕ್ಷವೇ: ವರ್ಷಾ ಶ್ರೀಕಂಠಸ್ವಾಮಿ

ಹೀಗೆ ಶೂನ್ಯ ತ್ಯಾಜ್ಯ ನಿರ್ವಹಣೆ ಮೂಲಕ ಮೌಲ್ಯವರ್ಧಿತ ಉತ್ಪನ್ನಗಳನ್ನು ಉತ್ಪಾದಿಸುತ್ತಿದ್ದೇವೆ. ತೆಂಗು ಕಲ್ಪವೃಕ್ಷ–ಕಾಮಧೇನು ಎನ್ನುವ ಮಾತಿದೆ. ಅದೇ ರೀತಿಯಲ್ಲಿ ಬಾಳೆಯನ್ನು ಕಲ್ಪವೃಕ್ಷವಾಗಿಸಿದ್ದೇವೆ. ಈಗ ನಮ್ಮಲ್ಲಿ 8 ಮಂದಿ ಕೆಲಸ ಮಾಡುತ್ತಿದ್ದಾರೆ. ಮೊದ ಮೊದಲು ನಮ್ಮಲ್ಲಿ ಕೆಲಸ ಮಾಡಲು ಬರಲು ಹಿಂದೇಟು ಹಾಕುತ್ತಿದ್ದರು. ಆದರೆ ಈಗ ಪರಿಸ್ಥಿತಿ ಬದಲಾಗಿದ್ದು, ಸಾಕಷ್ಟು ಮಂದಿ ನಮ್ಮಲ್ಲಿ ಕೆಲಸ ಮಾಡಲು ಉತ್ಸುಕವಾಗಿದ್ದಾರೆ ಎಂದು ಹೇಳಿದರು.

ಬಾಳೆ ಕಟಾವು ಮಾಡಿದ ನಂತರ ದೊರೆಯುವ ಬುಡ ಕೃಷಿ ತ್ಯಾಜ್ಯವಾಗಲಿದ್ದು, ಸಾಮಾನ್ಯವಾಗಿ ಅದನ್ನು ರೈತರು ಕಟಾವು ಮಾಡಿಸಿ ಜಮೀನಿನ ಹೊರಗೆ ಹಾಕಿಸುತ್ತಾರೆ. ಬಳಿಕ ಅವುಗಳಿಗೆ ಬೆಂಕಿ ಹಚ್ಚಲಾಗುತ್ತದೆ. ಇಲ್ಲವಾದರೆ ಟ್ರ್ಯಾಕ್ಟರ್‌ನಲ್ಲಿ ಹೊಲದಲ್ಲೇ ಉಳುಮೆ ಮಾಡಿಸುತ್ತಾರೆ. ಆಗ ಮೂರು ತಿಂಗಳು ಫಸಲು ಬೆಳೆಯಲು ಸಾಧ್ಯವಾಗದು. ಇದೆಲ್ಲಾ ನೋಡಿದಾಗ, ಇದಕ್ಕೊಂದು ಪರಿಹಾರ ಹುಡುಕಲು ಹೊರಟು ಈ ಹಂತಕ್ಕೆ ಬಂದಿದ್ದೇನೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ಪ್ರಶಸ್ತಿ ಸಂಸ್ಥಾಪಕ ಆರ್.ರವೀಂದ್ರ ಬಾಬು ಮಾತನಾಡಿ, ನಮ್ಮ ತಂದೆ ಹೆಚ್.ರಾಮಚಂದ್ರೇಗೌಡ ಅವರ ಹೆಸರಿನಲ್ಲಿ ಈ ಪ್ರಶಸ್ತಿ ಸ್ಥಾಪನೆ ಮಾಡಲಾಗಿದೆ. ಅವರು ಮಳವಳ್ಳಿ ತಾಲೂಕು ಹಲಗೂರು ಗ್ರಾಮದವರು. ಅವರು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಜೈಲುವಾಸ ಸಹ ಅನುಭವಿಸಿದ್ದರು. ಅವರು ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಅವರ ಸ್ಮಾರಣಾರ್ಥ ಈ ಪ್ರಶಸ್ತಿಯನ್ನು ಕಳೆದ ನಾಲ್ಕು ವರ್ಷಗಳಿಂದ ನೀಡಲಾಗುತ್ತಿದೆ ಎಂದು ಹೇಳಿದರು.

ರೋಟರಿ 3181ರ ಚುನಾಯಿತ ಗೌರ್ನರ್ ಪಿ.ಕೆ. ರಾಮಕೃಷ್ಣ, ರೋಟರಿ ಮೈಸೂರು ಮಿಡ್‌ಟೌನ್ ಅಧ್ಯಕ್ಷ ಡಿ.ಶ್ರೀನಿವಾಸನ್, ಕಾರ್ಯದರ್ಶಿ ಸತ್ಯಯೇಂದ್ರ ಕಶ್ಯಪ್, ಸದಸ್ಯರಾದ ಭಾಸ್ಕರ್ ಸೈನಿಕ್, ಭೀಮೇಶ್, ಆರ್.ರವೀಂದ್ರಬಾಬು ಅವರ ಪತ್ನಿ ಹೇಮಲತಾ ಮತ್ತಿತರರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಗೆಳೆಯ : "ಬೆಳಿಗ್ಗೆಯಿಂದ ಯಾಕೆ ತುಂಬಾ ನಿರುತ್ಸಾಹವಾಗಿ ಕಾಣ್ತಾ ಇದ್ದೀ?"

ಆತ : "ಒಂದು ತಿಂಗಳಿನಿಂದ ತವರು ಮನೆಗೆ ಹೋಗ್ತೀನಿ... ಹೋಗ್ತೀನಿ ಅಂತ ಹೇಳ್ತಾ ಇದ್ದ ನನ್ನ ಹೆಂಡ್ತಿ ಇದ್ದಕ್ಕಿದಂತೆ ಇವತ್ತು ನಿರ್ಧಾರ ಬದಲಾಯಿಸಿದಳು ಕಣಯ್ಯ!"

ಮೈಸೂರು ಮಿತ್ರ

ಗುರುವಾರ, 18 ಜನವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನಿಮ್ಮ ಬಳಿ ಸುತ್ತಿಗೆ ಮಾತ್ರ ಇರುವುದಾದರೆ, ಪ್ರತಿಯೊಂದು ಸಮಸ್ಯೆಯನ್ನು ಮೊಳೆ ಎಂದೇ ಭಾವಿಸಿ –ಅಬ್ರಾಹಾಂ ಮಾಸ್ಲೋ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಸಿ ಬಟ್ಟೆಲಿ ಮಾಣಿಕ್ಯ ಕಟ್ಟಿದಂಗೆ

ನಿಮ್ಮ ಪತ್ರಗಳು

ಕರುನಾಡಿಗೆ ಹೆಮ್ಮೆ ತಂದ ಕನ್ನಡದ ಶಿಲ್ಪಿ ಯೋಗಿರಾಜ್



ಮಾನ್ಯರೆ,

ಐದು ತಲೆಮಾರಿನ ಶಿಲ್ಪಕಲೆ ಕುಟುಂಬವಿದು. ಮೈಸೂರಿನ ಕಲಾವಿದ ಅರುಣ್ ಯೋಗಿರಾಜ್‌ಗೆ ಒಲಿದ ಯೋಗ ಇದು. ವಂಶವಾಹಿನಿ ಹಾಗೂ ಸತತ ಪರಿಶ್ರಮದ ಕೊಡುಗೆ ಎನ್ನಬಹುದು. ಅಯೋಧ್ಯೆಯ ರಾಮಜನ್ಮಭೂಮಿಯ ಟ್ರಸ್ಟ್ ವತಿಯಿಂದ ಅರುಣ್ ರಾಜ್ ಕೆತ್ತಿದ ಐದು ವರ್ಷದ ಬಾಲರಾಮ ವಿಗ್ರಹ ಆಯ್ಕೆಯಾಗಿದೆ. ಇದು ಲೋಕವೇ ಹೆಮ್ಮೆ ಪಡುವ ವಿಷಯವಾಗಿದೆ. ಇವರ ಪ್ರತಿಭೆ ಕಂಡು ದೇಶವೇ ಇತ್ತ ತಿರುಗಿ ನೋಡುವಂತಾಗಿದೆ. ಶಿಲ್ಪಕಲೆಗೂ ಅಪಾರ ಗೌರವ ಇದೆ ಎಂದು ತೋರಿಸಿಕೊಟ್ಟಿದ್ದಾರೆ. ಇವರ ಶಿಲ್ಪಕಲೆ ಅಜರಾಮರ. ನಮ್ಮ ಮೈಸೂರಿನ ಪ್ರತಿಭೆ ಎಂದು ಮತ್ತಷ್ಟು ಹೆಮ್ಮೆ ಇದೆ. ಶಿಲ್ಪಕಲೆಯ ಗೌರವವನ್ನು ಎತ್ತಿ ಹಿಡಿದ ನಿಮಗೆ ಅಭಿನಂದನೆಗಳು. ನಿಮ್ಮ ಈ ಕುಟುಂಬದಿಂದ ಮತ್ತಷ್ಟು ಹೊಸ ಪ್ರತಿಭೆಗಳು ಹೊರಹೊಮ್ಮಲಿ. ದೇವರ ಕೃಪಾಕಟಾಕ್ಷವು ಎಂದೆಂದು ನಿಮಗಿರಲಿ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ಹೀಗೊಂದು ಮನಕಲಕುವ ಘಟನೆ

ಮಾನ್ಯರೆ,

ಮಾಸಾಶನ ಪಡೆಯಲು ದಾವಣಗೆರೆ ಜಿಲ್ಲೆಯ ಹರಿಹರ ತಾಲೂಕಿನ ಕುಣಿಬೆಳಕೆರೆ ಎಂಬ ಗ್ರಾಮದ ಅಜ್ಜಿಯೊಬ್ಬರು 5 ಕಿ.ಮೀ.ರಸ್ತೆ ಬದಿಯಲ್ಲಿ ತೆವಳಿಕೊಂಡು ಬಂದ ಬಗ್ಗೆ ಮಾಧ್ಯಮಗಳಲ್ಲಿ ವರದಿ ಪ್ರಕಟವಾಗಿದೆ. ಇದೊಂದು ಮನಕರಗುವ ಘಟನೆಯಾಗಿದ್ದು, ಮಾಸಾಶನಕ್ಕಾಗಿ ಜನರು ವಿಶೇಷವಾಗಿ ವೃದ್ಧರು ಎದುರಿಸಬೇಕಾದ ಭೀಕರತೆಯನ್ನು ಪ್ರತಿಬಿಂಬಿಸುತ್ತದೆ. ರಾಜ್ಯ ಸರ್ಕಾರ ಇಂತಹ ಪ್ರಕರಣಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕಾಗಿದೆ. ಅದೇ ರೀತಿ, ಸ್ಥಳೀಯ ಅಧಿಕಾರಿಗಳೇ ಮನೆ ಮನೆಗೆ ಭೇಟಿ ನೀಡಿ, ಇಂತಹ ಅರ್ಹ ವ್ಯಕ್ತಿಗಳನ್ನು ಗುರುತಿಸಿ, ಸ್ಥಳದಲ್ಲೇ ಮಾಸಾಶನವನ್ನು ಮಂಜೂರು ಮಾಡುವ ಮೂಲಕ ಇಂತಹ ವ್ಯಕ್ತಿಗಳು ಮಾಸಾಶನಕ್ಕೆ ಮೈಲಿಗಟ್ಟಲೇ ತೆವಳಿಕೊಂಡು ಹೋಗಬೇಕಾದ ಅನಿವಾರ್ಯತೆಗೆ ತೆರೆ ಎಳೆಯಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಸಿದ್ದರಾಮಯ್ಯನವರ ಈ ಧೋರಣೆ ಸರಿಯೇ?

ಮಾನ್ಯರೆ,

ಮೈಸೂರು ನಗರದಲ್ಲಿ ಅತ್ಯಂತ ಹಳೆಯ ಸಂಚಾರಕ್ಕೆ ಯೋಗ್ಯವಲ್ಲದ ಹೆಚ್ಚು ಹೊಗೆ ಉಗುಳುವ ಮಾಲಿನ್ಯಕ್ಕೆ ಮಾರಕವಾದ ಸಾರಿಗೆ ಬಸ್‌ಗಳು ಸಂಚರಿಸುತ್ತಿವೆ. ಆದರೆ ಮುಖ್ಯಮಂತ್ರಿಗಳು ತಮ್ಮ ಸ್ವಗ್ರಾಮವಾದ ಸಿದ್ದರಾಮನಹುಂಡಿಗೆ ನೂತನ ಸುಸಜ್ಜಿತ ಟಾಟಾ ಬಸ್ ಕೊಡಲಾಗಿದೆ. ಅದೇ ರೀತಿ ಮಾಲಿನ್ಯರಹಿತ ನೂತನ ಬಸ್‌ಗಳು ಮೈಸೂರಿನ ಎಲ್ಲಾ ಭಾಗಗಳಿಗೂ ಸಂಚರಿಸುವಂತಾಗಲಿ.

– ನೊಂದ ಪ್ರಯಾಣಿಕರು, ಮೈಸೂರು.

ಕರ್ನಾಟಕದ ಸ್ತಬ್ಧಚಿತ್ರಕ್ಕೂ ಅವಕಾಶ ನೀಡಿ

ಮಾನ್ಯರೆ,

ಜನವರಿ 26 ರಂದು ನವದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವದ 'ಸ್ತಬ್ಧಚಿತ್ರ' ಮೆರವಣಿಗೆಯಲ್ಲಿ ಕರ್ನಾಟಕದ ಸ್ತಬ್ಧ ಚಿತ್ರ ಪ್ರದರ್ಶನಕ್ಕೆ ಅವಕಾಶ ನೀಡಿಲ್ಲವೆಂದು, ಇದೊಂದು ರಾಜಕೀಯ ಸೇಡಿನ ಮನೋಭಾವವೆಂದು ಕರ್ನಾಟಕ ಸರ್ಕಾರ ಹೇಳುತ್ತಿದೆ.

ಇದು ಕರ್ನಾಟಕ ಸರ್ಕಾರದ ಮೇಲೆ ಕೇಂದ್ರ ಬಿಜೆಪಿ ನಾಯಕರು ಕಳೆದ ವಿಧಾನ ಸಭಾ ಚುನಾವಣೆಯ ಸೇಡು ತೀರಿಸಿಕೊಳ್ಳುತ್ತಿದ್ದಾರೆಂದು ಕೆಲವು ಮಂತ್ರಿಗಳು ಮಾಧ್ಯಮಗಳಲ್ಲಿ ಹೇಳಿದ್ದಾರೆ.

ಕಳೆದ ವರ್ಷವೂ ಪ್ರಥಮ ಹಂತದ ಆಯ್ಕೆಯಲ್ಲಿ ಕರ್ನಾಟಕದ ಸ್ತಬ್ಧಚಿತ್ರ ಪ್ರದರ್ಶನಕ್ಕೆ ಆಯ್ಕೆಯಾಗಿರಲಿಲ್ಲ. ಇದನ್ನು ಗಮನಿಸಿದ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು, ಕೇಂದ್ರ ರಕ್ಷಣಾ ಸಚಿವರಿಗೆ ಪತ್ರ ಬರೆದು ಮನವಿ ಮಾಡಿದ ನಂತರ ಕರ್ನಾಟಕದ ಸ್ತಬ್ಧಚಿತ್ರ ಪ್ರದರ್ಶನಕ್ಕೆ ಅವಕಾಶ ದೊರೆಯಿತು. ಈಗಲೂ ಕಾಲ ಮಿಂಚಿಲ್ಲ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೇಂದ್ರ ರಕ್ಷಣಾ ಸಚಿವರಿಗೆ ಮನವಿ ಮಾಡಿ, ಈ ವರ್ಷವೂ ಕರ್ನಾಟಕದ ಸ್ತಬ್ಧ ಚಿತ್ರ ಪ್ರದರ್ಶನವಾಗುವಂತಾಗಲಿ. ಅದು ಬಿಟ್ಟು ಇದರಲ್ಲಿ ರಾಜಕಾರಣ ಮಾಡುವಂಥದ್ದು ಏನಿದೆ.?

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ರಾಮಮಂದಿರ ಧಾರ್ಮಿಕ ವಿಷಯಕ್ಕೆ ಸೀಮಿತವಾಗಿರಲಿ

ಮಾನ್ಯರೆ,

ಭಾರತೀಯ ಜನತಾ ಪಕ್ಷಕ್ಕೆ ಹಿಂದುತ್ವ ಬಿಟ್ಟರೆ ಬೇರೆ ಏನೊ ಗೊತ್ತಿಲ್ಲ. ಹಿಂದೂ ಎಂದರೆ ಜಾತಿಯೇ? ಧರ್ಮವೇ? ಹಿಂದೂಗಳು ಎಂದರೆ ಯಾರು ಎಂದು ಮೊದಲು ಬಿಜೆಪಿ ಸ್ಪಷ್ಟಪಡಿಸಬೇಕಿದೆ. ಹಿಂದೂ ನನಗೆ ತಿಳಿದ ಮಟ್ಟಿಗೆ ಒಂದು ಧರ್ಮ. ಈ ಧರ್ಮದಲ್ಲಿ ಹಲವಾರು ಜಾತಿಗಳಿವೆ. ಒಂದೇ ಧರ್ಮದ ಜನರನ್ನು ಹಿಂದೂ ದೇವಾಲಯದ ಒಳಗೆ ಪ್ರವೇಶ ಮಾಡಲು ಏಕೆ ಬಿಡುತ್ತಿಲ್ಲ. ಒಂದೇ ಧರ್ಮದ ವಿವಾಹ ಸಂಬಂಧ ಏಕೆ ಒಪ್ಪುತ್ತಿಲ್ಲ. ಒಂದೇ ಧರ್ಮದ ಅರ್ಚಕರಿಗೆ ಏಕೆ ಅವಕಾಶವಿಲ್ಲ. ಈ ದೇಶದ ಪ್ರಥಮ ಪ್ರಜೆಯನ್ನೆ ದೇವಸ್ಥಾನದ ಹೊರಗೆ ನಿಲ್ಲಿಸಿರಲಿಲ್ಲವೇ? ಇದು ಈ ದೇಶದ ದುರಂತ.

ಕಾಂಗ್ರೆಸ್ ಪಕ್ಷ ರಾಮಮಂದಿರ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲು ನಿರಾಶಕ್ತಿ ವಹಿಸಿರುವುದು ಸರಿಯಾದ ಕ್ರಮವೆ. ಅಲ್ಲಿಗೆ ಹೋದಾಗ, ಖರ್ಗೆ, ಸಿದ್ದರಾಮಯ್ಯ ಅವರನ್ನು ಜಾತಿ ಆಧಾರಿತವಾಗಿ ಹೊರಗೆ ನಿಲ್ಲಿಸಿದರೂ ಅಚ್ಚರಿಯಿಲ್ಲ. ಬಿಜೆಪಿಗೆ ರಾಮ ಬೇಕು ಅವನ ಇತಿಹಾಸ ತಿಳಿಸಿಕೊಟ್ಟ ರಾಮಾಯಣದ ಕರ್ತೃ ವಾಲ್ಮೀಕಿ ಬೇಡ ಎಂದರೆ ಹೇಗೆ? ನಿಮ್ಮ ರಾಜಕೀಯ ದೊಂಬರಾಟಕ್ಕೆ ಲೋಕಸಭಾ ಚುನಾವಣೆಯನ್ನು ಜನತೆ ಎದುರು ನೋಡುತ್ತಿದ್ದಾರೆ. ನಿಮ್ಮ ರಾಜಕೀಯಕ್ಕೋಸ್ಕರ ರಾಮನ ಮರ್ಯಾದೆ ತೆಗೆಯಬೇಡಿ. ಗೌರವಯುತವಾಗಿ ಯಾರನ್ನು ಟೀಕೆ ಮಾಡದೆ ಸಂತೋಷದಿಂದ ಕಾರ್ಯಕ್ರಮ ನೆರವೇರಿಸಿ. ಕಾಂಗ್ರೆಸ್ ಹಿಂದೂ ವಿರೋಧಿ ಎಂದರೆ ನೀವು ಹಿಂದುಳಿದ ವರ್ಗಗಳ ವಿರೋಧಿ ಅಷ್ಟೇ. ರಾಮ ಮಂದಿರ ಉದ್ಘಾಟನೆ ಧಾರ್ಮಿಕ ವಿಷಯಕ್ಕೆ ಸೀಮಿತವಾಗಿದ್ದರೆ ಒಳ್ಳೆಯದು, ಅನವಶ್ಯಕವಾಗಿ ಅನಾಹುತಕ್ಕೆ ಕಾರಣರಾಗಬೇಡಿ.

–ದಡದಹಳ್ಳಿ ರಮೇಶ್, ಚಂದಕವಾಡಿ, ಚಾಮರಾಜನಗರ ಜಿಲ್ಲೆ.

ಮಂಥನ



ನಿವೇದಿತಾ ಎಚ್
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು

ಮರ್ಯಾದ ಪುರುಷ ರಾಮನಿಗೆ ಬಹುಪರಾಕ್!

ಮರ್ಯಾದ ಪುರುಷೋತ್ತಮ ರಾಮನ ಮಂದಿರದ ಉದ್ಘಾಟನೆಗೆ ಇನ್ನು ನಾಲ್ಕು ದಿನಗಳಷ್ಟೇ ಬಾಕಿ ಇರುವುದು. ಇಡೀ ಪ್ರಪಂಚವೇ ಎದುರು ನೋಡುತ್ತಿರುವ ರಾಮ ಮಂದಿರದ ಲೋಕಾರ್ಪಣಾ ಕಾರ್ಯಕ್ರಮ, ವಿಶ್ವದೆಲ್ಲೆಡೆಯ ರಾಮಭಕ್ತರಿಗೆ ಮಾತ್ರವಲ್ಲ, ಸಕಲರಿಗೂ ಸಂಭ್ರಮದ ವಿಚಾರವಾಗಿದೆ. ಏಕೆಂದರೆ ರಾಮ ಎಂದರೆ ಅವನು ಒಂದು ಜಾತಿ ಧರ್ಮ ದೇಶದ ಸ್ವತ್ತಲ್ಲ. ಅವನು ಮನುಷ್ಯರೆನಿಸಿಕೊಂಡ ಎಲ್ಲರೂ ಬದುಕ ಬಯಸುವ ಬದುಕ ಬದುಕಿದವ. ರಾಮನ ಮಾತೃ–ಪಿತೃಗಳೆಡೆಗಿನ ಭಕ್ತಿ, ಸೋದರ ವಾತ್ಸಲ್ಯ, ಏಕಪತ್ನೀವ್ರತ, ಪತ್ನೀ ಪ್ರೇಮ, ನ್ಯಾಯ ಪಕ್ಷಪಾತ, ಕರುಣಾ ಹೃದಯ, ಕ್ಷಮಾಗುಣ, ದೇಶಪ್ರೇಮ, ಧೈರ್ಯ– ಶೌರ್ಯ, ನಿಸ್ವಾರ್ಥ ಪ್ರೀತಿ ಅನುಕರಣೀಯ. ಆದುದರಿಂದಲೇ ರಾಮಾ ಎಂದರೆ ಅದೊಂದು ಶಕ್ತಿ, ಬರಿಯ ಹೆಸರಲ್ಲ.

ಇದೀಗ ರಾಮಮಂದಿರ ಉದ್ಘಾಟನೆಯಾಗುತ್ತಿರುವ ಸಂದರ್ಭದಲ್ಲಿ, ರಾಮಾಯಣ ಮತ್ತೆ ಮತ್ತೆ ನಮ್ಮ ಮನಃಪಟಲದಲ್ಲಿ ಸುಳಿಯುತ್ತಿದೆ. ನಮ್ಮ ದೇಶದ ಪ್ರತಿ ಹಳ್ಳಿಯ ಜನರೂ, ರಾಮ ಲಕ್ಷ್ಮಣ ಸೀತೆಯರನ್ನು ತಮ್ಮ ಊರಿನ ನದಿ ಹಳ್ಳ–ಕೊಳ್ಳ ಕಾಡು ಮೇಡುಗಳಲ್ಲಿ ಕಂಡವರೇ. ಎಲ್ಲೋ ಇರುವ ಒಂದು ಸಣ್ಣ ನೀರಿನ ಹೊಂಡದಲ್ಲಿ ಸೀತೆ ತನ್ನ ಬಾಯಾರಿಕೆ ನೀಗಿಸಿಕೊಂಡಿರುತ್ತಾಳೆ, ಎಲ್ಲೋ ಒಂದು ಕಾಡಿನ ಅಂಚಿನಲ್ಲಿ ರಾಮ ವಿಶ್ರಮಿಸಿಕೊಂಡ ಬಂಡೆ ಇರುತ್ತದೆ. ಯಾವುದೋ ಸೀಳಿದ ಬಂಡೆ ಲಕ್ಷ್ಮಣನ ಸಿಟ್ಟಿನ ಗುರುತಾಗಿರುತ್ತದೆ. ಹೀಗೆ ರಾಮ ಮತ್ತು ರಾಮಾಯಣ ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿಬಿಟ್ಟಿದೆ.

ಆದಿಕಾವ್ಯವೆಂದು ಕರೆಸಿಕೊಳ್ಳುವ **ವಾಲ್ಮೀಕಿ ಮಹರ್ಷಿ ರಚಿಸಿದ 'ರಾಮಾಯಣ'**, ಇಂದಿನ ದಿನದವರೆಗೂ ಕವಿಗಳು ಕಾದಂಬರಿಕಾರರನ್ನು ತನ್ನ ಅಸೀಮ ಶಕ್ತಿಯಿಂದ ಮೋಹಪರವಶಗೊಳಿಸಿ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಲೇ ಇದೆ. ಸಂಸ್ಕೃತದಲ್ಲಿ ರಚಿತವಾದ ವಾಲ್ಮೀಕಿ ರಾಮಾಯಣದಲ್ಲಿ, 24000 ಶ್ಲೋಕಗಳಿವೆ. ಏಳುಕಾಂಡಗಳಲ್ಲಿ ಹರಡಿರುವ ಈ ಪ್ರಥಮ ರಾಮಕಥೆಯ ಉಪಲಬ್ಧ ಹಸ್ತಪ್ರತಿಗಳನ್ನೆಲ್ಲಾ ಸಂಗ್ರಹಿಸಿ, ವಿದ್ವಾಂಸರು, ದಾಕ್ಷಿಣಾತ್ಯ, ಗೌಡೀಯ ಮತ್ತು ಪಶ್ಚಿಮೋತ್ತರೀಯ ಎಂಬ ಮೂರು ಪಾಠಕ್ರಮಗಳಾಗಿ ವಿಂಗಡಿಸಿದ್ದಾರೆ. ದಾಕ್ಷಿಣಾತ್ಯ ಪಾಠ್ಯವೇ ಮೂಲ ಪಠ್ಯವಿರಬಹುದು ಎಂದು ವಿದ್ವಾಂಸರು ಅಂದಾಜಿಸಿದ್ದಾರೆ. ರಾಮಾಯಣದ ಸಪ್ತ ಕಾಂಡಗಳೂ ವಾಲ್ಮೀಕಿ ವಿರಚಿತ ಎಂದು ಕೆಲವರು ಪ್ರತಿಪಾದಿಸಿದರೆ, ಉತ್ತರಕಾಂಡ ಪ್ರಕ್ಷಿಪ್ತವೆಂದು ವಾದಿಸುವ ವಿದ್ವಾಂಸರೂ ಇದ್ದಾರೆ. 2500 ವರ್ಷಗಳಿಂದ ಸಾಗಿ ಬಂದಿರುವ ಮಹಾಕಾವ್ಯದಲ್ಲಿ ಇದೆಲ್ಲ ಸಹಜವೆಂಬುದೂ ನಿಜವೇ.

ರಾಮಾಯಣ ಕಾಲಕಾಲಕ್ಕೆ ಎಲ್ಲರಿಂದ ಓದಲ್ಪಟ್ಟು ತನ್ನ ಪ್ರಭಾವಲಯವನ್ನು ಹಿಗ್ಗಿಸಿಕೊಳ್ಳುತ್ತಲೇ ಇದೆ. ಆದರೆ ಪಂಡಿತ ಭಾಷೆಯೆನಿಸಿರುವ ಸಂಸ್ಕೃತದಲ್ಲಿರುವ ರಾಮಾಯಣವನ್ನು ತಮ್ಮ ತಮ್ಮ ಭಾಷೆಗೆ ಕವಿ ಪಂಡಿತೋತ್ತಮರು ಅನುವಾದಿಸುತ್ತಲೇ ಬಂದಿದ್ದಾರೆ. ಮೂಲಕ್ಕೆ ನಿಷ್ಠರಾಗಿ ಕೆಲವರು ಅನುವಾದಿಸಿದ್ದರೆ, ವಾಲ್ಮೀಕಿ ರಾಮಾಯಣವನ್ನು ಆಧಾರವಾಗಿಟ್ಟುಕೊಂಡು ತಮ್ಮ ಕಲ್ಪನೆ ಕಲಾ ಕೌಶಲವನ್ನು ಮೆರೆದವರೂ ಇದ್ದಾರೆ. ಬಹುತೇಕ ಎಲ್ಲ ಭಾರತೀಯ ಭಾಷೆಯಲ್ಲೂ ಹಿಂದಿನಿಂದಲೂ ರಾಮಾಯಣ ಮತ್ತೆ ಮತ್ತೆ ಬೆಳಕು ಕಾಣುತ್ತಿದೆ. ಈ ಲೇಖನದಲ್ಲಿ ಹಾಗೆ ಭಾರತೀಯ ಭಾಷೆಗಳಲ್ಲಿ ರಚಿತವಾಗಿರುವ ರಾಮಾಯಣಗಳ ಕಿರುಪರಿಚಯವಿರಲಿದೆ.

ಕ್ರಿಸ್ತಪೂರ್ವದಲ್ಲಿ ರಚಿತವಾಗಿರಬಹುದೆನ್ನಲಾದ ವಾಲ್ಮೀಕಿ ರಾಮಾಯಣ, ಸಂಸ್ಕೃತದಲ್ಲಿಯೇ ರಚಿತವಾಗಿದ್ದರೂ, ಹಲವು ಸಂಸ್ಕೃತ ಕವಿಗಳು ಇದರಿಂದ ಪ್ರಭಾವಿತರಾಗಿ ರಾಮಾಯಣವನ್ನು ಸಂಸ್ಕೃತದಲ್ಲಿಯೇ ಮರುಸೃಷ್ಟಿಸಿದ್ದಾರೆ. ಭಟ್ಟಿ ಕಾವ್ಯ ಸೇತುಬಂಧ ಶೇಷರಾಮಾಯಣ ಅದ್ಭುತ ರಾಮಾಯಣ, ಕುಮಾರದಾಸನ ಜಾನಕೀಹರಣ, ಸಂಧ್ಯಾಕಾರ ನಂದಿಯ ರಾಮಚರಿತೆ ಕಾಳಿದಾಸನ ರಘುವಂಶ, ಭವಭೂತಿಯ ಉತ್ತರರಾಮಚರಿತ ಕಾವ್ಯದ ರೂಪದಲ್ಲಿದ್ದರೆ, ವೆಂಕಟನಾಥರು ರಘುವೀರಗದ್ಯ ಎಂಬ ದಂಡಕವನ್ನು ರಚಿಸಿದ್ದಾರೆ. ಇನ್ನು ರಾಮಾಯಣಾಧಾರಿತ ಸಂಸ್ಕೃತ ನಾಟಕಗಳ ಪಟ್ಟಿಯಂತೂ ಮುಗಿಯುವುದಿಲ್ಲವೇನೋ ಎನ್ನುವಷ್ಟಿದೆ. ಭಾಸನ ಪ್ರತಿಮಾನಾಟಕಂ ಭವಭೂತಿಯ ಉತ್ತರ ರಾಮಚರಿತಂ, ಶಕ್ತಿಭದ್ರನ್‌ನ ಆಶ್ಚರ್ಯಚೂಡಾಮಣಿ,ಚಕ್ರಕವಿಯ ಜಾನಕೀಪರಿಣಯ ಮಹಾದೇವ ಕವಿಯ ಅದ್ಭುತ ದರ್ಪಣ ಮುರಾರಿ ಕವಿಯ ಅನರ್ಘ ರಾಘವ ಅತೀ ಪ್ರಸಿದ್ಧವಾದವು.

ಮಹಾಭಾರತದಲ್ಲಿಯೂ, ರಾಮೋಪಾಖ್ಯಾನ ನಮಗೆ ಕಾಣಸಿಗುತ್ತದೆ. ರಾಮಾಯಣದ ಸ್ಥೂಲ ಕತೆಯನ್ನು ಹೇಳುವ ರಾಮೋಪಖ್ಯಾನ ಮೂಲ ರಾಮಾಯಣಕ್ಕಿಂತ ಸ್ವಲ್ಪ ಭಿನ್ನವಾದ ಕತೆಯನ್ನು ಹೇಳುತ್ತದೆ.

ಭಾರತದಲ್ಲಿ ನಮಗೆ ಬೌದ್ಧ ಮತ್ತು ಜೈನ ರಾಮಾಯಣಗಳೂ ದೊರೆಯುತ್ತವೆ. ಆದರೆ ತಮ್ಮ ತಮ್ಮ ಮತಗಳ ಉಪದೇಶಗಳಿಗೆ ತಕ್ಕಂತೆ ಇಲ್ಲಿ ರಾಮಾಯಣದ ಕತೆಗಳಲ್ಲಿ ಬದಲಾವಣೆಗಳನ್ನು ಕಾಣುತ್ತೇವೆ. ಬೌದ್ಧ ರಾಮಾಯಣದಲ್ಲಿ ರಾಮ ಲಕ್ಷ್ಮಣ ಸೀತೆಯರು ಒಡಹುಟ್ಟಿದವರು. ರಾಮನು ಇಲ್ಲಿ ಬುದ್ಧನಂತೆ ಪರಮಸಾಧು, ವೈರಾಗ್ಯನಿಧಿ ಮತ್ತು ಧರ್ಮಮೂರ್ತಿ. ಇವರು ರಾಮನನ್ನು ಬುದ್ಧನ ಹಿಂದಿನ ಜನ್ಮದ ಅವತಾರವೆಂದು ನಂಬುತ್ತಾರೆ.

ಜೈನರಾಮಾಯಣದಲ್ಲಿಯೂ ಇಂತಹ ಅನೇಕ ಬದಲಾವಣೆಗಳಿವೆ. ಪ್ರಾಕೃತದಲ್ಲಿ ರಚಿಸಲ್ಪಟ್ಟಿರುವ ಇದರ ಹೆಸರು, ಪದ್ಮಚರಿತ.ಇಲ್ಲಿ ಲಕ್ಷ್ಮಣನು ರಾವಣನ ವಧೆಮಾಡಿ ನರಕಕ್ಕೆ ತಳ್ಳಲ್ಪಡುತ್ತಾನೆ. ಇದರಿಂದಾಗಿ ಶೋಕತಪ್ತನಾದ ರಾಮನು ಜಿನದೀಕ್ಷೆಯನ್ನು ಸ್ವೀಕರಿಸಿ ಮೋಕ್ಷವನ್ನು ಪಡೆಯುತ್ತಾನೆ.ಜೈನರಾಮಾಯಣದಲ್ಲಿ ಎರಡು ಸಂಪ್ರದಾಯಗಳಿವೆ, ಒಂದು ವಿಮಲಸೂರಿಯದು ಮತ್ತೊಂದು ಗುಣಭದ್ರಾಚಾರ್ಯರದು. ಸಂಸ್ಕೃತ ಜೈನ ರಾಮಾಯಣದಲ್ಲಿ ರವಿಷೇಣನ ಮಹಾಪುರಾಣ ಅಥವಾ ಪದ್ಮಪುರಾಣ ಮುಖ್ಯವಾದುದು.

ಸಂಸ್ಕೃತದಲ್ಲಿಯೇ ಆಧ್ಯಾತ್ಮರಾಮಾಯಣ ಕೃತಿ ರಚಿತವಾಗಿದೆ. ಶಿವ ಪಾರ್ವತಿಯರ ಸಂಭಾಷಣೆಯ ರೂಪದಲ್ಲಿರುವ ಈ ಕೃತಿ ರಾಮನಕತೆಯನ್ನೇ ಹೇಳಿದರೂ, ರಾಮಾಯಣದಲ್ಲಿನ ಆಧ್ಯಾತ್ಮ ತತ್ವಗಳನ್ನು ಹೇಳುವುದರಿಂದ ಆಧ್ಯಾತ್ಮ ರಾಮಾಯಣ ವೆಂಬ ಹೆಸರು ಬಂದಿದೆ. ಇದರಲ್ಲಿಯೂ ಏಳು ಕಾಂಡಗಳಿದ್ದು 64 ಸರ್ಗಗಳು 4200 ಶ್ಲೋಕಗಳಿವೆ. ಕರ್ತೃವಿನ ಬಗ್ಗೆ ಇನ್ನೂ ಚರ್ಚೆಗಳಿದ್ದು ವ್ಯಾಸನೆನ್ನುವವರೂ



ಇದ್ದಾರೆ ಭಕ್ತಿ ಪಂಥದ ರಮಾನಂದನೆನ್ನುವವರೂ ಇದ್ದಾರೆ.

ಇನ್ನು ಕನ್ನಡಕ್ಕೆ ಬಂದರೆ, ಕ್ರಿ.ಶ.1100ರಲ್ಲಿ ಜೀವಿಸಿದ್ದ, ಅಭಿನವ ಪಂಪನೆಂಬ ಬಿರುದಾಂಕಿತನಾದ ನಾಗಚಂದ್ರನ ರಾಮಚರಿತಪುರಾಣವೇ ಸಂಪೂರ್ಣವಾಗಿ ಸಿಕ್ಕಿರುವ ಪ್ರಥಮ ಕನ್ನಡ ರಾಮಾಯಣ. ಹದಿನಾರು ಆಶ್ವಾಸಗಳಿರುವ ಇದನ್ನು ಪಂಪ ರಾಮಾಯಣವೆಂದೂ ಕರೆಯುತ್ತಾರೆ. ನಾಗಚಂದ್ರನ ಈ ಚಂಪೂಗ್ರಂಥದಲ್ಲಿ ಪುತ್ರಕಾಮೇಷ್ಟೀ ಯಾಗದ ಪ್ರಸ್ತಾಪವೇ ಇಲ್ಲ. ಲಕ್ಷ್ಮಣನೇ ಕಥಾನಾಯಕ.

ಕನ್ನಡದ ಮತ್ತೊಬ್ಬ ಕವಿ ಕುಮುದೇಂದುವು ಕ್ರಿ.ಶ 1275ರಲ್ಲಿ, ರಾಮಾಯಣವನ್ನು ಕುಸುಮಷಟ್ಪದಿ ಮತ್ತು ರಗಳೆಗಳಲ್ಲಿ ರಚಿಸಿದ್ದಾನೆ. 1525ರಲ್ಲಿ ಕವಿಮಿತ್ರ ಮಹಾದೇವಪ್ಪನು ರಾಮವಿಜಯ ಕಾವ್ಯವನ್ನು ಸಾಂಗತ್ಯದಲ್ಲಿ ರಚಿಸಿದ್ದಾನೆ. 1700ರಲ್ಲಿನ ಚಂದ್ರಶೇಖರ ಕವಿಯ ರಾಮಚಂದ್ರ ಚರಿತ್ರೆ, 1792ರಲ್ಲಿನ ದೇವೇಂದ್ರ ಕವಿಯ ರಾಮಕಥಾವಾತಾರ ಕನ್ನಡದ ಇತರ ರಾಮಾಯಣಗಳು. ಇವೆಲ್ಲವೂ ಜೈನ ರಾಮಾಯಣಗಳಾದರೆ, ಕುಮಾರ ವಾಲ್ಮೀಕಿ ಎಂದು ಹೆಸರಾದ ಈಗಿನ ಬಿಜಾಪುರದ ತೊರವೆಯ ನರಹರಿ ರಚಿಸಿದ, ತೊರವೆ ರಾಮಾಯಣವೆಂದೇ ಹೆಸರಾದ ಈ ಕೃತಿಕನ್ನಡದ ಪ್ರಥಮ ವೈದಿಕ ರಾಮಾಯಣ. ಭಾಮಿನೀ ಷಟ್ಪದಿಯಲ್ಲಿರುವ ಈ ಆರು ಕಾಂಡಗಳ ರಾಮಾಯಣಕ್ಕೆ ವಾಲ್ಮೀಕಿ ರಾಮಾಯಣವೇ ಮೂಲಾಧಾರವಾದರೂ, ಇದರ ಮೇಲೆ ಆಧ್ಯಾತ್ಮ ರಾಮಾಯಣದ ಪ್ರಭಾವವೂ ಹೆಚ್ಚಿದೆ ಎಂದು ವಿದ್ವಾಂಸರು ಗುರುತಿಸುತ್ತಾರೆ.

ಇನ್ನೂ ಹೆಸರಿಸಬೇಕೆಂದರೆ, ಶಂಕರನಾರಾಯಣ ವಿರಚಿತ ಆಧ್ಯಾತ್ಮ ರಾಮಾಯಣ, ಹರಿದಾಸ ಕವಿಯ ಮೂಲಬಲರಾಮಾಯಣ, ವೆಂಕಮಾತ್ಯ ವಿರಚಿತ ಶ್ರೀರಾಮಕಥಾಭ್ಯುದಯ, ಅನಾಮಿಕ ಕವಿಯ ತಿರುಮಲೇಶಚರಿತೆ, ವರದವಿಠ್ಠಲ ರಾಮಾಯಣ, ಮುಮ್ಮಡಿಕೃಷ್ಣರಾಜ ವಿರಚಿತ ಆಧ್ಯಾತ್ಮ ರಾಮಾಯಣ, ನಂದಳಿಕೆ ಲಕ್ಷ್ಮೀನಾರಾಯಣ ಅಥವಾ ಮುದ್ದಣನ ರಾಮಾಶ್ವಮೇಧ, ಸೋಸಲೆ ಅಯ್ಯಾ ಶಾಸ್ತ್ರಿಗಳ ಶೇಷ ರಾಮಾಯಣ, ಪ್ರಮುಖವಾದವು. ಇನ್ನು ಕುವೆಂಪು ಅವರ ಶ್ರೀರಾಮಾಯಣದರ್ಶನಮ್ ಕನ್ನಡಕ್ಕೆ ಜ್ಞಾನಪೀಠ ತಂದುಕೊಟ್ಟ ರಾಮಾಯಣ ಮಹಾಕಾವ್ಯ. ಭೈರಪ್ಪನವರ ಉತ್ತರಕಾಂಡ ರಾಮಾಯಣಕ್ಕೆ ಹೊಸ ಒಳಹನ್ನು ಕೊಟ್ಟ ಕೃತಿ. ವೀರಪ್ಪ ಮೊಯಿಲಿ ಅವರ ರಾಮಾಯಣ ಮಹಾನ್ವೇಷಣಂ, ಗಣಪತಿ ಹೆಗ್ಡೆ ಅವರ ರಸರಾಮಾಯಣ ಹೀಗೆ ಇನ್ನೂ ಅನೇಕ ಕಾವ್ಯಗಳು ಕಾದಂಬರಿಗಳು ನಾಟಕಗಳು ರಾಮಾಯಣವನ್ನು ಆಧರಿಸಿ ಇಂದಿಗೂ ಬರುತ್ತಿವೆ.

ತಮಿಳುನಾಡಿನ ತಮಿಳು ಭಾಷೆಯಲ್ಲಿಯೇ ಬಹು ಪ್ರಾಚೀನ ಕಾಲದಿಂದ ಗ್ರಂಥಗಳ ರಚನೆಯಾಗುತ್ತಿದುದು. ತಮಿಳಿನ ಆದಿ ಸಾಹಿತ್ಯದಲ್ಲಿ ಮೂರು ಸಂಘಗಳಿವೆ. ಆ ಕಾಲದ ಕೃತಿಗಳಲ್ಲಿ ತಿರುಮರೆಶೈ ಆಚಾರ್, ಪೆರಿಯಾವ್ವಾರ್, ಕುಲಶೇಖರ, ತಿರುಮಂಗೈ ಆಚಾರ್ ಅವರ ಕೃತಿಗಳಲ್ಲಿ ರಾಮನ, ರಾಮಾಯಣದ ಕುರಿತ ಅನೇಕ ಉಲ್ಲೇಖಗಳು ಸಿಕ್ಕುತ್ತವೆ. ಆದರೂ ತಮಿಳಿನಲ್ಲಿ ಪೂರ್ಣ ರಾಮಾಯಣ ರಚಿತವಾಗಿರಲಿಲ್ಲ. ಆ ಕಾಲದ ನಂತರ, ಭಕ್ತಿ ಸಾಹಿತ್ಯದ ಪ್ರಭಾವದಿಂದ 10ನೆಯ ಶತಮಾನದಲ್ಲಿ ಮೊದಲ ಸಂಪೂರ್ಣ ರಾಮಾಯಣ ರಚಿತವಾಯಿತು. ಇದನ್ನು ರಚಿಸಿದವರು, ತಂಜಾವೂರಿನ ತಿರುವಳಂದೂರಿನಲ್ಲಿ ಹುಟ್ಟಿದ ಕಂಬರು. ಮೂಲತಃ ವೈಷ್ಣವರಾದ ಇವರು ತಮಿಳು ಮತ್ತು ಸಂಸ್ಕೃತ ಭಾಷೆಯ ಉದ್ದಾಮ ಪಂಡಿತರಾಗಿದ್ದರು. ಕಂಬರಾಮಾಯಣವೆಂದೇ ಪ್ರಸಿದ್ಧವಾದ ಈ ಕೃತಿಯ ಮೂಲ ಹೆಸರು ರಾಮಾವತಾರಮ್. ಆರು ಕಾಂಡಗಳಲ್ಲಿ ರಚಿತವಾಗಿರುವ ಈ ಕೃತಿಯಲ್ಲಿ 4 ಸಾಲುಗಳಿರುವ 10000ಕ್ಕಿಂತ ಹೆಚ್ಚಿನ ವೆಣ್ಬಾ ಛಂದಸ್ಸಿನ ವೃತ್ತಗಳಿವೆ. ವಾಲ್ಮೀಕಿ ರಾಮಾಯಣವೇ ಆಧಾರವಾಗಿರುವುದರಿಂದ, ಕಂಬರು ಬಿಟ್ಟ ಉತ್ತರಕಾಂಡವನ್ನು ಒಟ್ಟುಕ್ಕೂತ್ತರೆಂಬುವರು ರಚಿಸಿ ಪೂರ್ಣಗೊಳಿಸಿದ್ದಾರೆ. ರಾಮನಿಗೆ ದೈವತ್ವ ಮತ್ತು ಮಾನವತ್ವಗಳೆರಡನ್ನೂ ಮಿತವಾಗಿ ಹದವಾಗಿ ಮೇಳೈಸಿ ಕಂಬರು ರೂಪಿಸಿದ್ದಾರೆ. ಕಂಬರಾಮಾಯಣವನ್ನು ರಾಗತಾಳ ನೃತ್ಯಗಳ ಹಿನ್ನೆಲೆಯಲ್ಲಿ ಇಂದಿಗೂ ತಮಿಳುನಾಡಿನಲ್ಲಿ ಹಾಡಲಾಗುತ್ತದೆ. ಆದ್ದರಿಂದಲೇ, ವಾಲ್ಮೀಕಿಯ ಕಾವ್ಯವನ್ನು ಪಾಠ್ಯೇ ಗೇಯೇ ಚ ಮಧುರ ಎಂದರೆ, ಕಂಬರ ರಾಮಾಯಣವನ್ನು, ಪಾಠ್ಯೇ ಗೇಯೇ ನೃತ್ಯೇ ಚ ಮಧುರಮ್ ಎನ್ನುತ್ತಾರೆ. ರಾಜಾಜಿ ಅವರ ಚಕ್ರವರ್ತಿ ತಿರುಮಹನ್, ಆರ್ಮುಗಂ ನಾವಾಲಾರ್ಯರ ಗದ್ಯರಾಮಾಯಣ ತಮಿಳಿನಲ್ಲಿ ಬಹು ಪ್ರಸಿದ್ಧವಾದವು.

ತೆಲುಗಿನಲ್ಲೂ ಸಾಕಷ್ಟು ರಾಮಾಯಣಗಳು ಓದಿಗೆ ಸಿಗುತ್ತವೆ. ತೆಲುಗಿನ ತಿಕ್ಕನ ಕವಿಯು 13ನೆಯ ಶತಮಾನದಲ್ಲಿ ನಿರ್ವಚನೋತ್ತರ ರಾಮಾಯಣ ಎಂಬ ಉತ್ತರರಾಮಾಯಣದ ಕತೆಯ ರಚನೆಯನ್ನು ಆರಂಭ ಮಾಡುವುದರೊಂದಿಗೆ, ತೆಲುಗಿನಲ್ಲೂ ರಾಮಾಯಣ ಶಕ ಪ್ರಾರಂಭವಾಯಿತು ಎನ್ನಬಹುದು. ನಂತರ 50 ವರ್ಷಗಳಾದ ಮೇಲೆ, ಎರ್ರಪ್ರಗಡನೆಂಬ ಕವಿ ಒಂದು ರಾಮಾಯಣವನ್ನು ರಚಿಸಿದನೆಂದು ನಂಬಲಾಗುತ್ತದೆ. ಸಂಪೂರ್ಣ ರಾಮಾಯಣವೂ 13ನೆಯ ಶತಮಾನದಲ್ಲಿಯೇ ರಚಿತವಾಯ್ತೆಂಬುದು ವಿಶೇಷ. ಶತಮಾನದ ಆದಿಯಲ್ಲಿ ರಂಗನಾಥ ಕವಿಯು ದ್ವಿಪದಿ ಛಂದಸ್ಸಿನಲ್ಲಿ ರಚಿಸಿದರೆ, ಅಂತ್ಯದಲ್ಲಿ ಭಾಸ್ಕರ ಕವಿಯು ಚಂಪೂವಿನಲ್ಲಿ ರಚಿಸಿದನು. ರಂಗನಾಥ ಕವಿಯ ರಾಮಾಯಣದಲ್ಲಿ, ಅರಣ್ಯಕಾಂಡದ ಜಂಬೂ ಕುಮಾರನ ಕಥೆ, ಯುದ್ಧಕಾಂಡದ ಕಾಲನೇಮಿಯ ವೃತ್ತಾಂತ ಮತ್ತು ಸುಲೋಚನ ವೃತ್ತಾಂತಗಳು ಅದನ್ನು ಶ್ರೇಷ್ಠ ಸ್ಥಾನದಲ್ಲಿ ನಿಲ್ಲಿಸುತ್ತವೆ. ಇವಲ್ಲದೆ, ಅನ್ನಮಾಚಾರ್ಯರ ದ್ವಿಪರಾಮಾಯಣ, ಅಯ್ಯಲುರಾಜು ರಾಮಭದ್ರನ ರಾಮಾಭ್ಯುದಯಮ್ ರಘುನಾಥನಾಯಕನ ಆಂಧ್ರ ರಾಮಾಯಣ ಪ್ರಸಿದ್ಧವಾದುವು. ತೆಲುಗಿನಲ್ಲಿ ಕುಮಾರ ಮಲ್ಲಮ್ಮ, ಮಧುರವಾಣಿ, ಪಶುಪುಲತಿ ರಂಗರಾಜಮ್ಮ, ರಾಮಭದ್ರಮ್ಮ, ಚೆಬ್ರೋಲು ಸರಸ್ವತಿ ದೇವಿ ಮಹಿಳೆಯರೂ ರಾಮಾಯಣದ ಕೃತಿಗಳನ್ನು ರಚಿಸಿರುವುದು ವಿಶೇಷ.

ಇನ್ನು ಮಲಯಾಳಮ್‌ನಲ್ಲಿಯೂ ರಾಮಾಯಣಗಳ ಸಂಖ್ಯೆ ಕಡಿಮೆಯಿಲ್ಲ. ಚೀರಮಾನ್‌ನ ರಾಮಚರಿತಮ್, ಕನ್ನಸ್ಸನ್ ನಿರಣವೃತ್ತಮ್ ಛಂದಸ್ಸಿನಲ್ಲಿರುವ ರಾಮಾಯಣಮ್, ಚಂಪೂವಿನಲ್ಲಿರುವ ಅನಾಮಿಕನ ರಾಮಾಯಣ ಚಂಪೂ ರಾವಣವಧಾ ಚಂಪೂ, ತುಂಜತ್ತು ರಾಮಾನುಜನ್‌ನ ಎರುತ್ತಚ್ಚನ್ ಕಿಳಿವಾಟ್ಟು ಕಟ್ಟಾಕರನ್ ತುಂಬುರಾನ್‌ನ ರಾಮನಾಟಮ್, ಮುನ್ನಾಟ್ಟಿಯಾರನ ಉತ್ತರರಾಮಚರಿತಮ್ ಮುಖ್ಯವಾದವು.

ಬಂಗಾಳಿಯಲ್ಲಿ, ಕೃತ್ತಿವಾಸ ಓಜನ ಜನಪದ ಮಟ್ಟಿನ ರಾಮಪಾಂಚಾಲಿ ಅತ್ಯಂತ ಜನಪ್ರಿಯ. ಬೊಂಬೆಗಳ ಸಹಾಯದಿಂದ ಆಡುತ್ತಿದ್ದರಿಂದ ಪಾಂಚಾಲಿ ಅಥವಾ ಪಾಚಾಲಿ ಎಂದು ಹೆಸರು. ಪಾಚಾಲಿ ಎಂದರೆ ಆಖ್ಯಾನ ಎಂದೂ ಅರ್ಥವಿದೆ. ಅದ್ಭುತಾಚಾರ್ಯ, ಷಷ್ಟಿವೀರಸೇನ, ಗಂಗಾದಾಸಸೇನ, ಶಿವಚಂದ್ರಸೇನ, ಫಕೀರ ರಾಮಕವಿಭೂಷಣರ ಗ್ರಂಥಗಳೂ ಅತಿಜನಪ್ರಿಯ.

ಹಿಂದಿಯಲ್ಲಿ ತುಲಸೀದಾಸರ ರಾಮಚರಿತಮಾನಸ ಜನಜನಿತ ಕೃತಿ. ಪೂರ್ವಹಿಂದಿಯ ಒಂದು ರೂಪವಾದ ಬೈಸ್ ವಾರೀ ಅಥವಾ ಅವಧೀ ಭಾಷೆಯಲ್ಲಿರುವ ಈ ಕೃತಿ ಹಿಂದೂ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಿತು. ಇದಲ್ಲದೆ, ಮಾನದಾಸನ ರಾಮಚರಿತ್ರ, ಈಶ್ವರೀಪ್ರಸಾದ್ ತ್ರಿಪಾಠಿಯ ರಾಮವಿಲಾಸರಾಮಾಯಣ, ಶಂಭುನಾಥನ ರಾಮ್ ವಿಲಾಸ್, ಮಧುಸೂಧನನ ರಾಮಾಶ್ವಮೇಧ ಇತ್ಯಾದಿಗಳೂ ಇವೆ.

ಮರಾಠಿಯಲ್ಲಿ ಏಕನಾಥರ ಭಾವಾರ್ಥ ರಾಮಾಯಣ,ಶ್ರೀಧರನ ರಾಮವಿಜಯ, ಮೋರೋಪಂತನ ಲಘುರಾಮಾಯಣ, ಜನಿಜನಾರ್ಧನನ ಜಾನಕೀ ಸ್ವಯಂವರ, ಕೃಷ್ಣದಾಸ ಮುದ್ದಲಿಯ ಯುದ್ಧಕಾಂಡ, ಮಲ್ಹಾರಿಯ ಭರತಭೇಟ, ಪರಶುರಾಮನ ರಾಮಭಕ್ತ ಲಾವಣಿ, ಶಿವಪ ರಾಂಜಪೆಯ ಅಹಲ್ಯಾಭಾಂ, ಗ.ದಿ.ಮಾಡಗೋಳರ ಗೀತಾ ರಾಮಾಯಣಗಳು ಪ್ರಸಿದ್ಧವಾದವು. ಒರಿಯಾ ಭಾಷೆಯಲ್ಲಿ, ಸರಳದಾಸನ ಶಾಕ್ತಪಂಥ ಪ್ರಭಾವಿತ ವಿಲಂಕರಾಮಾಯಣ, ಬಲರಾಮದಾಸರ ಒರಿಯಾ ರಾಮಾಯಣ, ಉಪೇಂದ್ರ ಭಂಜನ, ವೈದೇಹಿಶ ವಿಲಾಸ ಮತ್ತು ರಾಮಲೀಲಾಮೃತ, ಭಕ್ತಚರಣನ ಮಧುರ ಮಂಗಲ, ಕೇಶವ ಪಟ್ನಾಯಕ್‌ರ ನಾಟ್ಯ ನಾರಾಯಣ ಯದುಮಣಿಮಹಾಪಾತ್ರನ ರಾಮವಿಲಾಸ ಮತ್ತು ಇತರ ಕೃತಿಗಳು ದೊರೆಯುತ್ತವೆ.

ಅಸ್ಸಾಮಿಯಲ್ಲಿ 14ನೆಯ ಶತಮಾನದಲ್ಲಿ ಮಾಧವ ಕಂದಲಿ ವಾಲ್ಮೀಕಿಯ ರಾಮಾಯಣವನ್ನು ಪ್ರಾಸಬದ್ಧ ದ್ವಿಪದಿಯಲ್ಲಿ ಅನುವಾದಿಸಿದನು. ನಂತರದ ದಿನಗಳಲ್ಲಿ ದುರ್ಗಾಬಾಯಿ, ನರನಾರಾಯಣ, ಶಂಕರದೇವ, ಮಾಧವದೇವ, ಅನಂತ ಆಟ, ರಘುನಾಥರಂತಹ ಕವಿಗಳೆಲ್ಲಾ ರಾಮಾಯಣವನ್ನು ವಿವಿಧ ರೂಪಗಳಲ್ಲಿ ಕಟ್ಟಿಕೊಟ್ಟಿದ್ದಾರೆ.

ಗುಜರಾತಿಯಲ್ಲಿ, ಆಖ್ಯಾನ ಸಾಹಿತ್ಯದ ಜನಕನಾದ ಭಾಲನ ರಾಮಬಾಲಚರಿತ, ರಾಮವಿರಹ, ಪ್ರೇಮಚಂದ್ರನ ರಣಯಜ್ಞ ಕೃತಿಗಳಿವೆ. ಕಾಶ್ಮೀರಿಯಲ್ಲಿ ಪ್ರಕಾಶರಾಮನ ರಾಮಾವತಾರಲೀಲ ಕೃತಿ ದೊರೆತರೆ, ಮೈಥಿಲೀ ಭಾಷೆಯಲ್ಲಿ ಚಂಡಾಝಾ ಮತ್ತು ಲಾಲ್ ವಾಸನ ರಾಮಾಯಣಗಳು ದೊರೆಯುತ್ತವೆ.

ಇನ್ನು ವಿದೇಶಗಳಲ್ಲೂ ರಾಮನ ರಾಜ್ಯಭಾರವಿದೆ. ಥಾಯ್ ಲಾಂಡ್, ಮಯನ್ಮಾರ್, ಕಾಂಬೋಡಿಯಾ, ಮಲೇಷಿಯಾ, ಇಂಡೋನೇಷಿಯಾ, ಜಪಾನ್, ಫಿಲಿಫೀನ್ಸ್, ರಷಿಯಾ, ಯೂರೋಪು ಮತ್ತು ಚೈನಾದ ಕೆಲವೆಡೆ ರಾಮಾಯಣ ಅಲ್ಲಿನ ಸಂಸ್ಕೃತಿಯಲ್ಲಿ ಮಿಳಿತಗೊಂಡಿದೆ. ಅದನ್ನು ಬರೆಯಲು ಹೊರಟರೆ ಅದು ಮತ್ತೊಂದು ಲೇಖನವೇ ಆಗುತ್ತದೆ.

"ಶ್ರೀರಾಮಾ ರಾಮ ರಾಮ ರಾಮೇತಿ ರಮೇ ರಾಮೇ ಮನೋರಮೇ ಸಹಸ್ರನಾಮ ತತ್ ತುಲ್ಯಂ ರಾಮನಾಮ ವರಾನನೇ ಎಂದರೂ ಒಂದೇ

ಇನ್ನಷ್ಟು ಬೇಕೆನ್ನ ಹೃದಯಕ್ಕೆ ರಾಮಾ

ನಿನ್ನಷ್ಟು ನೆಮ್ಮದಿಯು ಎಲ್ಲಿಹುದೋ ರಾಮಾ ಎಂದರೂ ಒಂದೇ.

ಏಕಿವೆ ಇಷ್ಟು ರಾಮಾಯಣಗಳು, ಏಕೆ ಎಲ್ಲರಿಗೂ ಅವನನ್ನು ಕುರಿತು ಬರೆಯುವ ಹಂಬಲ ಇನ್ನೂ ತೀರಿಲ್ಲ ಎಂದರೆ ನಮ್ಮ ಬದುಕಿನ ಜೀವಸ್ರೋತ ಅವನು

ರಾಮಾ ವಿಶ್ವವ್ಯಾಪಿ ವಿಶ್ವವಂದ್ಯ ರಾಮಾಯಣ ವಿಶ್ವಕೃತಿ?

ಸ್ವತಂತ್ರವಾಗಿ ಹೆಲ್ತ್ ಇನ್ಶೂರೆನ್ಸ್ ಕಂಪನಿಯಾಗಿ ಕಾರ್ಯ ನಿರ್ವಹಿಸಲು ನಾರಾಯಣ ಹೆಲ್ತ್‌ಗೆ ಅನುಮತಿ

ಮೈಸೂರು ಜ.17– ನಾರಾಯಣ ಹೃದಯಾಲಯ ಲಿಮಿಟೆಡ್‌ನ (ನಾರಾಯಣ ಹೆಲ್ತ್) ಸಂಪೂರ್ಣ ಸ್ವಾಮ್ಯದ ಅಂಗ ಸಂಸ್ಥೆಯಾದ ನಾರಾಯಣ ಹೆಲ್ತ್ ಇನ್ಶೂರೆನ್ಸ್ ಲಿಮಿಟೆಡ್ (ನಾರಾಯಣ ಹೆಲ್ತ್) ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ (ಐಆರ್‌ಡಿಎಐ) ಸ್ವತಂತ್ರ ಆರೋಗ್ಯ ವಿಮಾ ಕಂಪನಿಯಾಗಿ ಕಾರ್ಯ ನಿರ್ವಹಿಸಲು ಪರವಾನಗಿ ಪಡೆದಿದೆ.

ಈ ಕುರಿತು ಮಾತನಾಡಿರುವ ನಾರಾಯಣ ಹೃದಯಾಲಯದ ಸಂಸ್ಥಾಪಕ ಅಧ್ಯಕ್ಷರೂ ಆದ ನಾರಾಯಣ ಹೆಲ್ತ್ ಇನ್ಶೂರೆನ್ಸ್‌ನ ಅಧ್ಯಕ್ಷ ಡಾ. ದೇವಿಶೆಟ್ಟಿ ಅವರು, ಸ್ವತಂತ್ರ ಆರೋಗ್ಯ ವಿಮಾ ಕಂಪನಿಯಾಗಿ ಕಾರ್ಯ ನಿರ್ವಹಿಸಲು ಪರವಾನಗಿ ಸ್ವೀಕರಿಸಲು ನಾವು ಸಂತೋಷಪಡುತ್ತೇವೆ. ಇದು ನಮ್ಮ ಕಂಪನಿಗೆ ಒಂದು ಪ್ರಮುಖ ಮೈಲಿಗಲ್ಲಾಗಿದ್ದು, ಆರೋಗ್ಯ ಸೇವೆಯನ್ನು ಎಲ್ಲರಿಗೂ ಲಭ್ಯವಾಗಿಸುವ ನಮ್ಮ ಗುರಿ ಸಾಧಿಸಲು ಇದು ಅನುವು ಮಾಡಿಕೊಡುತ್ತದೆ. ಈ ನಿಟ್ಟಿನಲ್ಲಿ ಮಾರ್ಗದರ್ಶನ ನೀಡಿದ ಐಆರ್‌ಡಿಎಐ ಅಧ್ಯಕ್ಷ ದೇಬಶೀಶ್ ಪಾಂಡಾ ಮತ್ತು ಸಂಪೂರ್ಣ ಐಆರ್‌ಡಿಎಐ ತಂಡದ ಬೆಂಬಲಕ್ಕಾಗಿ ನಾವು ಕೃತಜ್ಞರಾಗಿರುತ್ತೇವೆ ಎಂದಿದ್ದಾರೆ.

2047ರ ವೇಳೆಗೆ ಎಲ್ಲರಿಗೂ ವಿಮೆ ಒದಗಿಸುವ ಧ್ಯೇಯದಿಂದ ನಾವು ಪ್ರೇರಿತರಾಗಿದ್ದೇವೆ ಮತ್ತು ಈ ಗುರಿಯನ್ನು ಸಾಧಿಸುವಲ್ಲಿ ನಮ್ಮ ಕಂಪನಿಯು ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂದು ನಂಬುತ್ತೇವೆ. ನಾರಾಯಣ ಹೆಲ್ತ್ ಇನ್ಶೂರೆನ್ಸ್, ಜನರಿಗೆ ಅರ್ಥ ಮಾಡಿಕೊಳ್ಳಲು ಸುಲಭವಾದ ಸಮಗ್ರ ಪಾಲಿಸಿಗಳನ್ನು ರಚಿಸುವ ಮೂಲಕ ಆರೋಗ್ಯ ವಿಮೆಯನ್ನು ಸರಳೀಕರಣಗೊಳಿಸುವತ್ತ ಗಮನಹರಿಸುತ್ತದೆ.

ನಾರಾಯಣ ಹೃದಯಾಲಯ ಲಿಮಿಟೆಡ್‌ನ ಉಪಾಧ್ಯಕ್ಷ ಮತ್ತು ನಾರಾಯಣ ಹೆಲ್ತ್ ಇನ್ಶೂರೆನ್ಸ್ ಲಿಮಿಟೆಡ್‌ನ ನಿರ್ದೇಶಕ ವಿರೇನ್ ಶೆಟ್ಟಿ ಮಾತನಾಡಿ, ನಮ್ಮ ಚಂದಾದಾರರಿಗೆ ತಡೆರಹಿತ ಮತ್ತು ಸಮಗ್ರ ಆರೋಗ್ಯ ಸೇವೆಯ ಅನುಭವವನ್ನು ಒದಗಿಸುವುದು ನಮ್ಮ ಗುರಿಯಾಗಿದೆ. ಈ ಪರವಾನಗಿಯು ಆರೋಗ್ಯ ವಿಮಾ ಉತ್ಪನ್ನಗಳು ಮತ್ತು ಸೇವೆಗಳ ಸಮಗ್ರ ಪ್ಯಾಕೇಜ್ ನೀಡಲು ನಮಗೆ ಅನುವು ಮಾಡಿಕೊಡುತ್ತದೆ. ಇದು ಜನರನ್ನು ಆರೋಗ್ಯವಾಗಿಡುವ ಮತ್ತು ಸಮಾಜದ ಹಿಂದುಳಿದ ವರ್ಗಗಳಿಗೆ ಕೈಗೆಟುಕುವ ದರದಲ್ಲಿ ಆರೋಗ್ಯ ಸೇವೆಯನ್ನು ಒದಗಿಸುವ ನಮ್ಮ ಉದ್ದೇಶವನ್ನು ಪೂರೈಸಲು ನಮಗೆ ಸಹಾಯ ಮಾಡುತ್ತದೆ ಎಂದಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಬುಧವಾರ ಮೈಸೂರು ರೇಸ್ ಕ್ಲಬ್‌ನಲ್ಲಿ ನಡೆದ ರೇಸ್‌ನಲ್ಲಿ ವಿಜೇತ ಕುದುರೆ 'ಫೆರೆಟ್ಟಿಂಯು' ತರಬೇತುದಾರ ಎಂ.ಈಶ್ವರ್ ಅವರಿಗೆ 'ದಿ ಏರ್ ಫೋರ್ಸ್ ಟ್ರೋಫಿ'ಯನ್ನು ಏರ್ ಮಾರ್ಷಲ್ ಬಿ.ಮಣಿಕಂಠನ್ ಅವರು ಪ್ರದಾನ ಮಾಡಿದರು. ಚಿತ್ರದಲ್ಲಿ ಎಂಆರ್‌ಸಿ ಅಧ್ಯಕ್ಷ ಕೆ.ಎಂ.ಚಂದ್ರೇಗೌಡ, ಸ್ಟೀವರ್ಡ್ಸ್, ಕಮಿಟಿ ಸದಸ್ಯರನ್ನು ಕಾಣಬಹುದು.

ಚಾ.ನಗರ ಲೋಕಸಭಾ ಕ್ಷೇತ್ರಕ್ಕೆ ಕಾಂಗ್ರೆಸ್ ಟಿಕೆಟ್‌ಗೆ ಮನವಿ



ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಜಿ.ಡಿ.ರಾಜಗೋಪಾಲ್ ಮಾತನಾಡಿದರು. ಚಿತ್ರದಲ್ಲಿ ಗೋಪಾಲ್, ನಾಗರಾಜ್, ಮಣಿಕಂಠೇಶ್ವರ, ರಘು, ಹೇಮಂತ್, ಪ್ರಶಾಂತ್, ಚಂದ್ರು, ನಾಗಣ್ಣ ಅವರನ್ನು ಕಾಣಬಹುದು.

ಮೈಸೂರು,ಜ.17(ಜಿಎ)–ಚಾಮರಾಜನಗರ ಮೀಸಲು ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸಲು ಕಾಂಗ್ರೆಸ್ ಪಕ್ಷ ಅವಕಾಶ ನೀಡಬೇಕು ಎಂದು 2019ರ ಲೋಕಸಭಾ ಪರಾಜಿತ ಅಭ್ಯರ್ಥಿ ಜಿ.ಡಿ.ರಾಜಗೋಪಾಲ್ ಮನವಿ ಮಾಡಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಜನಾರ್ಧನ ರೆಡ್ಡಿಯವರ ಕಲ್ಯಾಣ ಕರ್ನಾಟಕ ಪ್ರಗತಿಪಕ್ಷ ಹಾಗೂ ಭಾರತೀಯ ಏಕತಾ ಪಾರ್ಟಿಯಿಂದ ಈಗಾಗಲೇ ಆಹ್ವಾನ ಬಂದಿದೆ. ಚುನಾವಣೆಗೆ ಸ್ಪರ್ಧಿಸುವುದು ನಿಶ್ಚಯವಾಗಿದೆ. ಆದ್ದರಿಂದ ಕಾಂಗ್ರೆಸ್ ಪಕ್ಷ ಅವಕಾಶ ಕಲ್ಪಿಸಿ ಕೊಡಬೇಕೆಂದು ಮನವಿ ಮಾಡಿದರು.

ಹಾಗೇ ವರುಣ ತಾಲೂಕು ಕೇಂದ್ರ, ನಂಜುಂಡೇಶ್ವರ ಅಭಿವೃದ್ಧಿ ಪ್ರಾಧಿಕಾರ, ತಿ.ನರಸೀಪುರದಲ್ಲಿ ಮಾರುಕಟ್ಟೆ ಸ್ಥಾಪನೆ, ಎಚ್.ಡಿ.ಕೋಟೆಯಲ್ಲಿ ಕಾರ್ಖಾನೆಗಳ ಸ್ಥಾಪನೆ ನನ್ನ ಗುರಿಯಾಗಿದ್ದು, ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಈ ಎಲ್ಲಾ ವಿಚಾರಗಳ ಬಗ್ಗೆ ತಿಳಿಸಲಿದ್ದೇನೆ ಎಂದರು. ಸುದ್ದಿಗೋಷ್ಠಿಯಲ್ಲಿ ಬೆಂಬಲಿಗರಾದ ಗೋಪಾಲ್, ನಾಗರಾಜ್, ಮಣಿಕಂಠೇಶ್ವರ, ರಘು, ಹೇಮಂತ್, ಪ್ರಶಾಂತ್, ಚಂದ್ರು, ನಾಗಣ್ಣ ಉಪಸ್ಥಿತರಿದ್ದರು.

ಎನ್‌ಇಪಿ ಮುಂದುವರಿಕೆಗಾಗಿ ಸಹಿ ಸಂಗ್ರಹ



ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಡಾ.ಈ.ಸಿ.ನಿಂಗರಾಜ್‌ಗೌಡ ಮಾತನಾಡಿದರು. ಎಂ.ಶಿವು, ಪ್ರಜ್ವಲ್, ಜಯಣ್ಣ ಚಿತ್ರದಲ್ಲಿದ್ದಾರೆ.

ಮೈಸೂರು,ಜ.17(ಜಿಎ)–ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) ಮುಂದುವರಿಸುವಂತೆ 80 ಲಕ್ಷಕ್ಕೂ ಅಧಿಕ ಜನರು ಸಹಿ ಸಂಗ್ರಹ ಅಭಿಯಾನದಲ್ಲಿ ಒತ್ತಾಯಿಸಿದ್ದಾರೆ ಎಂದು ಪೀಪಲ್ಸ್ ಫೋರಮ್ ಫಾರ್ ಕರ್ನಾಟಕ ಎಜುಕೇಶನ್ ಸದಸ್ಯ ಡಾ.ಈ.ಸಿ.ನಿಂಗರಾಜ್ ಗೌಡ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಸಾಕಷ್ಟು ಅನುಕೂಲವಿದ್ದು, ಈ ಹಿನ್ನೆಲೆಯಲ್ಲಿ ಸಂಸ್ಥೆ ವತಿಯಿಂದ ಶಿಕ್ಷಣ ತಜ್ಞರು, ಶಿಕ್ಷಕರು, ಪೋಷಕರು ಮತ್ತು ವಿದ್ಯಾರ್ಥಿಗಳಿಂದ ಸಹಿ ಸಂಗ್ರಹ ಅಭಿಯಾನ ನಡೆಸಿದ್ದು, ಕೆಲವೇ ದಿನಗಳಲ್ಲಿ ಇದು ಪೂರ್ಣಗೊಳಲಿದೆ ಎಂದರು. ಈ ಅಭಿಯಾನದಲ್ಲಿ ಶೇ.60ರಷ್ಟು ಮಹಿಳೆಯರು ಎನ್‌ಇಪಿ ಪರವಾಗಿದ್ದು, ಕಾಂಗ್ರೆಸ್ ಸರ್ಕಾರದ ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ) ಜಾರಿ ನಿರ್ಧಾರ ತಡೆಯಲು ಆಗ್ರಹಿಸಿದ್ದಾರೆ. ಜಿಲ್ಲೆಯಲ್ಲಿಯೂ 4 ಲಕ್ಷ ಮಂದಿ ಎಸ್‌ಇಪಿ ವಿರೋಧಿಸಿ ಸಹಿ ಹಾಕಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಈ ಬಗ್ಗೆ ಭಾರಿ ಅಸಮಾಧಾನ ಉಂಟಾಗಿದೆ. ಆದ್ದರಿಂದ ನಮ್ಮ ಸಮೀಕ್ಷೆ ವರದಿಯನ್ನು ಶೀಘ್ರವೇ ರಾಜ್ಯಪಾಲರಿಗೆ ನೀಡಲಿದ್ದೇವೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಮಿತಿ ಪ್ರಮುಖರಾದ ಎಂ.ಶಿವು, ಪ್ರಜ್ವಲ್, ಜಯಣ್ಣ ಉಪಸ್ಥಿತರಿದ್ದರು.

ಇಂದು, ನಾಳೆ 'ಹೈ ಲೈಫ್ ಬ್ರೈಡ್ಸ್' ಪ್ರದರ್ಶನ



ಸುದ್ದಿಗೋಷ್ಠಿಯಲ್ಲಿ ಶೋಮಿಕಾ ಎಸ್.ರಾವ್ ಮಾತನಾಡಿದರು.

ಮೈಸೂರು,ಜ.17(ಜಿಎ)–ಮೈಸೂರಿನ ರ್‍ಯಾಡಿಸಲ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಹೈಲೈಫ್ ಸಂಸ್ಥೆ ವತಿಯಿಂದ ಜ.18 ಮತ್ತು 19ರಂದು 'ಹೈ ಲೈಫ್ ಬ್ರೈಡ್ಸ್' ಪ್ರದರ್ಶನ ಮತ್ತು ಮಾರಾಟಮೇಳ ಆಯೋಜಿಸಲಾಗಿದೆ ಎಂದು ಸಹ ಸಂಘಟಕಿ ಶೋಮಿಕಾ ಎಸ್.ರಾವ್ ತಿಳಿಸಿದರು

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 7 ವರ್ಷಗಳಿಂದ ಸಂಸ್ಥೆ ವತಿಯಿಂದ ಮೈಸೂರಿನಲ್ಲಿ ಮಹಿಳೆಯರ ಆಭರಣ ಮತ್ತು ಅಲಂಕಾರಿಕ ವಸ್ತುಗಳ ಪ್ರದರ್ಶನ, ಮಾರಾಟವನ್ನು ಆಯೋಜಿಸುತ್ತಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತದೆ ಎಂದರು. 'ಹೈ ಲೈಫ್ ಬ್ರೈಡ್ಸ್' 8ನೇ ಆವೃತ್ತಿ ಜ.18 ಮತ್ತು 19ರಂದು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ನಡೆಯಲಿದೆ. ದೇಶದ ವಿವಿಧ ರಾಜ್ಯಗಳ ಫ್ಯಾಶನ್ ಪರಿಕರಗಳು, ಆಭರಣಗಳು, ಅಲಂಕಾರಿಕ ವಸ್ತುಗಳು ಹಾಗೂ ಪ್ರತಿಷ್ಠಿತ ವಿನ್ಯಾಸಕಾರರ ಉಡುಗೆಗಳು ಲಭ್ಯವಿರಲಿದೆ. ಮದುವೆ ತಯಾರಿಯಲ್ಲಿರುವ ಕುಟುಂಬಕ್ಕೆ ಒಂದು ಉತ್ತಮ ಕಲೆಕ್ಷನ್ ದೊರೆಯಲಿದೆ ಎಂದರು. ಗೋಷ್ಠಿಯಲ್ಲಿ ಮಾರುಕಟ್ಟೆ ಸಹಾಯಕ ಶ್ರೀಕಾಂತ್ ಉಪಸ್ಥಿತರಿದ್ದರು.

ನಿಧನ

ಎಂ.ಪುಟ್ಟಸ್ವಾಮಿ



ಮೈಸೂರು: ನರಸಿಂಹರಾಜ ಕ್ಷೇತ್ರದ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಮಾಜಿ ಅಧ್ಯಕ್ಷ ಎಂ.ಪುಟ್ಟಸ್ವಾಮಿ (ಪುಟ್ಟರಾಜು) ಬುಧವಾರ ಮುಂಜಾನೆ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 47 ವರ್ಷ ವಯಸ್ಸಾಗಿತ್ತು. ಮೃತರಿಗೆ ತಾಯಿ ರಾಮಮ್ಮ, ಪತ್ನಿ ಮಹದೇವಿ (ಮಧು), ಪುತ್ರಿ ಪೂರ್ವಿಕಾ, ಪುತ್ರ ಧನುಷ್ ಇದ್ದಾರೆ.

1994ರಿಂದ ಬಿಜೆಪಿ ಕಾರ್ಯಕರ್ತರಾಗಿದ್ದ ಪುಟ್ಟಸ್ವಾಮಿ ಎರಡು ಬಾರಿ ನಗರಪಾಲಿಕೆ ಚುನಾವಣೆಯಲ್ಲಿ ಸ್ಪರ್ಧಿಸಿ ಪರಾಭವಗೊಂಡಿದ್ದರು. 53ನೇ ವಾರ್ಡಿನ ಅಧ್ಯಕ್ಷರಾಗಿ, ಎನ್.ಆರ್.ಕ್ಷೇತ್ರ ಬಿಜೆಪಿ ಕಾರ್ಯದರ್ಶಿಯಾಗಿ, ನಗರ ಸ್ಲಂ ಮೋರ್ಚಾ ಉಪಾಧ್ಯಕ್ಷರಾಗಿ, ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಇತ್ತೀಚೆಗೆ ಪಾರ್ಶ್ವವಾಯುವಿಗೆ ತುತ್ತಾಗಿದ್ದ ಪುಟ್ಟಸ್ವಾಮಿ ಅವರಿಗೆ ಬುಧವಾರ ಬೆಳಗ್ಗೆ ಹೃದಯಾಘಾತದಿಂದ ಆಸ್ಪತ್ರೆಯಲ್ಲಿಯೇ ಕೊನೆಯುಸಿರೆಳೆದರು. ಮೃತರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರಘಾಟ್‌ನಲ್ಲಿ ನೆರವೇರಿತು.

ಮೃತರ ನಿಧನಕ್ಕೆ ಸಂಸದ ಪ್ರತಾಪ ಸಿಂಹ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಮಾಜಿ ಶಾಸಕ ಮಾರುತಿರಾವ್ ಪವಾರ್, ಮಾಜಿ ಉಪಮೇಯರ್‌ಗಳಾದ ಡಾ.ಜಿ.ರೂಪಾ, ಶ್ರೀಧರ್, ಮಾಜಿ ಸದಸ್ಯರಾದ ಸತ್ಯರಾಜ್, ಪ್ರದೀಪ್, ಎಂ.ಕೆ.ಶಂಕರ್, ಸು.ಮುರುಳಿ, ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ.ಮಂಜುನಾಥ್, ಮುಖಂಡರಾದ ಯೋಗೇಶ್ ಬಾಬು, ರವಿ, ಕೃಷ್ಣಪ್ಪ, ಮಣಿಕಂಠ ಅನೇಕರು ಸಂತಾಪ ಸೂಚಿಸಿದ್ದಾರೆ.

ಶ್ರೀಮತಿ ಎಂ.ಡಿ. ಪ್ರೇಮಾ



ಮೈಸೂರು ಸಿಎಫ್‌ಟಿಆರ್‌ಐ ನಿವೃತ್ತ ವಿಜ್ಞಾನಿ ಡಾ.ಎಂ.ಮಹದೇವಯ್ಯ ಅವರ ಪತ್ನಿ ಶ್ರೀಮತಿ ಎಂ.ಡಿ.ಪ್ರೇಮಾ (75) ಅವರು ವಯೋಸಹಜ ಅನಾರೋಗ್ಯದಿಂದ ಇಂದು ನಿಧನರಾದರು. ಇವರ ಸರಸ್ವತಿಪುರಂ ನಿವಾಸಿ. ಮೃತರು ಪತಿ, ಪುತ್ರಿ ಎಂ.ಶಾರದ, ಪುತ್ರರಾದ ಎಂ.ಮಹದೇವಪ್ರಸಾದ್, ಎಂ.ಶ್ರೀನಿವಾಸಕುಮಾರ್, ಆರು ಮೊಮ್ಮಕ್ಕಳು, ಇಬ್ಬರು ಮರಿಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಕುವೆಂಪುನಗರ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ವಕೀಲರ ಸಂಘದ 2024ನೇ ಸಾಲಿನ ಡೈರಿ ಬಿಡುಗಡೆ

ರಾಜ್ಯ ವಕೀಲರ ಸಂರಕ್ಷಣಾ ಕಾಯ್ದೆ ಜಾರಿಗೆ ಒತ್ತಾಸೆ: ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್ ಭರವಸೆ



ಮೈಸೂರು ಜಿಲ್ಲಾ ನ್ಯಾಯಾಲಯದ ಆವರಣದ ಮೈಸೂರು ವಕೀಲರ ಸಂಘದ ಕಚೇರಿಯಲ್ಲಿ 2024ರ ಡೈರಿಯನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ನ್ಯಾ.ಪ್ರಭಾವತಿ ಎಂ.ಹಿರೇಮಠ್, ಶಾಸಕ ದರ್ಶನ್ ಧ್ರುವನಾರಾಯಣ್ ಬಿಡುಗಡೆಗೊಳಿಸಿದರು.

ಮೈಸೂರು,ಜ.17(ಎಸ್‌ಪಿಎನ್)– 'ರಾಜ್ಯ ವಕೀಲರ ಸಂರಕ್ಷಣಾ ಕಾಯ್ದೆ' ಜಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕಟಿಬದ್ಧವಾಗಿದ್ದು, ಈ ಕುರಿತು ನಾನೂ ಕೂಡ ಸದನದಲ್ಲಿ ಒತ್ತಾಯಿಸುತ್ತೇನೆ ಎಂದು ವಕೀಲರೂ ಆದ ಶಾಸಕ ದರ್ಶನ್ ಧ್ರುವನಾರಾಯಣ್ ಭರವಸೆ ನೀಡಿದರು.

ಮೈಸೂರು ಜಿಲ್ಲಾ ನ್ಯಾಯಾಲಯದ ಆವರಣದ ಮೈಸೂರು ವಕೀಲರ ಸಂಘದ ಕಚೇರಿಯಲ್ಲಿ 2024ರ ಡೈರಿ ಬಿಡುಗಡೆಗೊಳಿಸಿ ಮಾತನಾಡಿದ ಶಾಸಕರು, ವಿರಾಜಪೇಟೆ ಶಾಸಕ, ಹಿರಿಯ ವಕೀಲ ಪೊನ್ನಣ್ಣ ಅವರು ವಕೀಲರ ಸಂರಕ್ಷಣಾ ಕಾಯ್ದೆ ಜಾರಿಗೆ ಮುತುವರ್ಜಿ ವಹಿಸಿದ್ದಾರೆ. ಇದರ ಬಗ್ಗೆ ಕಾಂಗ್ರೆಸ್ ಸರ್ಕಾರವೂ ಬದ್ಧವಾಗಿದೆ ಎಂದು ತಿಳಿಸಿದರು.

ಈ ಕುರಿತು ಕೆಲ ದಿನಗಳ ಹಿಂದೆ ರಾಜ್ಯಾದ್ಯಂತ ವಕೀಲ ಸಮೂಹ ಪ್ರತಿಭಟನೆ ಹಮ್ಮಿಕೊಂಡು ಸರ್ಕಾರದ ಮೇಲೆ ಒತ್ತಡ ತಂದಿದ್ದಾರೆ. ನಾನೂ ಇದಕ್ಕೆ ಕೈ ಜೋಡಿಸುತ್ತೇನೆ. ಈ ಚಳವಳಿಯಲ್ಲಿ ಮೈಸೂರು ವಕೀಲರ ಸಂಘ ಮುಂಚೂಣಿಯಲ್ಲಿದ್ದು, 'ವಕೀಲರ ಸಂರಕ್ಷಣ ಕಾಯ್ದೆ' ಜಾರಿಗೆ ಸರ್ಕಾರದ ಮೇಲೆ ನಿರಂತರ ಸಂಪರ್ಕ ಸಾಧಿಸಿ, ಒತ್ತಡ ತರುತ್ತಿದೆ. ಇದರ ಹಿಂದೆ ಮೈಸೂರು ವಕೀಲರ ತಂಡ ಕೆಲಸ ಮಾಡುತ್ತಿರುವುದು ಸಂತೋಷದ ಸಂಗತಿ ಎಂದರು.

ಯುವ ವಕೀಲರು ಕೇಸುಗಳ ಕುರಿತು ಸಮಗ್ರ ಮಾಹಿತಿ ಇಟ್ಟುಕೊಳ್ಳಲು ನಿತ್ಯ ಡೈರಿ ಬರೆಯುವ ಹವ್ಯಾಸ ಬೆಳೆಸಿಕೊಳ್ಳಬೇಕು. ನಾನು, ಈಗ ಶಾಸಕನಾಗಿ ಆಯ್ಕೆಯಾಗಿದ್ದೇನೆ. ಇದಕ್ಕೂ ಮೊದಲು ವಕೀಲನಾಗಿ ಪ್ರಾಕ್ಟಿಸ್ ಮಾಡುತ್ತಿದ್ದೆ. ಆ ವೇಳೆ ನ್ಯಾಯಾಲಯ ಆರಂಭಕ್ಕೂ ಮುನ್ನವೇ ಕೋರ್ಟ್ ಆವರಣಕ್ಕೆ ಬಂದು ದಿನನಿತ್ಯದ ಸುದ್ದಿ ಓದುತ್ತಿದ್ದೆ. ನಂತರ ಪ್ರಕರಣಗಳಿಗೆ ಸಂಬಂಧಿಸಿದಂತೆ ಪೂರ್ವ ತಯಾರಿ ಮಾಡಿಕೊಳ್ಳುತ್ತಿದ್ದೆ. ಆ ವೇಳೆ ನನಗೆ ಕೇಸಿನ ಸಂಬಂಧ ಕೆಲವು ವಿಷಯಗಳು ಮರೆತು ಹೋಗುತ್ತಿದ್ದವು. ಇದರಿಂದ ಹೊರ ಬರಲು ಡೈರಿ ಬರೆಯುವ ಹವ್ಯಾಸ ಬೆಳೆಸಿಕೊಂಡರೆ ಉತ್ತಮ ಎಂದು ತಿಳಿಸಿದರು.

ಕ್ಷಮೆ ಯಾಚನೆ: ಹಿರಿಯ ವಕೀಲರು, ಕೇಸುಗಳ ಸಂಬಂಧ ಡೈರಿ ಬರೆಯುವ ಹವ್ಯಾಸ ಬೆಳೆಸಿಕೊಂಡಿದ್ದಾರೆ. ಆದರೆ, ಯುವ ವಕೀಲರು ಡೈರಿ ಬರೆಯುವ ಹವ್ಯಾಸ ಬೆಳೆಸಿಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ. ಇಂತಹ ನಕಾರಾತ್ಮಕ ಧೋರಣೆ ಒಳ್ಳೆಯದಲ್ಲ ಎಂದ ಶಾಸಕರು, ನಾನು ವಕೀಲ ವೃತ್ತಿಯಲ್ಲಿದ್ದಾಗ ಸಮಯ ಪರಿಪಾಲನೆ ಮಾಡುತ್ತಿದ್ದೆ. ವೃತ್ತಿ ಬದಲಾದ ನಂತರ ಸಮಯಕ್ಕೆ ಸರಿಯಾಗಿ ಕಾರ್ಯಕ್ರಮಗಳಿಗೆ ಹೋಗಲು ಸಾಧ್ಯವಾಗುತ್ತಿಲ್ಲ ಎಂದರಲ್ಲದೆ, ಕೆಲಸದ ಒತ್ತಡದಿಂದ ಈ ಕಾರ್ಯಕ್ರಮಕ್ಕೂ ಅರ್ಧ ಗಂಟೆ ತಡವಾಗಿ ಬಂದಿರುವುದಕ್ಕೆ ಸಭಾಂಗಣದಲ್ಲಿ ನೆರೆದಿದ್ದ ಹಿರಿಯ ವಕೀಲರಲ್ಲಿ ಕ್ಷಮೆಯಾಚಿಸಿದರು.

ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ಸದಸ್ಯ ಬಿ.ಆರ್.ಚಂದ್ರಮೌಳಿ ಮಾತನಾಡಿ, ಮೈಸೂರು ವಕೀಲರ ಸಂಘ 2024ರ ಡೈರಿ ಬಿಡುಗಡೆಗೊಳಿಸಿದೆ. ಇದರಲ್ಲಿ ವಕೀಲರಿಗೆ ಸಂಬಂಧಿಸಿದ ಅನೇಕ ಉಪಯುಕ್ತ ಮಾಹಿತಿಗಳನ್ನು ಮುದ್ರಿಸಲಾಗಿದೆ. ವಕೀಲರು ಸಮಯ ಪರಿಪಾಲನೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

> ಮೈಸೂರು ವಕೀಲರ ಸಂಘ ಹಲವು ವರ್ಷಗಳಿಂದ ಡೈರಿ ಮುದ್ರಿಸಿ, ಉಚಿತವಾಗಿ ವಕೀಲರಿಗೆ ನೀಡುತ್ತಿರುವುದು ಉತ್ತಮ ಸಂಗತಿ. ಅಲ್ಲದೆ, ಮೈಸೂರು ವಕೀಲರ ಸಂಘ ತಂತ್ರಜ್ಞಾನವನ್ನು ಬಳಸಿಕೊಂಡು ಡಿಜಿಟಲ್ ಡೈರಿಯನ್ನು ನೀಡುವ ಕುರಿತು ಮುಂದಿನ ದಿನಗಳಲ್ಲಿ ಚಿಂತಿಸಲಿ.
> –ಪ್ರಭಾವತಿ ಎಂ.ಹಿರೇಮಠ್, ಪ್ರಧಾನ ಜಿಲ್ಲಾ, ಸತ್ರ ನ್ಯಾಯಾಧೀಶರು.

ಈ ವೇಳೆ ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಎಸ್.ಉಮೇಶ್, ಉಪಾಧ್ಯಕ್ಷ ಪುಟ್ಟಸಿದ್ದೇಗೌಡ, ಜಂಟಿ ಕಾರ್ಯದರ್ಶಿ ಬಿ.ಎಂ.ನಾಗೇಶ್, ಮಹಿಳಾ ಜಂಟಿ ಕಾರ್ಯದರ್ಶಿ ಬಿ.ಎಸ್.ಭಾಗ್ಯಮ್ಮ, ಹಿರಿಯರ ಸಮಿತಿ ಸದಸ್ಯರಾದ ಕೆ.ಎಸ್.ಲೋಕೇಶ್, ಎ.ಕೆ.ಮಾಳಪ್ಪ, ಎನ್.ಲೋಕೇಶ್, ಜಿ.ಕೆ.ಗುರು, ಜಿ.ಎನ್.ಲಕ್ಷ್ಮಣ, ಎನ್.ಗಿರೀಶ್, ಸಿ.ಅಭಿಷೇಕ್, ಸಿ.ಯೋಗೇಶ್, ಎಂ.ಎಸ್.ಮೈತ್ರಿ, ಎಂ.ಜಗದೀಶ್, ವಕೀಲರಾದ ಬಿ.ಜಿ.ಉಮೇಶ್, ಮಾರ್ಬಳ್ಳಿ ಮೂರ್ತಿ, ಹೆಚ್.ಎಂ.ಜಗದೀಶ್, ಬಿ.ಸೋಮನಾಯಕ, ಗಣೇಶ ರಾಜೇ ಅರಸ್ ಸೇರಿದಂತೆ ಇತರರಿದ್ದರು.

ಇಂದು ನಿಗಮ–ಮಂಡಳಿ ನೇಮಕಾತಿ ಪಟ್ಟಿ ಪ್ರಕಟ ಸಾಧ್ಯತೆ

ಬೆಂಗಳೂರು,ಜ.17–ನಿಗಮ ಮಂಡಳಿ ನೇಮಕಾತಿಗೆ ಕೊನೆಗೂ ಮುಹೂರ್ತ ಕೂಡಿ ಬಂದಿದೆ. ನಿಗಮ ಮಂಡಳಿ ಅಧ್ಯಕ್ಷರ ಪಟ್ಟಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮುದ್ರೆ ಒತ್ತಿದ್ದಾರೆ ಎಂದು ಹೇಳಲಾಗಿದ್ದು, ಗುರುವಾರ ಪಟ್ಟಿ ಪ್ರಕಟವಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ನಿಗಮ ಮಂಡಳಿ ಹುದ್ದೆಗೆ 74 ಹೆಸರು ಅಂತಿಮಗೊಂಡಿವೆ ಎನ್ನಲಾಗಿದ್ದು, ಅದರಲ್ಲಿ 37 ಶಾಸಕರು ಹಾಗೂ 37 ಕಾರ್ಯಕರ್ತರ ಹೆಸರುಗಳಿವೆ. ಆದರೆ ನಾಳೆ 40ರಿಂದ 46 ಮಂದಿಯ ಹೆಸರು ಮಾತ್ರ ಪ್ರಕಟವಾಗುವ ಸಾಧ್ಯತೆ ಇದೆ. ಲಭಿಸಿರುವ ಮಾಹಿತಿಯಂತೆ ಶಾಸಕರಾದ ಸಿ.ಪುಟ್ಟರಂಗ ಶೆಟ್ಟಿ, ನರೇಂದ್ರಸ್ವಾಮಿ, ಅನಿಲ್ ಚಿಕ್ಕಮಾದು, ಶಿವಲಿಂಗೇಗೌಡ, ರಮೇಶ್ ಬಂಡಿಸಿದ್ದೇಗೌಡ, ಎಸ್.ಎನ್.ನಾರಾಯಣಸ್ವಾಮಿ, ಬೇಳೂರು ಗೋಪಾಲಕೃಷ್ಣ, ರಾಜಾ ವೆಂಕಟಪ್ಪ ನಾಯಕ್, ಶ್ರೀನಿವಾಸ ಮಾನೆ, ಹ್ಯಾರೀಸ್ ಅವರುಗಳ ಹೆಸರುಗಳಿವೆ ಎಂದು ಹೇಳಲಾಗಿದೆ.



ಅಯೋಧ್ಯೆಯ ರಾಮಲಲ್ಲಾ ಮೂರ್ತಿ ಕೆತ್ತನೆಗೆ ಮೈಸೂರಿನ ಅರುಣ್ ಯೋಗಿರಾಜ್ ಅವರಿಗೆ ಕೃಷ್ಣ ಶಿಲೆ ದೊರೆತ ಹಾರೋಹಳ್ಳಿ ಗ್ರಾಮದ ರಾಮದಾಸ್ ಅವರ ಜಮೀನಿನಲ್ಲಿ ಕುಟುಂಬದವರು ವಿಶೇಷ ಪೂಜೆ ನೆರವೇರಿಸಿದರು. ಈ ವೇಳೆ ಚಾಮುಂಡೇಶ್ವರಿ ಕ್ಷೇತ್ರದ ಮಂಡಲದ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ರಾಮದಾಸ್, ಹಾರೋಹಳ್ಳಿ ಸತೀಶ್, ಗ್ರಾಪಂ ಮಾಜಿ ಸದಸ್ಯ ಮಲ್ಲಿಕಾರ್ಜುನ್, ಅರಮನೆ ಪುರೋಹಿತರು, ಗ್ರಾಮದ ಮಹಿಳೆಯರು ಉಪಸ್ಥಿತರಿದ್ದರು.

ಅಹಿಂದ ಮೈಸೂರು ಜಿಲ್ಲಾಧ್ಯಕ್ಷರಾಗಿ ಬ್ರಾಡ್ ವೇ ಕಿರಣ್ ನೇಮಕ



ಮೈಸೂರು, ಜ.17– ಅಲ್ಪಸಂಖ್ಯಾತರ, ಹಿಂದುಳಿದವರ ದಲಿತರ ಒಕ್ಕೂಟ (ಅಹಿಂದ)ದ ಮೈಸೂರು ಜಿಲ್ಲಾಧ್ಯಕ್ಷರನ್ನಾಗಿ ಬ್ರಾಡ್‌ವೇ ಕಿರಣ್ ಅವರನ್ನು ನೇಮಕ ಮಾಡಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಂಬರೀಶ್ ಸ್ಮರಣಾರ್ಥ 2024ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ



ರೆಬೆಲ್‌ಸ್ಟಾರ್ ಡಾ.ಅಂಬರೀಶ್ ಸ್ಮರಣಾರ್ಥ ಹೊರತಂದಿರುವ 2024ರ ದಿನದರ್ಶಿಕೆಯನ್ನು ಬಿಡುಗಡೆಗೊಳಿಸಲಾಯಿತು.

ಮೈಸೂರು, ಜ.17(ಎಸ್‌ಪಿಎನ್)– ರೆಬೆಲ್‌ಸ್ಟಾರ್ ಡಾ.ಅಂಬರೀಶ್ ನೆನಪಿಗಾಗಿ ಹೊರತಂದಿರುವ 2024ರ ದಿನದರ್ಶಿಕೆಯನ್ನು, ಅಖಿಲ ಭಾರತ ಅಂಬರೀಶ್ ಅಭಿಮಾನಿಗಳ ಸಂಘದ ಸಂಸ್ಥಾಪಕ ಅಧ್ಯಕ್ಷರೂ ಆದ ಸಾಹಿತಿ ಬನ್ನೂರು ಕೆ.ರಾಜು ಬುಧವಾರ ಬಿಡುಗಡೆಗೊಳಿಸಿದರು.

ನಗರದ ಅಗ್ರಹಾರದ ತ್ಯಾಗರಾಜ ರಸ್ತೆಯಲ್ಲಿರುವ ಸಾಹಿತಿ ಬನ್ನೂರು ಕೆ.ರಾಜು ಅವರ ಸ್ವಗೃಹದಲ್ಲಿ ಬೆಂಗಳೂರಿನ ನ್ಯಾಯ, ನೀತಿ, ಧರ್ಮ ರೆಬಲ್ ಸ್ಟಾರ್ ಡಾ.ಅಂಬರೀಶ್ ಸೇನಾ ಸಮಿತಿ, ಡಾ.ಅಂಬರೀಶ್ ಸಾಂಸ್ಕೃತಿಕ ಕಲಾ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ಹಾಗೂ ಮಂಡ್ಯದ ಕಾವೇರಿ ಕರುನಾಡು ವೇದಿಕೆಯ ಸಹಯೋಗದೊಂದಿಗೆ ನಡೆದ ಸರಳ ಸಮಾರಂಭದಲ್ಲಿ ಬಿಡುಗಡೆಗೊಳಿಸಿ ಮಾತನಾಡಿದರು.

ಅಂಬರೀಶ್ ಅವರು, ಬದುಕಿದ್ದಾಗಲೇ ದಂತಕತೆಯಂತಿದ್ದು ತಮ್ಮ ಕೊಡುಗೈ ದಾನದ ಗುಣದಿಂದ ಕಲಿಯುಗದ ಕರ್ಣನೆಂದೇ ನಾಡಿನ ಉದ್ದಗಲಕ್ಕೂ ಹೆಸರಾಗಿದ್ದ ಹೃದಯವಂತ ಕಲಾವಿದರು. ಅವರು ನಾಡಿಗೆ ನೀಡಿರುವ ಕೊಡುಗೆ ಸ್ಮರಣೀಯ ಎಂದರು.

ನಟ ಅಂಬರೀಶ್ ಮೂರು ಬಾರಿ ಲೋಕಸಭಾ ಸದಸ್ಯರಾಗಿ, ಕೇಂದ್ರ ಸಚಿವರಾಗಿ, ರಾಜ್ಯ ಸಚಿವರಾಗಿ ರಾಜಕೀಯ ಕ್ಷೇತ್ರದಲ್ಲೂ ತಮ್ಮದೇ ಆದ ಛಾಪು ಮೂಡಿಸಿದ್ದರು. ಇಂಥ ಸಾಧನೆ ಮಾಡಿದ ಭಾರತೀಯ ಚಿತ್ರರಂಗದ ಏಕೈಕ ನಟ ಅಂಬರೀಶ್, ಚಿತ್ರರಂಗ, ರಾಜಕೀಯ ಹೀಗೆ ಉಭಯ ಕ್ಷೇತ್ರಗಳಲ್ಲೂ ದಾಖಲೆ ಬರೆದಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಅಂಬರೀಶ್ ಅಭಿಮಾನಿಗಳಾದ ರೆಬೆಲ್ ರಮೇಶ್, ಹೆಚ್.ಎನ್.ಸ್ವಾಮಿ, ಕೆ.ಆರ್.ಪೇಟೆ ರೆಬೆಲ್ ಜಬಿ, ಜಿ.ಕೆ.ಕುಮಾರ್‌ಗೌಡ, ನಾಗೇಂದ್ರ ಹುನುಗನಹಳ್ಳಿ, ನವೀನ, ಗೋವಿಂದರಾಜ್, ಎಸ್.ಕೆ.ಕುಮಾರ್ ನಾಯಕ್ ಹೊಳೆನರಸೀಪುರ, ಕೇಶವ್, ಮನೋಹರ್, ಲೋಕೇಶ್‌ಗೌಡ, ನಂಜುಂಡಸ್ವಾಮಿ, ಶಂಕರ್, ಮಂಜುನಾಥ್, ಪ್ರಕಾಶ್ ಮುಂತಾದವರಿದ್ದರು. ಈ ವೇಳೆ ಸಾಹಿತಿ ಬನ್ನೂರು ಕೆ.ರಾಜು ಅವರನ್ನು ಸನ್ಮಾನಿಸಲಾಯಿತು.

ಸಿಎಂ ಸಿದ್ದರಾಮಯ್ಯ ವಿರುದ್ಧ ಆಕ್ಷೇಪಾರ್ಹ ವಿಡಿಯೋ ಪೋಸ್ಟ್ ಮಾಡಿದ ವ್ಯಕ್ತಿ ಬಂಧನ

ಮಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಆಕ್ಷೇಪಾರ್ಹ ವಿಡಿಯೋ ಪೋಸ್ಟ್ ಮಾಡಿದ್ದ ಉತ್ತರ ಕನ್ನಡ ಜಿಲ್ಲೆಯ ಶಿರಸಿ ಮೂಲದ ವ್ಯಕ್ತಿಯೊಬ್ಬನನ್ನು ಮಂಗಳೂರು ನಗರ ಪೊಲೀಸರು ಬುಧವಾರ ಬಂಧಿಸಿದ್ದಾರೆ. ಬಂಧಿತ ವ್ಯಕ್ತಿಯನ್ನು ಅನಿಲ್‌ಕುಮಾರ್(34) ಎಂದು ಗುರುತಿಸಲಾಗಿದ್ದು, ಕಳೆದ 12 ವರ್ಷಗಳಿಂದ ಇಲ್ಲಿನ ಸುರತ್ಕಲ್‌ನಲ್ಲಿ ಕ್ಯಾಬ್ ಚಾಲಕನಾಗಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಸರ್ಕಾರಿ ಯೋಜನೆಗಳ ಲಾಭ ಪಡೆಯಲು ಪಡಿತರ ಚೀಟಿಯಲ್ಲಿ ಹೆಸರು ಸೇರಿಸಲು ಸಾಧ್ಯವಾಗದ ಕಾರಣ ಆಕ್ರೋಶಗೊಂಡು ಈ ವಿಡಿಯೋ ಮಾಡಿರುವುದಾಗಿ ಆರೋಪಿ ವಿಚಾರಣೆ ವೇಳೆ ಪೊಲೀಸರಿಗೆ ತಿಳಿಸಿದ್ದಾನೆ. ಅತ್ತಾವರದ ಸುಹಾನ್ ಆಳ್ವ ಎಂಬ ವ್ಯಕ್ತಿ ಈ ವಿಡಿಯೋ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಆರೋಪಿಯನ್ನು ಬಂಧಿಸಿದ್ದು, ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.



ಮೈಸೂರು ಬಿಜೆಪಿ ನಗರ ಅಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ ಅವರು ಅಯೋಧ್ಯೆಯ ರಾಮನ ಮೂರ್ತಿ ನಿರ್ಮಾತೃ ಮೈಸೂರಿನ ಶಿಲ್ಪಿ ಅರುಣ್ ಯೋಗಿ ರಾಜ್ ಅವರ ಮನೆಗೆ ಭೇಟಿ ನೀಡಿ, ಅರುಣ್ ಅವರ ಮಾತೃಶ್ರೀ ಸರಸ್ವತಿ ಮತ್ತು ಅವರ ಶ್ರೀಮತಿ ವಿಜೇತ ಅವರನ್ನು ಅಭಿನಂದಿಸಿದರು. ಈ ಸಂದರ್ಭದಲ್ಲಿ ಮೈಸೂರಿನ ಬಿಜೆಪಿ ಕಾರ್ಯಕರ್ತರು ಉಪಸ್ಥಿತರಿದ್ದರು.

ಜ್ಞಾನ, ಕರ್ಮ, ರಾಜಯೋಗದಲ್ಲಿ ವಿವೇಕಾನಂದರ ಸಾಧನೆ ಅಪಾರ

ಜಿಲ್ಲಾ ಸತ್ರ ನ್ಯಾಯಾಧೀಶರಾದ ಪ್ರಭಾವತಿ ಎಂ.ಹಿರೇಮಠ್ ಶ್ಲಾಘನೆ



ಮೈಸೂರಿನ ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಯುವ ರೆಡ್‌ಕ್ರಾಸ್, ಐಕ್ಯೂಎಸಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಆಶ್ರಯದಲ್ಲಿ ಆಯೋಜಿಸಿದ್ದ 'ರಾಷ್ಟ್ರೀಯ ಯುವ ದಿನಾಚರಣೆ' ಕಾರ್ಯಕ್ರಮವನ್ನು ಜಿಲ್ಲಾ ಸತ್ರ ನ್ಯಾಯಾಧೀಶರಾದ ಪ್ರಭಾವತಿ ಎಂ.ಹಿರೇಮಠ್ ಉದ್ಘಾಟಿಸಿದರು.


> ಸ್ವಾಮಿ ವಿವೇಕಾನಂದರ ವಿಚಾರಗಳು ಯುವ ಪೀಳಿಗೆಗೆ ಮಾದರಿಯಾಗಿವೆ. ಶೋಷಿತರ ಕಣ್ಣೀರಿಗೆ ಸ್ಪಂದಿಸುತ್ತಾ, ಬೇರೆಯವರ ಒಳಿತಿಗಾಗಿ ಶ್ರಮಿಸಿದವರು ಮಾತ್ರ ಯೋಗಿಗಳಾಗಲು ಸಾಧ್ಯ. ಯಾವುದೇ ಜಾತಿ, ಧರ್ಮ, ಮತ–ಪಂಥ, ಬಡವ–ಶ್ರೀಮಂತ ಎಂಬ ಭೇದವಿಲ್ಲದೇ ಸರ್ವ ಜನರೂ ಒಪ್ಪಿಕೊಳ್ಳುವಂತಹ ನವ ಚೈತನ್ಯರನ್ನು ನಾವು ಅನುಸರಿಸಬೇಕು. –ಪ್ರಭಾವತಿ ಎಂ.ಹಿರೇಮಠ್

ಮೈಸೂರು, ಜ.17(ಆರ್‌ಕೆ)–ಜ್ಞಾನಯೋಗ, ಕರ್ಮಯೋಗ ಮತ್ತು ರಾಜಯೋಗದಲ್ಲೂ ಸ್ವಾಮಿ ವಿವೇಕಾನಂದರ ಸಾಧನೆ ಅಪಾರವಾದುದು ಎಂದು ಜಿಲ್ಲಾ ಸತ್ರ ನ್ಯಾಯಾಧೀಶರಾದ ಪ್ರಭಾವತಿ ಎಂ.ಹಿರೇಮಠ್ ತಿಳಿಸಿದ್ದಾರೆ.

ಮೈಸೂರಿನ ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಯುವ ರೆಡ್‌ಕ್ರಾಸ್, ಐಕ್ಯೂಎಸಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಆಶ್ರಯದಲ್ಲಿ ಬುಧವಾರ ಆಯೋಜಿಸಿದ್ದ 'ರಾಷ್ಟ್ರೀಯ ಯುವ ದಿನಾಚರಣೆ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಸ್ವಾಮಿ ವಿವೇಕಾನಂದರು ಮಹಿಳೆಯರ ಬಗ್ಗೆ ಹೊಂದಿದ್ದ ಗೌರವ, ಅಭಿಮಾನ ಮೆಚ್ಚುವಂತಹದ್ದಾಗಿದ್ದು, ಭಾರತೀಯ ಹೆಣ್ಣು ಮಕ್ಕಳಲ್ಲಿ ಆಧ್ಯಾತ್ಮಿಕತೆ ಹೆಚ್ಚಾಗಿರುವುದನ್ನು ಕಾಣಬಹುದು ಎಂದರು.

ಮಹಿಳೆಯರಿಗೆ ಸಮಾನ ಶಿಕ್ಷಣ, ಸೌಲಭ್ಯ ಸಿಗುವಂತಾಗಬೇಕು. ಅವರಿಗೆ ಯುವ ಸಮೂಹ ಬೆಂಬಲಿಸಬೇಕು. ವ್ಯಕ್ತಿ ವಿಕಸನಕ್ಕೆ ಆದ್ಯತೆ ನೀಡಿ ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ಪುರುಷರಿಗೆ ಸರಿಸಮವಾಗಿ ಬದುಕಲು ಅವಕಾಶ ಕಲ್ಪಿಸಿಕೊಟ್ಟರೆ ಮಾತ್ರ ಸ್ವಾಮಿ ವಿವೇಕಾನಂದರ ಪರಿಕಲ್ಪನೆ ಸಾರ್ಥಕವಾಗಲಿದೆ ಎಂದು ನುಡಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್, ಮಹಾರಾಣಿ ವಿಜ್ಞಾನ ಕಾಲೇಜು ಪ್ರಾಂಶುಪಾಲ ಪ್ರೊ. ಎಂ.ಅಬ್ದುಲ್ ರೆಹಮಾನ್, ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕಾರ್ಯದರ್ಶಿ ಎಸ್.ಎಸ್.ವೈದ್ಯನಾಥ್, ವಿ.ನಂದಕುಮಾರ್, ಎಂ.ಎಸ್.ಕುಮಾರ್ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಮೈಸೂರು ಬಿಜೆಪಿ ನಗರಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಮಾಜಿ ಶಾಸಕ ಎಲ್.ನಾಗೇಂದ್ರ ಅವರನ್ನು ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮುಖಂಡರಾದ ಎನ್.ಅರುಣ್‌ಕುಮಾರ್‌ಗೌಡ ಅಭಿನಂದಿಸಿದರು. ಈ ವೇಳೆ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪೈಲ್ವಾನ್ ಟಿ.ರವಿ, ಮಾಜಿ ಎಪಿಎಂಸಿ ಸದಸ್ಯ ಇಲವಾಲ ರವಿ, ಯುವ ಮುಖಂಡ ಎನ್.ಕೆ.ರವಿಕುಮಾರ್ ಇದ್ದರು.



ಅಯೋಧ್ಯೆಯಲ್ಲಿ ಶ್ರೀರಾಮಮಂದಿರ ಜ.22ರಂದು ಉದ್ಘಾಟನೆಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಮೈಸೂರಿನ ಎನ್.ಆರ್.ಕ್ಷೇತ್ರದ 30ನೇ ವಾರ್ಡ್ ಗಾಯತ್ರಿಪುರಂನಲ್ಲಿರುವ ಸಿದ್ದಪ್ಪಾಜಿ ದೇವಸ್ಥಾನದಲ್ಲಿ ಬಿಜೆಪಿ ಕಾರ್ಯಕರ್ತರು ಸ್ವಚ್ಛತಾ ಕಾರ್ಯ ಹಮ್ಮಿಕೊಂಡಿದ್ದರು. ಮಾಜಿ ಮೇಯರ್ ಸಂದೇಶ್ ಸ್ವಾಮಿ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ.ಮಂಜುನಾಥ್, ಮುಖಂಡರಾದ ಗಿರಿಧರ್, ಸು.ಮುರುಳಿ, ವೇಲು, ಸ್ಮಾರ್ಟ್ ಮಂಜು, ನಾರಾಯಣ ಗೌಡಪ್ಪ, ಮಣಿರತ್ನಂ, ಚಂದ್ರು, ಆನಂದ್, ಬಸವರಾಜು, ಶೇಖರ್ ಮುಂತಾದವರು ಸ್ವಚ್ಛತಾ ಕಾರ್ಯದಲ್ಲಿ ಭಾಗವಹಿಸಿದ್ದರು.

ಮದ್ದೂರು ತಾಲೂಕು ಕಚೇರಿಗೆ ಕಂದಾಯ ಸಚಿವ ಕೃಷ್ಣಭೈರೇಗೌಡ ದಿಢೀರ್ ಭೇಟಿ

ಉಪನೋಂದಣಾಧಿಕಾರಿಗೆ ತೀವ್ರ ತರಾಟೆ

● ಖಾಸಗಿ ಕಾರನ್ನು ತಾವೇ ಚಲಾಯಿಸಿಕೊಂಡು ಬಂದ ಸಚಿವ ● ನಿಮ್ಮ ಕಚೇರಿ ಲಂಚಾವತಾರ ಬೆಂಗಳೂರು ತಲುಪುತ್ತಿದೆ ● ದಲ್ಲಾಳಿಗಳ ಮೂಲಕ ವಸೂಲಿ ಮಾಡುತ್ತಿರುವುದು ನನ್ನ ಗಮನಕ್ಕೆ ಬಂದಿದೆ ● ನಿನ್ನೆ ಮಾಡಿದ ಕಲೆಕ್ಷನ್ ಹಿರಿಯ ಅಧಿಕಾರಿಗಳಿಗೆ ಒಪ್ಪಿಸಲು ಹೋಗಿದ್ದಿರಾ?

ಮದ್ದೂರು, ಜ.17– ತಾಲೂಕು ಕಚೇರಿಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ದಿಢೀರ್ ಭೇಟಿ ನೀಡಿ ರೈತರು ಮತ್ತು ಸಾರ್ವಜನಿಕರ ಅಹವಾಲು ಸ್ವೀಕರಿಸಿ, ತಾಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡ ಪ್ರಸಂಗ ಬುಧವಾರ ನಡೆಯಿತು.

ತಹಸೀಲ್ದಾರ್ ಕಚೇರಿಗೆ ಆಗಮಿಸಿದ ಸಚಿವರು, ತಾಲೂಕು ಕಚೇರಿಯ ಟಾಪಲು ಶಾಖೆ, ಪಿಂಚಣಿ ಶಾಖೆ, ಭೂ ದಾಖಲೆಗಳು ಹಾಗೂ ಪಡಿತರ ಶಾಖೆಗಳಿಗೆ ಭೇಟಿ ನೀಡಿ, ಅಲ್ಲಿನ ಅವ್ಯವಸ್ಥೆಯನ್ನು ಪರಿಶೀಲಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ಕ್ರಿಯಾತ್ಮಕವಾಗಿ ಕೆಲಸ ಮಾಡಿ ಎಂದು ಸೂಚಿಸಿದರು.

ನಂತರ ಉಪ ನೋಂದಣಿ ಕಚೇರಿಗೆ ತೆರಳಿದ ಸಚಿವರು, ಮದ್ದೂರು ಉಪ ನೋಂದಣಿ ಕಚೇರಿಯಲ್ಲಿ ನಡೆಯುತ್ತಿರುವ ಲಂಚಾವತಾರ ಬೆಂಗಳೂರಿಗೆ ಬಂದು ತಲುಪುತ್ತಿದೆ. ನಿತ್ಯ ನೂರಾರು ಮಂದಿ ನಮ್ಮನ್ನ ಭೇಟಿ ಮಾಡಿ ಇಲ್ಲಿನ ಅವ್ಯವಸ್ಥೆಯನ್ನು ಸರಿಪಡಿಸುವಂತೆ ಮನವಿ ಮಾಡುತ್ತಿದ್ದಾರೆ. ದಲ್ಲಾಳಿಗಳನ್ನು ಇಟ್ಟುಕೊಂಡು ಹಣ ವಸೂಲಿ ಮಾಡುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಇನಾಮು ಆಸ್ತಿಗಳನ್ನು ಖಾಸಗಿ ವ್ಯಕ್ತಿಗಳಿಗೆ ಪರಭಾರೆ ಮಾಡುವುದು ಹಾಗೂ ದಾಖಲೆಗಳು ಸರಿಯಿದ್ದರೂ ಲಂಚಕ್ಕೆ ಬೇಡಿಕೆ ಇಡುತ್ತಿರುವುದರ ಬಗ್ಗೆ ಸಾರ್ವಜನಿಕರಿಂದ ಸಾಕಷ್ಟು ದೂರುಗಳು ಬರುತ್ತಿದೆ. ಸಮಯಕ್ಕೆ ಸರಿಯಾಗಿ ಕಚೇರಿಗೆ ಬಾರದೆ ನಿನ್ನೆ ಮಾಡಿದ್ದ ಕಲೆಕ್ಷನ್ ಹಣವನ್ನು ಹಿರಿಯ ಅಧಿಕಾರಿಗಳಗೆ ಒಪ್ಪಿಸಲು ಹೋಗಿದ್ದೀರಾ? ಎನ್ನುವ ಮೂಲಕ ಹಿರಿಯ ಉಪನೋಂದಣಿಕಾರಿ ದಿನೇಶ್ ಅವರನ್ನು ಸಾರ್ವಜನಿಕರ ಎದುರಲ್ಲೇ ತರಾಟೆಗೆ ತೆಗೆದುಕೊಂಡು ಅವರ ಬೆವರಿಳಿಸಿದರು.



ಮದ್ದೂರು ತಾಲೂಕಿನ ಉಪ ನೋಂದಣಿ ಕಚೇರಿಯಲ್ಲಿ ಉಪ ನೊಂದಣಿ ಅಧಿಕಾರಿ ದಿನೇಶ್ ಅವರನ್ನು ಕಂದಾಯ ಸಚಿವ ಕೃಷ್ಣಭೈರೇಗೌಡ ಸಾರ್ವಜನಿಕರ ಎದುರಲ್ಲೇ ತರಾಟೆಗೆ ತೆಗೆದುಕೊಂಡರು. ಶಾಸಕ ಕೆ.ಎಂ.ಉದಯ್, ಡಾ.ಕುಮಾರ್, ಶಿವಮೂರ್ತಿ, ಕೆ.ಎಸ್.ಸೋಮಶೇಖರ್ ಇದ್ದರು.

ಕ್ಯಾಬಿನೇಟ್ ದರ್ಜೇ ಸಚಿವ ಕೃಷ್ಣ ಬೈರೇಗೌಡ ಅವರು ಎಸ್ಕಾರ್ಟ್ ಪಡೆದುಕೊಳ್ಳದೆ ಸರ್ಕಾರದ ಕಾರನ್ನು ಬಳಸದೆ ಗನ್ ಮತ್ತು ಪಿಎಸ್ ಅವರನ್ನು ಕರೆದುಕೊಂಡು ಬಾರದೆ, ತಾವೇ ತಮ್ಮ ಸ್ವಂತ ವಾಹನವನ್ನು ಚಲಾಯಿಸಿಕೊಂಡು ತಾಲೂಕು ಕಚೇರಿಗೆ ಬಂದಿದ್ದು ಸಾರ್ವಜನಿಕರ ಪ್ರಶಂಸೆ ಪಾತ್ರವಾಯಿತು.

ಈ ವೇಳೆ ರೈತನೊಬ್ಬ ಮಧ್ಯೆ ಪ್ರವೇಶಿಸಿ ನನ್ನ ದಾಖಲೆಗಳು ಸರಿಯಿದ್ದರೂ ನನ್ನ ಆಸ್ತಿಯನ್ನು ನೋಂದಣಿ ಮಾಡಿಕೊಡುತ್ತಿಲ್ಲ, ಉಪ ನೋಂದಣಿ ಅಧಿಕಾರಿ ದಿನೇಶ್ ಅವರು 15 ಸಾವಿರ ಹಣವನ್ನು ಪಡೆದುಕೊಂಡಿದ್ದಾರೆ. ಮತ್ತೇ ಹಣಕ್ಕಾಗಿ ಬೇಡಿಕೆ ಇಟ್ಟಾಗ ನಾನು ಹಣ ನೀಡದಿದ್ದಾಗ ಇನ್ನು 6 ತಿಂಗಳು ಅಲೆಸುತ್ತೇನೆ ಎಂದು ನನಗೆ ಧಮ್ಕಿ ಹಾಕಿದ್ದಾರೆ ಎಂದು ಧರ್ಮಸ್ಥಳ ಮಂಜುನಾಥನ ಮೇಲೆ ಪ್ರಮಾಣ ಮಾಡಿ ತಮ್ಮ ಅಸಹಾಯಕತೆಯನ್ನು ಸಚಿವರ ಬಳಿ ತೋಡಿಕೊಂಡರು.

ಸರ್ಕಾರಿ ರಸ್ತೆಗಳ ಒತ್ತುವರಿ ತೆರವು ಮಾಡಿ ರೈತರಿಗೆ ಅನುಕೂಲವಾಗುವಂತೆ ಬಂಡಿ ದಾರಿಗಳನ್ನು ನಿರ್ಮಿಸದೆ ಏಕೆ. ರೈತರನ್ನು ಅಲೆದಾಡುಸುತ್ತಿದ್ದೀರಿ? ಇ–ತಂತ್ರಾಶದಲ್ಲಿ ಮಂಡ್ಯ ಜಿಲ್ಲೆ ಏನೇನೂ ಸಾಧನೆ ಮಾಡಿಲ್ಲ ಈಗಾದರೆ ಸಾರ್ವಜಕರಿಗೆ ಮತ್ತು ರೈತರಿಗೆ ಹೇಗೆ ಸೇವೆ ನೀಡುತ್ತೀರಿ? ನೀವು ಯುವಕರಿದ್ದೀರಿ ಜಿಲ್ಲಾಡಳಿತನ್ನು ಚುರುಕುಗೊಳಿಸಿ ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ಅವರಿಗೆ ಸೂಚಿಸಿದರು.

ದಿನೇಶ್ ಅವರು ಮಧ್ಯೆಪ್ರವೇಶಿಸಿ ಸರ್, ನಾನೇನು ಮಾಡಿಲ್ಲ ಎಂದರು ಆಗ ಸಿಟ್ಟುಗೊಂಡ ಸಚಿವರು 'ಹೌದಪ್ಪ ಸಾರ್ವಜನಿಕರು ನನಗೆ ಸುಳ್ಳು ಹೇಳುತ್ತಿದ್ದಾರೆ. ಇಲ್ಲಿ ಬಂದಿರುವ ರೈತರು ಸಹಾ ಸುಳ್ಳು ಹೇಳುತ್ತಿದ್ದಾರೆ. ನಿನ್ನೊಬ್ಬನೇ ಸತ್ಯ ಹರಿಶ್ಚಂದ್ರ ಎನ್ನುವ ಮೂಲಕ ಹಿರಿಯ ನೋಂದಣಿ ಅಧಿಕಾರಿ ದಿನೇಶ್ ಅವರ ಕಾರ್ಯವೈಖರಿ ಬಗ್ಗೆ ಬೇಸರ ವ್ಯಕ್ತಪಡಿಸಿದರು.

ಸಚಿವ ಕೃಷ್ಣೆಬೈರೇಗೌಡ ಅವರಿಗೆ ಕಾಂಗ್ರೆಸ್ ಕಾರ್ಯಕರ್ತರು ಎಳನೀರು ನೀಡಿದರು. ಸಚಿವರು ಎಳನೀರು ಕುಡಿದು ದಣಿವಾರಿಸಿಕೊಂಡರು. ನಂತರ ಶಾಸಕ ಕೆ.ಎಂ. ಉದಯ್ ಅವರು ಸಚಿವ ಅವರನ್ನು ಅಭಿನಂದಿಸಿದರು. ಈ ವೇಳೆ ಜಿಲ್ಲಾಧಿಕಾರಿ ಡಾ.ಕುಮಾರ್, ಉಪವಿಭಾಗಾಧಿಕಾರಿ ಶಿವಮೂರ್ತಿ, ತಹಸೀಲ್ದಾರ್ ಕೆ.ಎಸ್.ಸೋಮಶೇಖರ್ ಇದ್ದರು.

ಮಹದೇವಪುರ ಬಳಿ ಹುಲಿ ಸೆರೆಗೆ ಕಾರ್ಯಾಚರಣೆ ಆರಂಭ



ಅರಣ್ಯ ಇಲಾಖೆ ಸಿಬ್ಬಂದಿಯು ಹುಲಿ ಸೆರೆಗಾಗಿ ಯರಕುಂಟಿ ಹುಂಡಿ ರಸ್ತೆಯ ಜಮೀನಿನಲ್ಲಿ ಬೋನ್ ಅಳವಡಿಸುತ್ತಿರುವ ದೃಶ್ಯ.

ಶ್ರೀರಂಗಪಟ್ಟಣ, ಜ.17– ಮೈಸೂರಿನಿಂದ ಕೇವಲ 10 ಕಿಮೀ ಅಂತರದಲ್ಲಿರುವ ಶ್ರೀರಂಗಪಟ್ಟಣ ತಾಲೂಕಿನ ಶೂಟಿಂಗ್ ಮಹದೇವಪುರ ಮತ್ತು ಚೆನ್ನಹಳ್ಳಿ ಬಳಿ ಕಳೆದ ಸುಮಾರು 15 ದಿನಗಳಿಂದ ಓಡಾಡುತ್ತಾ ಗ್ರಾಮಸ್ಥರಲ್ಲಿ ಆತಂಕ ಉಂಟು ಮಾಡಿರುವ ಹುಲಿ ಸೆರೆಗೆ ಅರಣ್ಯ ಇಲಾಖೆ ಅಧಿಕಾರಿಗಳು ಕಾರ್ಯಾಚರಣೆ ಆರಂಭಿಸಿದ್ದಾರೆ.

ಯರಕುಂಟಿ ಹುಂಡಿ ರಸ್ತೆಯಲ್ಲಿರುವ ಚೇರ್ಮನ್ ಪಾಪಣ್ಣ ಗೌಡರ ಜಮೀನಿನ ಪಕ್ಕದಲ್ಲಿರುವ ಬೋಗೇಗೌಡ ಎಂಬುವವರಿಗೆ ಸೇರಿದ ಒಂದೂವರೆ ಎಕರೆಯಲ್ಲಿ ಬೆಳೆದಿರುವ ಕಬ್ಬಿನ ಗದ್ದೆಯಲ್ಲಿ ಹುಲಿ ಸೇರಿಕೊಂಡಿದೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದ ಗ್ರಾಮಸ್ಥರು, ಈ ಹುಲಿ ಪ್ರತಿದಿನ ಸಂಜೆ 4.30ರ ಸುಮಾರಿಗೆ ಕಬ್ಬಿನ ಗದ್ದೆಯಿಂದ ಹೊರಬರುತ್ತಿತ್ತು. ಆದರೆ ಇಂದು (ಬುಧವಾರ) ಹುಲಿ ಬರಲಿಲ್ಲ ಎಂದು ತಿಳಿಸಿದ್ದಾರೆ.

ಹುಲಿ ಸೆರೆಗಾಗಿ ಬಂಡೀಪುರದಿಂದ ಅರಣ್ಯ ಇಲಾಖೆ ಸಿಬ್ಬಂದಿ ಆಗಮಿಸಿದ್ದು, ಅರಣ್ಯ ಇಲಾಖೆ ಸಿಬ್ಬಂದಿಗೆ ಹುಲಿಯ ಹೆಜ್ಜೆ ಗುರುತು ಗೋಚರಿಸಿದೆ. ಈ ಹಿನ್ನೆಲೆಯಲ್ಲಿ ಹುಲಿಯ ಚಲನ–ವಲನದ ಬಗ್ಗೆ ನಿಗಾ ವಹಿಸಲು ಒಟ್ಟು 15 ಟ್ರ್ಯಾಪ್ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಒಂದೆಡೆ ಬೋನ್ ಇಡಲಾಗಿದೆ. ಕಾರ್ಯಾಚರಣೆಗೆ ಡ್ರೋನ್ ಬಳಸುತ್ತಿದ್ದಾರೆ. ಅರಣ್ಯ ಸಿಬ್ಬಂದಿಯ ಈ ತಂಡದಲ್ಲಿ ಹುಲಿಗೆ ಅರವಳಿಕೆ ಮದ್ದು ಪ್ರಯೋಗಿಸಲು ಶಾರ್ಪ್ ಶೂಟರ್ ಮತ್ತು ಪಶುವೈದ್ಯರು ಆಗಮಿಸಿದ್ದು, ಈ ತಂಡಕ್ಕೆ ಹುಲಿಯಂತೂ ಪ್ರತ್ಯಕ್ಷವಾಗಿಲ್ಲ. ಇಂದು ರಾತ್ರಿ ಅರಣ್ಯ ಇಲಾಖೆ ತಂಡ ಗ್ರಾಮದಲ್ಲೇ ವಾಸ್ತವ್ಯ ಹೂಡಲಿದೆ. ಅದೇ ವೇಳೆ ಅರಣ್ಯ ಇಲಾಖೆ ಸಿಬ್ಬಂದಿ ಮತ್ತು ಅರಕೆರೆ ಠಾಣೆ ಪೊಲೀಸರು ಈ ಭಾಗದಲ್ಲಿ ಹುಲಿ ಓಡಾಡುತ್ತಿರುವುದರಿಂದ ಅವರ ಸೆರೆಗೆ ಕಾರ್ಯಾಚರಣೆ ನಡೆಸಲಾಗುತ್ತಿದೆ. ಗ್ರಾಮಸ್ಥರು ರಾತ್ರಿ ವೇಳೆ ಮನೆಯಿಂದ ಹೊರಬರಬಾರದು ಎಂದು ಧ್ವನಿವರ್ಧಕ ಮೂಲಕ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸೂಚನೆ ನೀಡಿದ್ದಾರೆ.

ಅಯೋಧ್ಯೆ ರಾಮಮಂದಿರ ಉದ್ಘಾಟನೆ: ಕೆ.ಎಂ.ದೊಡ್ಡಿಯಲ್ಲಿ ಹೋಮ–ಪೂಜೆ




ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆ ಸುಭೀಕ್ಷವಾಗಿ ನೆರವೇರಲೆಂದು ಭಾರತೀನಗರದ ಶ್ರೀವೆಂಕಟೇಶ್ವರ ದೇವಸ್ಥಾನದಲ್ಲಿ ಹೋಮ, ಪೂಜಾ ಕಾರ್ಯಕ್ರಮ ಜರುಗಿತು.

ಭಾರತೀನಗರ, ಜ.17– ಜ.22 ರಂದು ನಡೆಯಲಿರುವ ಅಯೋಧ್ಯೆಯಲ್ಲಿ ರಾಮಮಂದಿರದ ರಾಮಲಲ್ಲಾ ವಿಗ್ರಹ ಪ್ರತಿಷ್ಠಾಪನೆ ಸುಭೀಕ್ಷವಾಗಿ ನೆರವೇರಲೆಂದು ಕೆ.ಎಂ.ದೊಡ್ಡಿಯ ಶ್ರೀವೆಂಕಟೇಶ್ವರಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಶ್ರೀವೆಂಕಟೇಶ್ವರಸ್ವಾಮಿ ದೇವಾಲಯದ ಪ್ರಧಾನ ಅರ್ಚಕ ಗೋಪಾಲಕೃಷ್ಣ ಭಟ್ಟರ್, ಅನಂತಕೃಷ್ಣ ಭಟ್ಟರ್ ಹಾಗೂ ಯು.ವಿ. ಗಿರೀಶ್ ಅವರ ನೇತೃತ್ವದಲ್ಲಿ ಶ್ರೀವೆಂಕಟೇಶ್ವರಸ್ವಾಮಿ ವಿಗ್ರಹಕ್ಕೆ ಹೂ ಮತ್ತು ಆಭರಣಗಳಿಂದ ವಿಶೇಷವಾಗಿ ಅಲಂಕರಿಸಿ ವಾದ್ಯಗೋಷ್ಠಿಯೊಂದಿಗೆ ರಾಮತಾರಕ ಹಾಗೂ ಮೂಲಮಂತ್ರ ಹೋಮ, ಪೂಜಾ ಕಾರ್ಯಕ್ರಮ ವಿಜೃಂಭಣೆಯಿಂದ ಜರುಗಿತು.

ಅಯೋಧ್ಯೆಯ ರಾಮಮಂದಿರದಲ್ಲಿ ವಿಗ್ರಹ ಪ್ರತಿಷ್ಠಾಪನೆ ಹಾಗೂ ಉದ್ಘಾಟನಾ ಕಾರ್ಯಕ್ರಮ ಯಾವುದೇ ತೊಡಕಿಲ್ಲದೆ ಸುಭೀಕ್ಷವಾಗಿ ಕೋಟ್ಯಾಂತರ ಭಕ್ತಾಧಿಗಳೊಂದಿಗೆ ನೆರವೇರಲಿ ಎಂದು ಪೂಜಾ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ಈ ಪೂಜಾ ಕಾರ್ಯಕ್ರಮದಲ್ಲಿ ನೂರಾರು ಭಕ್ತಾಧಿಗಳು ಆಗಮಿಸಿ ಪ್ರಾರ್ಥನೆ ಮಾಡಿಕೊಂಡರು. ಬಂದಂತಹ ಭಕ್ತಾಧಿಗಳಿಗೆ ಪ್ರಸಾದ ವಿತರಣೆ ನಡೆಯಿತು. ಇದೇ ವೇಳೆ ಶ್ರೀವೆಂಕಟೇಶ್ವರಸ್ವಾಮಿ ಸೇವಾಟ್ರಸ್ಟ್‌ನ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕಲ್ಲಡ್ಕ ಪ್ರಭಾಕರ್‌ಭಟ್‌ಗೆ ನಿರೀಕ್ಷಣಾ ಜಾಮೀನು



ಮಂಡ್ಯ, ಜ.17– ಪ್ರಚೋದನಕಾರಿ ಭಾಷಣ ಮಾಡಿದ್ದ ಆರೋಪ ಎದುರಿಸುತ್ತಿದ್ದ ಆರ್.ಎಸ್.ಎಸ್. ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್‌ಗೆ ನಿರೀಕ್ಷಣಾ ಜಾಮೀನು ಮಂಜೂರಾಗಿದೆ.

ಮುಸ್ಲಿಂ ಮಹಿಳೆಯರ ಬಗ್ಗೆ ಆಕ್ಷೇಪಾರ್ಹ ಭಾಷಣ ಮಾಡಿದ್ದ ಆರೋಪದಡಿ ಶ್ರೀರಂಗಪಟ್ಟಣ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಭಾಕರ್ ಭಟ್ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ಭಟ್ ವಿರುದ್ಧ ಹೋರಾಟಗಾರ್ತಿ ನಜ್ಮಾ ನಜೀರ್ ದೂರು ನೀಡಿದ್ದರು. ಐಪಿಸಿ ಸೆಕ್ಷನ್ 354, 294, 509, 506, 153o, 295, 295o, 298 ಅಡಿ ಕಲ್ಲಡ್ಕ ಪ್ರಭಾಕರ್ ಭಟ್ ವಿರುದ್ಧ ಪ್ರಕರಣ ದಾಖಲಾಗಿತ್ತು. ಇಂದು ಈ ಪ್ರಕರಣ ಸಂಬಂಧ ಇಂದು ಶ್ರೀರಂಗಪಟ್ಟಣ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಕಲ್ಲಡ್ಕ ಪ್ರಭಾಕರ್‌ಗೆ ನಿರೀಕ್ಷಣಾ ಜಾಮೀನು ಮಂಜೂರಾಗಿದ್ದು, ಇಬ್ಬರ ಶ್ಯೂರಿಟಿ ಜೊತೆಗೆ 2 ಲಕ್ಷ ಬಾಂಡ್ ಮೇಲೆ ನಿರೀಕ್ಷಣಾ ಜಾಮೀನು ಮಂಜೂರಾಗಿದೆ. ವಕೀಲ ಚಂದ್ರೇಗೌಡರಿಂದ ಕಲ್ಲಡ್ಕ ಪ್ರಭಾಕರ್ ಪರ ವಾದ ಮಂಡನೆ ಮಾಡಿದರು.

ಗೂಡ್ಸ್ ವಾಹನ ಡಿಕ್ಕಿ: ಪಾದಚಾರಿ ಸಾವು



ಕೆ.ಆರ್.ಪೇಟೆ, ಜ.17– ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ರೈತರೊಬ್ಬರು ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ಜಾಗಿನಕೆರೆ ಬಳಿ ಇರುವ ಜಲಸೂರು–ಬೆಂಗಳೂರು ಹೆದ್ದಾರಿಯಲ್ಲಿ ಮಂಗಳವಾರ ಸಂಜೆ 7.45 ಗಂಟೆ ಸಮಯದಲ್ಲಿ ನಡೆದಿದೆ.

ಜಾಗಿನಕೆರೆ ಗ್ರಾಮದ ಮೋಟೇಗೌಡರ ಮಗ ನಾಗೇಶ್(58) ಮೃತಪಟ್ಟವರು.

ಘಟನೆ ವಿವರ: ರೈತ ನಾಗೇಶ್ ಅವರು ಕೆಲಸದ ನಿಮಿತ್ತ ಕೈಗೋನಹಳ್ಳಿ ಕ್ರಾಸ್‌ಗೆ ಹೋಗಿ ವಾಪಸ್ ಬರುತ್ತಿದ್ದ ವೇಳೆ ಎದುರಿನಿಂದ ಬಂದ ಗೂಡ್ಸ್ ವಾಹನ (ಕೆಎ13–ಬಿ1412) ಅವರಿಗೆ ಡಿಕ್ಕಿ ಹೊಡೆದು ಹಿಂಬದಿ ಚಕ್ರವು ನಾಗೇಶ್ ಅವರ ಮೈಮೇಲೆ ಹರಿದಿದೆ. ಇದರಿಂದ ಗಂಭೀರವಾಗಿ ಗಾಯಗೊಂಡ ನಾಗೇಶ್ ಅವರು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ.

ಘಟನೆಯ ನಂತರ ಒಂದು ಕಿ.ಮೀ. ದೂರದಲ್ಲಿ ವಾಹನ ಬಿಟ್ಟು ಚಾಲಕ ಪರಾರಿಯಾಗಿದ್ದಾನೆ.

ಕೆ.ಆರ್.ಪೇಟೆ ಪೊಲೀಸ್ ಠಾಣೆಯ ವೃತ್ತನಿರೀಕ್ಷಕಿ ಸುಮಾರಾಣಿ, ಸಬ್‌ಇನ್ಸ್‌ಪೆಕ್ಟರ್ ನವೀನ್ ಭೇಟಿ ನೀಡಿ, ಪರಿಶೀಲನೆ ನಡೆಸಿ ಅಪಘಾತ ನಡೆಸಿದ ವಾಹನವನ್ನು ವಶಕ್ಕೆ ಪಡೆದು, ವಾಹನದ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

ಗ್ರಾಮಸ್ಥರ ಆಗ್ರಹ: ಅಪಘಾತ ನಡೆದ. ಜಲಸೂರು– ಬೆಂಗಳೂರು ಅಂತಾರಾಜ್ಯ ಹೆದ್ದಾರಿ ಸ್ಥಳದಲ್ಲಿ ಕೆಶಿಪ್ ಸಂಸ್ಥೆಯವರು ರಸ್ತೆ ಬದಿಯಲ್ಲಿ ವಿದ್ಯುತ್ ದೀಪಗಳನ್ನು ಹಾಕಿರುವುದಿಲ್ಲ. ಇದು ಈ ಅಪಘಾತಕ್ಕೆ ಪ್ರಮುಖ ಕಾರಣವಾಗಿದೆ. ವಿದ್ಯುತ್ ದೀಪಗಳು ಇಲ್ಲದ ಕಾರಣ ಈ ಹೆದ್ದಾರಿಯಲ್ಲಿ ಹಲವು ಅಪಘಾತಗಳು ಸಂಭವಿಸಿವೆ. ಹಾಗಾಗಿ ಕೆಶಿಪ್ ಇಲಾಖೆಯು ಈ ಅಪಘಾತದ ಹೊಣೆ ಹೊತ್ತು ಮೃತ ರೈತ ನಾಗೇಶ್ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು ಎಂದು ಜಾಗಿನಕೆರೆ ಗ್ರಾಮಸ್ಥರು ಕೆಶಿಪ್ ಅಧಿಕಾರಿಗಳನ್ನು ಒತ್ತಾಯ ಮಾಡಿದ್ದಾರೆ.

ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ಯತ್ನ

ಯುವಕ, ಆತನ ತಂದೆ–ತಾಯಿ ವಿರುದ್ಧ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲು

ತಿ.ನರಸೀಪುರ,ಜ.17–ಯುವಕನೋರ್ವ ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರ ವೆಸಗಲು ಯತ್ನಿಸಿದ ಘಟನೆ ತಾಲೂಕಿನ ಸೋಮನಾಥಪುರ ಗ್ರಾಮದಿಂದ ತಡವಾಗಿ ವರದಿಯಾಗಿದ್ದು, ಈ ಸಂಬಂಧ ಯುವಕ ಹಾಗೂ ಆತನ ತಂದೆ–ತಾಯಿ ವಿರುದ್ಧ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ. ಸೋಮನಾಥಪುರ ಗ್ರಾಮದ ದಿಲೀಪ್ ಕುಮಾರ್ ಎಂಬಾತನೇ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರವೆಸಗಲು ಪ್ರಯತ್ನಿಸಿದ ಆರೋಪಕ್ಕೆ ಗುರಿಯಾದವನಾಗಿದ್ದು, ಈತನ ವರ್ತನೆ ಬಗ್ಗೆ ತಿಳಿಸಿದಾಗ ಬಾಲಕಿಯ ತಾಯಿಗೆ ಬೆದರಿಕೆ ಹಾಕಿದ ಕಾರಣದಿಂದ ಈತನ ತಂದೆ ರಾಮಲಿಂಗಯ್ಯ ಮತ್ತು ತಾಯಿ ವಿರುದ್ಧವೂ ಪ್ರಕರಣ ದಾಖಲಾಗಿದೆ. ಕಳೆದ ಡಿ.27 ರಂದು ಸಂಜೆ 15 ವರ್ಷದ ಬಾಲಕಿ ಪೆನ್ನು ತರಲು ಅಂಗಡಿಗೆ ಹೋಗುತ್ತಿದ್ದಾಗ ಆಕೆಯನ್ನು ಅಡ್ಡಗಟ್ಟಿ ಗಲ್ಲಿಯೊಂದಕ್ಕೆ ಎಳೆದೊಯ್ದ ದಿಲೀಪ್ ಕುಮಾರ್, ಅತ್ಯಾಚಾರಕ್ಕೆ ಯತ್ನಿಸಿದ್ದ. ಬಾಲಕಿಯ ಚೀರಾಟ ಕೇಳಿ ಅಲ್ಲಿಗೆ ಬಂದ ಗ್ರಾಮದ ದಂಪತಿ ಆಕೆಯನ್ನು ರಕ್ಷಿಸಿದ್ದರು. ನಂತರ ಈ ಸಂಬಂಧ ದಿಲೀಪ್ ಕುಮಾರ್‌ನ ತಂದೆ–ತಾಯಿಗೆ ಬಾಲಕಿಯ ತಾಯಿ ತಿಳಿಸಿದಾಗ ಅವರು ತಮ್ಮ ಮಗನ ಮೇಲೆ ದೂರು ನೀಡಿದರೆ ನಿನ್ನನ್ನು ಕೆಲಸದಿಂದ ತೆಗೆಸಿಬಿಡುತ್ತೇವೆ. ಗ್ರಾಮದಲ್ಲಿ ಇರಲು ಬಿಡುವುದಿಲ್ಲ. ಕುಟುಂಬವನ್ನೇ ಸರ್ವನಾಶ ಮಾಡುತ್ತೇವೆ ಎಂದು ಬೆದರಿಸಿರುವುದಾಗಿ ಜ.17ರಂದು ಬಾಲಕಿ ನೀಡಿದ ದೂರನ್ನು ದಾಖಲಿಸಿಕೊಂಡು ಬನ್ನೂರು ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಒಂದನೇ ಪುಟದಿಂದ

ತಂದೆ, ಮಗಳು ಸಾವು

ರಾಜೇಶ್ ದೇವಯ್ಯ ಮಡಿಕೇರಿಯಲ್ಲಿ ನಡೆದ ತಮ್ಮ ಪತ್ನಿ ಸ್ಮಿತಾ ಅವರ ಸಹೋದರಿ ಪುತ್ರಿಯ ನಾಮಕರಣ ಕಾರ್ಯಕ್ರಮ ಮುಗಿಸಿ ಪುತ್ರಿಯೊಂದಿಗೆ ಮಾರುತಿ ಓಮ್ನಿಯಲ್ಲಿ ಬಸವನಹಳ್ಳಿಗೆ ವಾಪಸ್ಸಾಗುತ್ತಿದ್ದರು. ಈ ವೇಳೆ ಆನೇಕಾಡು ಬಳಿಯ ಬೊಯಿಕೇರಿ ಕಡೆಗೆ ತೋಟದ ಕೆಲಸಕ್ಕೆ ಕಾರ್ಮಿಕ ಮಹಿಳೆಯರನ್ನು ಕರೆದೊಯ್ಯುತ್ತಿದ್ದ ಪಿರಿಯಾಪಟ್ಟಣ ತಾಲೂಕಿನ ಚನಕಲ್ ಕಾವಲ್‌ನ ಬೊಲೆರೋ ಜೀಪ್ ಮತ್ತು ಓಮ್ನಿ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಪರಿಣಾಮ ರಾಜೇಶ್ ದೇವಯ್ಯ ಸ್ಥಳದಲ್ಲೇ ಮೃತಪಟ್ಟಿದ್ದು, ತೀವ್ರ ಗಾಯಗೊಂಡಿದ್ದ ಪುತ್ರಿ ನ್ಯಾನ್ಸಿ ಬೊಳ್ಳಮ್ಮನನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾಳೆ. ಜೀಪ್ ಚಾಲಕ ಅರುಣ್, ಕಾರ್ಮಿಕರಾದ ಜಯಲಕ್ಷ್ಮೀ ಹಾಗೂ ನೀಲಮ್ಮ ಅವರಿಗೆ ಗಂಭೀರ ಗಾಯಗಳಾಗಿದ್ದು, ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಲಾಗಿದೆ. ಅಪಘಾತದ ರಭಸಕ್ಕೆ ಓಮ್ನಿ ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ. ಈ ಸಂಬಂಧ ಕುಶಾಲನಗರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೆಚ್.ಡಿ.ಕುಮಾರಸ್ವಾಮಿ ಮಾತುಕತೆ


ಸೇರಿದಂತೆ ರಾಜ್ಯ ರಾಜಕಾರಣ ಕುರಿತು ಸುಮಾರು 45 ನಿಮಿಷಕ್ಕೂ ಹೆಚ್ಚು ಕಾಲ ಕುಮಾರಸ್ವಾಮಿ ಮಾತುಕತೆ ನಡೆಸಿದರು. ಕ್ಷೇತ್ರ ಹಂಚಿಕೆ ಸೇರಿದಂತೆ ಎನ್‌ಡಿಎ ಮೈತ್ರಿಕೂಟಕ್ಕೆ ಜೆಡಿಎಸ್ ಅಧಿಕೃತವಾಗಿ ಸೇರ್ಪಡೆ ಯಾಗುವ ಪ್ರಕ್ರಿಯೆಗಳು ಅಯೋಧ್ಯೆಯಲ್ಲಿ ಶ್ರೀರಾಮ ದೇವರ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ ಮುಗಿದ ನಂತರ ಅಂತಿಮಗೊಳಿಸೋಣ ಎಂದು ಇದೇ ವೇಳೆ ಅಮಿತ್ ಶಾ ತಿಳಿಸಿದರು ಎಂದು ಹೇಳಲಾಗಿದೆ. ರಾಜ್ಯದ ಎಲ್ಲಾ 28 ಲೋಕಸಭಾ ಕ್ಷೇತ್ರಗಳಲ್ಲೂ ಎನ್‌ಡಿಎ ಮೈತ್ರಿಕೂಟ ಗೆಲುವು ಸಾಧಿಸಿ ನರೇಂದ್ರ ಮೋದಿಯವರು ಮತ್ತೊಮ್ಮೆ ಭಾರತದ ಪ್ರಧಾನಿಯಾಗಬೇಕು. ಅದಕ್ಕಾಗಿ ಕರ್ನಾಟಕದಲ್ಲಿ ಎರಡೂ ಪಕ್ಷಗಳು ಒಟ್ಟಾಗಿ ಕೆಲಸ ಮಾಡೋಣ. ಉಭಯ ಪಕ್ಷಗಳು ವಿಶ್ವಾಸ ಹಾಗೂ ನಂಬಿಕೆ ಆಧಾರದಲ್ಲಿ ಚುನಾವಣೆ ಎದುರಿಸುವ ನಿಟ್ಟಿನಲ್ಲಿ ನಿರ್ಧಾರಗಳನ್ನು ಮಾಡೋಣ ಎಂದು ಕುಮಾರಸ್ವಾಮಿ ಅವರಿಗೆ ಅಮಿತ್ ಶಾ ಮತ್ತು ಜೆ.ಪಿ.ನಡ್ಡಾ ತಿಳಿಸಿದರು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರಕ್ಕೆ ವರ್ಷ ತುಂಬುವ ಮೊದಲೇ ಆಡಳಿತ ವಿರೋಧಿ ಅಲೆ ಸೃಷ್ಟಿಯಾಗಿದೆ. ಜನರು ಇನ್ನಿಲ್ಲದ ಸಂಕಷ್ಟ ಅನುಭವಿಸುತ್ತಿದ್ದಾರೆ. ಹೀಗಾಗಿ ರಾಜ್ಯ ಸರ್ಕಾರದ ವೈಫಲ್ಯಗಳನ್ನು ಪರಿಣಾಮಕಾರಿಯಾಗಿ ಜನರ ಗಮನಕ್ಕೆ ತರುವ ಬಗ್ಗೆಯೂ ಕೂಡ ಚರ್ಚೆ ನಡೆಯಿತು.

“ ಮುಕ್ಕಾಲು ಗಂಟೆ ನಡೆದ ಸಭೆಯಲ್ಲಿ ಕೇಂದ್ರ ಗೃಹ ಸಚಿವರು ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ಜೊತೆ ಎಲ್ಲಾ ವಿಷಯಗಳನ್ನೂ ಮುಕ್ತವಾಗಿ ಚರ್ಚಿಸಿದ್ದೇನೆ. ಕೇಂದ್ರದಲ್ಲಿ ಮತ್ತೊಮ್ಮೆ ಎನ್‌ಡಿಎ ಮೈತ್ರಿ ಕೂಟ ಅಧಿಕಾರಕ್ಕೆ ಬಂದು ನರೇಂದ್ರ ಮೋದಿ ಅವರು ಮೂರನೇ ಬಾರಿಗೆ ಪ್ರಧಾನಿಯಾಗಬೇಕು. ಈ ನಿಟ್ಟಿನಲ್ಲಿ ಜೆಡಿಎಸ್ ಮತ್ತು ಬಿಜೆಪಿ ಒಟ್ಟಾಗಿ ಕೆಲಸ ಮಾಡುವ ಬಗ್ಗೆ ಮಾತುಕತೆ ನಡೆಸಿದ್ದೇವೆ.

–ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ

ವಿಧಾನಸೌಧದ ಮುಂದಿನ ಮೆಟ್ಟಿಲ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜನತಾದರ್ಶನ

ಸರ್ಕಾರ ಜನತೆ ಜತೆ ಇದೆ ಎಂದು ವಿಶ್ವಾಸ ಮೂಡಿಸುವ ಪ್ರಯತ್ನವಾಗಿ ಆಡಳಿತ ಶಕ್ತಿ ಕೇಂದ್ರದಲ್ಲೇ ಅಹವಾಲು ಸ್ವೀಕಾರ; ಇದಕ್ಕೂ ಮುನ್ನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳೊಂದಿಗೆ ಸಭೆ



ಬೆಂಗಳೂರು, ಜ.17(ಕೆಎಂಶಿ)– ಜನರ ಸಮಸ್ಯೆ ಆಲಿಸಿ ಪರಿಹಾರ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನ ಸೌಧದ ಮುಂಭಾಗದ ಮೆಟ್ಟಿಲುಗಳ ಮೇಲೆ ಜನತಾದರ್ಶನ ಹಮ್ಮಿಕೊಂಡಿದ್ದಾರೆ.

ಇದುವರೆಗೂ ಅಧಿಕಾರದಲ್ಲಿದ್ದವರು, ತಮ್ಮ ಗೃಹ ಕಚೇರಿ ಕೃಷ್ಣಾ ಇಲ್ಲವೇ ಜಿಲ್ಲಾಧಿಕಾರಿಗಳ ಕಚೇರಿ ಅಥವಾ ಜಿಲ್ಲಾ ಪಂಚಾಯತ್ ಕಚೇರಿ ಆವರಣದಲ್ಲಿ ಜನತಾದರ್ಶನ ನಡೆಸುತ್ತಿದ್ದರು.

ಜನರ ಮನೆ ಬಾಗಿಲಿಗೆ ಸರ್ಕಾರ ಎಂಬುದನ್ನು ಸಾಭೀತುಪಡಿಸುವ ಉದ್ದೇಶದಿಂದ ಈ ಬಾರಿ ಮುಖ್ಯಮಂತ್ರಿ ಅವರು ವಿಧಾನ ಸೌಧದ ಮೆಟ್ಟಿಲುಗಳ ಮೇಲೆ ಜನತಾ ದರ್ಶನ ನಡೆಸುತ್ತಿದ್ದಾರೆ. ಫೆಬ್ರವರಿ 8ರಂದು ಇಡೀ ದಿನ ಜನತಾದರ್ಶನ ನಡೆಯಲಿದ್ದು, ಅಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಸೇರಿದಂತೆ ಇಲಾಖೆಯ ಮುಖ್ಯಸ್ಥರು ಹಾಗೂ ಹಿರಿಯ ಅಧಿಕಾರಿಗಳು ಸ್ಥಳದಲ್ಲಿ ಉಪಸ್ಥಿತರಿರಬೇಕು.

ಇದಕ್ಕೂ ಮುನ್ನ ಮುಖ್ಯಮಂತ್ರಿ ಅವರು, ಹಿಂದಿನ ಜನತಾದರ್ಶನ ಕಾರ್ಯಕ್ರಮಗಳಲ್ಲಿ ಆಗಿರುವ ಪ್ರಗತಿ ಸೇರಿದಂತೆ ಉಳಿದ ವಿಚಾರಗಳ ಬಗ್ಗೆ ಮಾಹಿತಿ ಪಡೆಯಲು ಜನವರಿ 31ರಂದು ಜಿಲ್ಲಾ ಉಸ್ತುವಾರಿ ಹೊಣೆ ಹೊತ್ತ ಇಲಾಖಾ ಪ್ರಧಾನ ಕಾರ್ಯದರ್ಶಿಗಳ ಸಭೆ ಕರೆದಿದ್ದಾರೆ.

ಸಭೆಗೆ ಬರುವುದಕ್ಕೂ ಮುನ್ನ ತಮ್ಮ ಕಚೇರಿಯಿಂದ ಕಳುಹಿಸಿರುವ ಐದು ಪ್ರಶ್ನಾವಳಿಗಳಿಗೆ ಸಂಬಂಧಿಸಿದಂತೆ ಮಾಹಿತಿ ಮತ್ತು ಕಡತಗಳನ್ನು ಕಡ್ಡಾಯವಾಗಿ ತರುವಂತೆ ಮುಖ್ಯಮಂತ್ರಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ವಹಿಸಿಕೊಂಡ ನಂತರ ನೀವು ಎಷ್ಟು ಬಾರಿ ಆ ಜಿಲ್ಲೆಗೆ ತೆರಳಿದ್ದೀರಿ, ಜಿಲ್ಲೆಯಲ್ಲಿನ ಪ್ರಗತಿ ಪರಿಶೀಲನೆಗೆ ಎಷ್ಟು ಕಚೇರಿ ಮತ್ತು ಸಂಸ್ಥೆಗಳಿಗೆ ಭೇಟಿ ನೀಡಿದ್ದೀರಿ, ಜಿಲ್ಲೆಯಲ್ಲಿ ಯಾವ ಐದು ಇಲಾಖೆಗಳು ಉತ್ತಮವಾಗಿ ಕಾರ್ಯನಿರ್ವಹಿಸಿವೆ, ಯಾವ ಐದು ಇಲಾಖೆಗಳು ಕಳಪೆ ಕೆಲಸ ಮಾಡಿವೆ ಎಂಬ ಮಾಹಿತಿ ನೀಡಿ.

ಸರ್ಕಾರದ ಐದು ಪ್ರತಿಷ್ಠಿತ ಗ್ಯಾರಂಟಿ ಯೋಜನೆಗಳು ಯಾವ ಮಟ್ಟಕ್ಕೆ ಜನರನ್ನು ತಲುಪಿವೆ. ಇದರಿಂದ ಬಡವರಿಗೆ ಯಾವ ರೀತಿ ಸಹಕಾರಿಯಾಗಿದೆ, ಎಲ್ಲಿ ಇನ್ನೂ ಯೋಜನೆಗಳು ತಲುಪಿಲ್ಲ, ಏತಕ್ಕೆ ಎಂಬ ಮಾಹಿತಿ ನೀಡುವಂತೆ ಉಸ್ತುವಾರಿ ಪ್ರಧಾನ ಕಾರ್ಯದರ್ಶಿಗಳಿಗೆ ಪಂಚ ಪ್ರಶ್ನೆಗಳನ್ನು ಇಟ್ಟಿದ್ದಾರೆ.

ಇದೆಲ್ಲದಕ್ಕೂ ಮಿಗಿಲಾಗಿ ಜನರ ಸಮಸ್ಯೆಯನ್ನು ಆಲಿಸಿ, ಅದಕ್ಕೆ ಪರಿಹಾರ ಕಂಡುಕೊಳ್ಳಲು ನಿಮ್ಮ ಬಳಿಗೆ ಬಂದ ಪತ್ರಗಳಿಗೆ ಯಾವ ರೀತಿ ಸ್ಪಂದನೆ ದೊರೆತಿದೆ ಎಂಬ ಮಾಹಿತಿ ಇಟ್ಟುಕೊಂಡು ಸಭೆಗೆ ಬರುವಂತೆ ಮುಖ್ಯಮಂತ್ರಿ ಆದೇಶಿಸಿದ್ದಾರೆ.

ಸಿದ್ದರಾಮಯ್ಯ ಅಧಿಕಾರ ವಹಿಸಿಕೊಂಡ ನಂತರ ಎರಡನೇ ಬಾರಿಗೆ ಬೃಹತ್ ಜನತಾದರ್ಶನ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಅಂದು ಸಾರ್ವಜನಿಕರು ನೀಡುವ ಅಹವಾಲುಗಳಿಗೆ ಸ್ಥಳದಲ್ಲಿಯೇ ಸ್ಪಂದಿಸಲು ಹತ್ತು ಹಲವು ಕಾರ್ಯಕ್ರಮಗಳನ್ನೂ ರೂಪಿಸಿದ್ದಾರೆ. ವಿಧಾನಸೌಧದ ಮೆಟ್ಟಿಲುಗಳ ಮುಂಭಾಗದ ಇಡೀ ಆವರಣ ಸಾರ್ವಜನಿಕರ ಪ್ರವೇಶಕ್ಕೆ ಅಂದು ಮುಕ್ತವಾಗಿರಲಿದೆ.

ಚಿಕ್ಕನಂದಿ ಗ್ರಾಮದಲ್ಲಿ ಬೋನಿಗೆ ಬಿದ್ದ ಚಿರತೆ



ಹೆಚ್.ಡಿ.ಕೋಟೆ, ಜ.17– ತಾಲೂಕಿನ ಚಿಕ್ಕನಂದಿ ಗ್ರಾಮದಲ್ಲಿ ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಬುಧವಾರ ಚಿರತೆ ಸೆರೆಯಾಗಿದೆ. ಚಿಕ್ಕನಂದಿ ಗ್ರಾಮದ ರೈತ ಕೆಂಪ ಎಂಬುವರ ಜಮೀನಿನಲ್ಲಿ ಬೋನನ್ನು ಮಂಗಳವಾರ ಇರಿಸಲಾಗಿತ್ತು. ಬೋನು ಇಟ್ಟ 12 ಗಂಟೆಯೊಳಗೆ ಚಿರತೆ ಸೆರೆಯಾಗಿದ್ದು, ಐದು ವರ್ಷ ಪ್ರಾಯದ ಗಂಡು ಚಿರತೆ ಎಂದು ಗುರುತಿಸಲಾಗಿದೆ.

ಕಳೆದ ಕೆಲ ವರ್ಷಗಳಿಂದ ಚಿಕ್ಕನಂದಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಚಿರತೆಗಳ ಉಪಟಳ ಜೋರಾಗಿತ್ತು. ಹಿಂದೆ ಹಲವು ಭಾರಿ 6ಕ್ಕೂ ಹೆಚ್ಚು ಚಿರತೆಗಳು ಚಿಕ್ಕನಂದಿ ಗ್ರಾಮದಲ್ಲಿಯೇ ಬೋನಿಗೆ ಬಿದ್ದಿವೆ. ಕಳೆದೊಂದು ವರ್ಷದಲ್ಲೇ ಎರಡು ಚಿರತೆಗಳು ಬೋನಿಗೆ ಬಿದ್ದಿವೆ. ಅದೇ ರೀತಿ ಕಳೆದ ಹದಿನೈದು ದಿನಗಳಿಂದ ಚಿರತೆ ಹಾವಳಿ ಮತ್ತೆ ಕಾಣಿಸಿಕೊಂಡಿತ್ತು.

ಜಾನುವಾರುಗಳನ್ನು ಕೊಂದು ತಿನ್ನುವುದಲ್ಲದೇ, ಜಮೀನುಗಳಲ್ಲಿ ಹಲವಾರು ರೈತರ ಕಣ್ಣಿಗೆ ಕಾಣಿಸಿಕೊಂಡಿದ್ದು, ರೈತರು ಭಯಭೀತರಾಗಿದ್ದರು. ಈ ಸಂಬಂಧ ಅರಣ್ಯ ಇಲಾಖೆಗೆ ಗ್ರಾಮಸ್ಥರು ದೂರು ನೀಡಿದ್ದರು. ತಕ್ಷಣ ಕಾರ್ಯಪ್ರವೃತ್ತರಾದ ಅರಣ್ಯ ಸಿಬ್ಬಂದಿ ಮಂಗಳವಾರ ಸಂಜೆ ಗ್ರಾಮದ ಕೆಂಪ ಎಂಬುವರ ಜಮೀನಿನಲ್ಲಿ ಭೋನನ್ನು ಇಟ್ಟಿದ್ದರು.

ಸೆರೆ ಸಿಕ್ಕ ಚಿರತೆಯನ್ನು ಬಂಡೀಪುರ ಅರಣ್ಯಕ್ಕೆ ಬಿಡಲಾಯಿತು ಎಂದು ಅರಣ್ಯ ಇಲಾಖೆ ಸಿಬ್ಬಂದಿ ಮಾಹಿತಿ ನೀಡಿದ್ದಾರೆ.

ಟಿ20 ಸರಣಿ ಕ್ಲೀನ್ ಸ್ವೀಪ್ ಮಾಡಿದ ಭಾರತ

ಡಬ್ಬಲ್ ಸೂಪರ್ ಓವರ್‌ನಲ್ಲಿ ರೋಚಕ ಗೆಲುವು ಸಾಧಿಸಿದ ಟೀಮ್ ಇಂಡಿಯಾ

ಬೆಂಗಳೂರು, ಜ.17–ಟೈ ಆಗಿದ್ದ ಪಂದ್ಯದಲ್ಲಿ ಡಬ್ಬಲ್ ಸೂಪರ್ ಓವರ್‌ಗಳ ಆಟದ ನಂತರ ಭಾರತ ಆಫ್ಘಾನಿಸ್ತಾನದ ವಿರುದ್ಧ ರೋಚಕ ಗೆಲುವು ಸಾಧಿಸುವ ಮೂಲಕ ಟಿ20 ಸರಣಿಯನ್ನು ಕ್ಲೀನ್ ಸ್ವೀಪ್ ಮಾಡಿದೆ.

ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ 3ನೇ ಹಾಗೂ ಅಂತಿಮ ಟಿ20 ಪಂದ್ಯದಲ್ಲಿ ಭಾರತ ಎಲ್ಲಾ ಪಂದ್ಯಗಳಲ್ಲಿ ಜಯ ಸಾಧಿಸುವ ಮೂಲಕ 3–0ಯಿಂದ ಸರಣಿಯನ್ನು ತನ್ನದಾಗಿಸಿಕೊಂಡು ಬೀಗಿತು.

ಎರಡನೇ ಸೂಪರ್ ಓವರ್‌ನಲ್ಲಿ ಭಾರತ ನೀಡಿದ್ದ 12 ರನ್ನುಗಳ ಮೊತ್ತವನ್ನು ಬೆನ್ನತ್ತಿದ ಆಫ್ಘಾನಿಸ್ತಾನ ಕೇವಲ 1 ರನ್ ಗಳಿಸಿ 2 ವಿಕೆಟ್ ಕಳೆದುಕೊಳ್ಳುವ ಮೂಲಕ ಸೋಲು ಅನುಭವಿಸಿತು. ಭಾರತದ ಪರ ಉತ್ತಮ ಬೌಲಿಂಗ್ ಪ್ರದರ್ಶನ ನೀಡಿದ ರವಿ ಬಿಸ್ನಾಯ್ 1 ರನ್ನಿತ್ತು 2 ವಿಕೆಟ್ ಪಡೆದು ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಇದಕ್ಕೂ ಮುನ್ನ ನಡೆದ ಮೊದಲ ಸೂಪರ್ ಓವರ್‌ನಲ್ಲಿ ಆಫ್ಘಾನಿಸ್ತಾನ 1 ವಿಕೆಟ್ ಕಳೆದುಕೊಂಡು 16 ರನ್ ಮಾಡಿತು. ಈ ಮೊತ್ತವನ್ನು ಬೆನ್ನತ್ತಿದ ಭಾರತ ಕೂಡ 16 ರನ್ ಗಳಿಸಿದ್ದರಿಂದ ಪಂದ್ಯ ಟೈ ಗೊಂಡಿತ್ತು. ನಿಯಮದಂತೆ ಮತ್ತೆ ಸೂಪರ್ ಓವರ್ ಆಡಿಸಲಾಯಿತು. ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 212 ರನ್ ಗಳಿಸಿತು. ಭಾರತದ ಪರ ರೋಹಿತ್ ಶರ್ಮಾ ಭರ್ಜರಿ ಶತಕ ಬಾರಿಸಿದರು. 69 ಎಸೆತಗಳಲ್ಲಿ 121 ರನ್ ಸೇರಿಸುವ ಮೂಲಕ ಭಾರತ ಉತ್ತಮ ಮೊತ್ತ ಸೇರಿಸಲು ಕಾರಣ ಕರ್ತರಾದರು. ಇವರಿಗೆ ಉತ್ತಮ ಸಾಥ್ ನೀಡಿದ ರಿಂಕುಸಿಂಗ್ 39 ಎಸೆತ ಗಳಲ್ಲಿ 69 ರನ್ ಗಳಿಸಿದರು. ಒಂದು ಹಂತದಲ್ಲಿ ಭಾರತ 22 ರನ್ನುಗಳಿಗೆ 4 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿ ಸಿಲುಕಿತ್ತು. ಈ ವೇಳೆ ಜೊತೆಗೂಡಿದ ನಾಯಕ ರೋಹಿತ್ ಶರ್ಮಾ ಮತ್ತು ರಿಂಕು ಸಿಂಗ್ 5ನೇ ವಿಕೆಟ್ ಜೊತೆಯಾಟದಲ್ಲಿ ಮುರಿಯದ 190 ರನ್‌ಗಳನ್ನು ಸೇರಿಸಿ ತಂಡವನ್ನು ಬಲಪಡಿಸಿದರು.

ಭಾರತದ ಈ ಮೊತ್ತವನ್ನು ಬೆನ್ನತ್ತಿದ ಆಫ್ಘಾನಿಸ್ತಾನ ಭಾರತೀಯ ಬೌಲರ್‌ಗಳ ದಾಳಿಯನ್ನು ಲೀಲಾಜಾಲವಾಗಿ ಎದುರಿಸಿ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 212 ರನ್ ಗಳಿಸಿ ಪಂದ್ಯ ಟೈ ಮಾಡಿಕೊಂಡರು.

ಐತಿಹಾಸಿಕ ಶತಕ ಸಿಡಿಸಿದ ರೋಹಿತ್ ಶರ್ಮಾ

ಬೆಂಗಳೂರು, ಜ. 17– ಭಾರತ ಮತ್ತು ಅಫ್ಘಾನಿಸ್ತಾನ ನಡುವೆ ಬೆಂಗಳೂರಿನ ಎಂ. ಚಿನ್ನಸ್ವಾಮಿ ಮೈದಾನದಲ್ಲಿ ನಡೆದ ಮೂರನೇ ಟಿ20 ಪಂದ್ಯದಲ್ಲಿ ರೋಹಿತ್ ಶರ್ಮಾ ಭರ್ಜರಿ ಶತಕ ಸಿಡಿಸಿದ್ದಾರೆ. ಈ ಪಂದ್ಯದಲ್ಲಿ ಕೇವಲ 64 ಎಸೆತಗಳಲ್ಲಿ ರೋಹಿತ್ ಶತಕ ಪೂರೈಸಿದ್ದಾರೆ. ಇದು ರೋಹಿತ್ ಶರ್ಮಾ ಅವರ ಐದನೇ ಅಂತಾರಾಷ್ಟ್ರೀಯ ಟಿ20 ಶತಕವಾಗಿದೆ. ರೋಹಿತ್‌ಗೂ ಮೊದಲು ಯಾವುದೇ ಬ್ಯಾಟ್ಸ್‌ಮನ್‌ಗಳು ಟಿ20 ಅಂತರಾಷ್ಟ್ರೀಯ ಪಂದ್ಯಗಳಲ್ಲಿ ಐದು ಶತಕಗಳನ್ನು ಸಿಡಿಸಿರಲಿಲ್ಲ. ಇದೀಗ ದಾಖಲೆಯ ಐದನೇ ಶತಕ ಸಿಡಿಸಿರುವ ರೋಹಿತ್ ಶರ್ಮಾ ಈ ಸಾಧನೆ ಮಾಡಿದ ವಿಶ್ವದ ಏಕೈಕ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ. ತಮ್ಮ ಇನ್ನಿಂಗ್ಸ್‌ನಲ್ಲಿ 69 ಎಸೆತಗಳನ್ನು ಎದುರಿಸಿದ ರೋಹಿತ್ ಶರ್ಮಾ 11 ಬೌಂಡರಿ ಮತ್ತು 8 ಸಿಕ್ಸರ್‌ಗಳ ಸಹಿತ ಅಜೇಯ 121 ರನ್ ಚಚ್ಚಿದರು.

ಮೈಸೂರು ಎಫ್‌ಎಸ್‌ಎಸ್‌ಎಐನಿಂದ ಬಳಸಿದ ತೈಲದ ಬಗ್ಗೆ ಜಾಗೃತಿ

ಮೈಸೂರು, ಜ. 17– ಸುಸ್ಥಿರ ವಾತಾವರಣವನ್ನು ಸೃಷ್ಟಿಸುವ ನಿಟ್ಟಿನಲ್ಲಿ ಎಂ11 ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್ ಮೈಸೂರಿನ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದೊಂದಿಗೆ ಅಡುಗೆ ಎಣ್ಣೆಯನ್ನು ಜವಾಬ್ದಾರಿಯುತವಾಗಿ ಮರುಬಳಕೆ ಮಾಡುವ ಕುರಿತು ಜಾಗೃತಿ ಮೈಸೂರಿನ ಯಾದವಗಿರಿ ಸಂಕಲ್ಪ ಸೆಂಟ್ರಲ್ ಪಾರ್ಕ್‌ನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ನೇತೃತ್ವವನ್ನು ಸಂಕಲ್ಪ ಸಿಟಿ ಟವರ್ ಅಪಾರ್ಟ್‌ಮೆಂಟ್ ಅಧ್ಯಕ್ಷ ಚಿದಾ ಶಿವಣ್ಣ, ಎಫ್‌ಎಸ್‌ಎಸ್‌ಎಐ ಡಾ. ರವೀಂದ್ರ ಸಾಲ್ಕಟ್ಟೆ, ಸಂಕಲ್ಪ ಅಪಾರ್ಟ್‌ಮೆಂಟ್ ಕಾರ್ಯದರ್ಶಿ ಪೂರ್ಣಿಮಾ ಕುಮಾರ್ ಅವರು ಸಮುದಾಯಕ್ಕೆ ಜಾಗೃತಿ ಮೂಡಿಸಿ, ಬಳಸಿದ ಅಡುಗೆ ಎಣ್ಣೆಯ ಸುರಕ್ಷಿತ ವಿಲೇವಾರಿ ಮತ್ತು ಜೈವಿಕ ಡೀಸೆಲ್ ಆಗಿ ಪರಿವರ್ತಿಸುವುದನ್ನು ಉತ್ತೇಜಿಸುವುದರ ಬಗ್ಗೆ ತಿಳುವಳಿಕೆ ನೀಡಿದರು.


ಈ ಉಪಕ್ರಮವು ಜೈವಿಕ ಡೀಸೆಲ್ ಪರಿವರ್ತನೆಯ ಮೂಲಕ ಆರೋಗ್ಯ ಸುರಕ್ಷತೆ, ಇಂಧನ ಭದ್ರತೆ, ಹವಾಮಾನ ಬದಲಾವಣೆ ತಗ್ಗಿಸುವಿಕೆ ಮತ್ತು ಪರಿಸರ ಸುಸ್ಥಿರ ಅಭಿವೃದ್ಧಿಯನ್ನು ಉತ್ತೇಜಿಸುವ ಮೂಲಕ ಕಾನೂನುಬಾಹಿರ ಅಭ್ಯಾಸಗಳನ್ನು ತಡೆಗಟ್ಟುವ ಗುರಿಯನ್ನು ಹೊಂದಿದೆ ಎಂದರು. ಈ ವೇಳೆ ಎಂ11 ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್‌ನ ಮುಖ್ಯ ವ್ಯಾಪಾರ ಅಭಿವೃದ್ಧಿ ಅಧಿಕಾರಿ ಬಿ. ಚಂದ್ರಶೇಖರ್, ಅನ್ವರ್ ಹುಸೇನ್, ಆಟೋಮೊಬೈಲ್ ಬಿಡಿಭಾಗಗಳ ತಯಾರಕರ ಸಿಎಫ್‌ಒ ರಂಗನಾಥನ್ ಮತ್ತಿತರರು ಹಾಜರಿದ್ದರು.



2023–24ನೇ ಸಾಲಿನ ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿಯು ಜ. 17 ರಿಂದ 22ನೇ ಜನವರಿ 2024 ರವರೆಗೆ ತಮಿಳುನಾಡಿನ ಅಳಗಪ್ಪ ವಿಶ್ವವಿದ್ಯಾನಿಲಯದಲ್ಲಿ ನಡೆಯಲಿದೆ. ಈ ಕ್ರೀಡಾಕೂಟಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಮಹಿಳಾ ಕ್ರಿಕೆಟ್ ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ಚಿತ್ರದಲ್ಲಿ (ನಿಂತಿರುವವರು–ಎಡದಿಂದ ಬಲ): ನಿಸರ್ಗ ಡಿ, ಅಕ್ಷತಾ ನಾಯಕ, ಸಾಧನ ಎಂ, ಸಲೋನಿ.ಪಿ, ಅನೂಷ.ಎಂ.ಎನ್, ಶ್ರೀನಂದಿತಾ.ಎಸ್, ನಿಹಾರಿಕಾ.ಪಿ, ಪ್ರಿಯಾಂಕಾ.ಎಸ್, ಪ್ರತಿಮಾ.ಎಂ.ಸುರೇಶ್, ಅಕ್ಷತಾ.ಎಸ್, ತಾಶಿ ಪಾಲ್ಜೆಸ್ (ಕುಳಿತಿರುವವರು): ಕ್ಷಮಾ ಸುರೇಶ್ (ನಾಯಕಿ), ಡಾ.ಹೆಚ್.ಎಸ್. ಕೃಷ್ಣಕುಮಾರ್ (ವ್ಯವಸ್ಥಾಪಕರು), ಡಾ.ಸಿ.ವೆಂಕಟೇಶ್ ನಿರ್ದೇಶಕರು, ಡಾ.ಭಾಸ್ಕರ್ ಹೆಚ್.ಎನ್ (ತರಬೇತುದಾರರು), ರಜತ್.ಎಸ್(ಕೆಎಸ್‌ಸಿಎ ತರಬೇತುದಾರರು) ಸುಪ್ರೀತಾ (ಉಪನಾಯಕಿ).



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀರಾಮಮಂದಿರದಲ್ಲಿ ದಿ.ವೆಂಕಟರಾಂ ಕಶ್ಯಪ್‌ರವರ 21ನೇ ವರ್ಷದ ಕಿರುಹೊತ್ತಿಗೆಯನ್ನು ಇತ್ತೀಚೆಗೆ ಬಿಡುಗಡೆ ಮಾಡಲಾಯಿತು. ವೇದಿಕೆಯಲ್ಲಿ ವಾಗ್ದೇವಿ ಸೊಸೈಟಿಯ ಶ್ರೀಹರಿ, 'ಮನ್ವಂತರ' ಸಮೂಹ ಬಳಗದ ಅಧ್ಯಕ್ಷ ಎ.ಎನ್.ರಮೇಶ್, ಸಂಪಾದಕರಾದ ಲಲಿತ ವೆಂಕಟರಾಂ ಕಶ್ಯಪ್, ಸಂಯೋಜಕರಾದ ಮಹಾವೀರ್ ಪ್ರಸಾದ್ ಉಪಸ್ಥಿತರಿದ್ದರು.



ಮೈಸೂರು ನಗರ ಜಿಲ್ಲಾ ಬಿಜೆಪಿ ಅಧ್ಯಕ್ಷರಾಗಿ ಆಯ್ಕೆಯಾದ ಮಾಜಿ ಶಾಸಕ ಎಲ್.ನಾಗೇಂದ್ರ ಅವರನ್ನು ಮೈಸೂರು ನಗರ ಬಿಜೆಪಿ ವ್ಯಾಪಾರ ಮತ್ತು ವಾಣಿಜ್ಯ ಪ್ರಕೋಷ್ಠದ ಸಹ ಸಂಚಾಲಕ ಆರ್.ಸೋಮಶೇಖರ್, ಚಾಮರಾಜ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ರಮೇಶ್ ಮತ್ತಿತರರು ಅಭಿನಂದಿಸಿದರು.



ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಕರುನಾಡ ಸೇವಾ ಸೇನೆಯ 2024ರ ದಿನದರ್ಶಿಕೆಯನ್ನು ಬಿಡುಗಡೆಗೊಳಿಸಲಾಯಿತು. ಸೇನೆಯ ರಾಜ್ಯಾಧ್ಯಕ್ಷ ಟಿ. ಗಣೇಶ್, ಕೆಪಿಸಿಸಿ ಸದಸ್ಯ ಅಹಿಂದ ನಜರ್‌ಬಾದ್ ನಟರಾಜು, ಸಂಘದ ಪದಾಧಿಕಾರಿಗಳಾದ ಎನ್.ನಂದೀಶ್, ಕೆ.ಮುರುಳಿ, ಕುಮಾರಸ್ವಾಮಿ.ವಿ, ಚಂದ್ರಶೇಖರ್, ಮರಟಿಕ್ಯಾತನಹಳ್ಳಿ ಮಂಜು, ವಿನಯ್ ರಮೇಶ್, ಚೇತನ್, ಮಂಜೇಶ್(ಅಗ್ರಹಾರ), ದಿವಾಕರ್ ಆರಾಧ್ಯ ಇತರರು ಹಾಜರಿದ್ದರು.



ಮೈಸೂರು ವಿಶ್ವವಿದ್ಯಾನಿಲಯದ ನೂತನ ಸಿಂಡಿಕೇಟ್ ಸದಸ್ಯರಾಗಿ ನೇಮಕವಾದ ಕ್ಯಾತನಹಳ್ಳಿ ನಾಗರಾಜು ಅವರನ್ನು ಮೈಸೂರು ತಾಲೂಕು ನಾಯಕರ ಸಂಘದ ವತಿಯಿಂದ ಅಭಿನಂದಿಸಲಾಯಿತು. ಸಂಘದ ಅಧ್ಯಕ್ಷ ಉದ್ಬೂರು ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಕಡಕೊಳ ಕುಮಾರಸ್ವಾಮಿ, ಖಜಾಂಚಿ ಕುಮಾರಬೀಡು ಮರಿಸ್ವಾಮಿ, ಹಿರಿಯ ಮುಖಂಡ ರೈಲ್ವೆ ಸಿದ್ದಯ್ಯ, ಸಹ ಕಾರ್ಯದರ್ಶಿ ಸಿದ್ದರಾಜು, ಜಯಪುರ ರಂಗಸ್ವಾಮಿ, ಸಂಘಟನಾ ಕಾರ್ಯದರ್ಶಿ ಇಲವಾಲ ಕೃಷ್ಣ, ನಿರ್ದೇಶಕರಾದ ರಮ್ಮನಹಳ್ಳಿ ಶಿವನಂಜಯ್ಯ, ಸಹಾಯಕ ಪ್ರಾಧ್ಯಾಪಕ ಹರದನಹಳ್ಳಿ ನಂಜುಂಡಸ್ವಾಮಿ ಮತ್ತಿತರರು ಈ ವೇಳೆ ಉಪಸ್ಥಿತರಿದ್ದರು.



ಮೈಸೂರಿನ ಗ್ರಾಜ್ಯುಯೇಟ್ಸ್ ಕೋ ಆಪರೇಟಿವ್ ಬ್ಯಾಂಕಿನ ನಿರ್ದೇಶಕರಾಗಿ ST ವಿಭಾಗದಿಂದ ಅವಿರೋಧವಾಗಿ ಆಯ್ಕೆಯಾದ ವರಲಕ್ಷ್ಮಿ ಅಜಯ್ ಅವರನ್ನು ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ದೇವಪ್ಪನಾಯಕ, ಗ್ರಾಜ್ಯುಯೇಟ್ ಬ್ಯಾಂಕ್‌ನ ಮಾಜಿ ಅಧ್ಯಕ್ಷ ಟಿ.ಎಸ್.ರವಿಶಂಕರ್, ದಿ ಸಿಟಿ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿ ನಿರ್ದೇಶಕರಾದ ಶಿವಕುಮಾರ್, ನಾಗರಾಜ್, ವಕೀಲರಾದ ಎ.ಕೆ.ವಾಮನ್, ಶಿವರಾಜ್, ರಾಜಗೋಪಾಲ್, ಕೇಬಲ್ ವೆಂಕಟಗಿರಿಗೌಡ (ಕಿಟ್ಟಿ) ಮತ್ತಿತರರು ಅಭಿನಂದಿಸಿದರು.

ಮೈಸೂರಿನಲ್ಲಿ ಫುಟ್‌ಪಾತ್‌ಗಳನ್ನು ನಗರಪಾಲಿಕೆ ಪ್ರಭಾವಿಗಳಿಗೆ ಗುತ್ತಿಗೆ ಇಲ್ಲವೇ ಬಾಡಿಗೆಗೆ ನೀಡಿದೆಯೇ...?

- ಒಂದು ವೇಳೆ ಹಾಗೆ ಲೀಸ್ ಇಲ್ಲ, ಬಾಡಿಗೆ ನೀಡಿದ್ದರೆ ಬಹಿರಂಗಪಡಿಸಿ
- ಅಧಿಕಾರಿ ವರ್ಗದಿಂದ ಪಾಪದ ಪಾದಚಾರಿಗಳ ಹಕ್ಕು ಎಲ್ಲೆಡೆ ವ್ಯಾಪಕ ಉಲ್ಲಂಘನೆ
- ಮಾನವ ಹಕ್ಕು ಹೋರಾಟಗಾರರಿಗೆ ಇಂತಹದ್ದೆಲ್ಲಾ ಕಣ್ಣಿಗೆ ಬೀಳುವುದಿಲ್ಲವೇ
- ಫುಟ್‌ಪಾತ್‌ಗಳಲ್ಲಿ ನಡೆಯುತ್ತಿದೆ ಲಕ್ಷ ಲಕ್ಷ ವ್ಯವಹಾರ; ಇದರಲ್ಲಿ ಪಾಲಿಕೆಯ ಪಾಲೆಷ್ಟು?
- ರಾಜಾರೋಷವಾಗಿ ಫುಟ್‌ಪಾತ್ ಅತಿಕ್ರಮಣವಾದರೂ ಮೌನವಹಿಸಿರುವ ಪಾಲಿಕೆ ಅಧಿಕಾರಿ ವರ್ಗ, ಸಂಚಾರಿ ಪೊಲೀಸರು; ಜಿಲ್ಲಾಧಿಕಾರಿಗಳಾದರೂ ಮಧ್ಯೆ ಪ್ರವೇಶಿಸಲಿ
- ಮುಖ್ಯಮಂತ್ರಿ ಸಿದ್ದರಾಮಯ್ಯರ ತವರಲ್ಲೇ ಪರಿಸ್ಥಿತಿ ಹೀಗಿದ್ದರೆ ಉಳಿದೆಡೆ ಪಾದಚಾರಿಗಳ ಪಾಡೇನು?

● ಬಾಪುಲಿಂಗರಾಜ್ ಅರಸ್

ಮೈಸೂರು, ಜ.17– ಮೈಸೂರಿನ ರಸ್ತೆ ಹಾಗೂ ಫುಟ್‌ಪಾತ್‌ಗಳನ್ನು ನಗರಪಾಲಿಕೆ ವ್ಯಾಪಾರ–ವಹಿವಾಟಿಗೆ ಗುತ್ತಿಗೆ ಅಥವಾ ಬಾಡಿಗೆಗೆ ನೀಡಿದೆಯೇ ಎಂಬ ಅನುಮಾನ ಕಾಡುತ್ತಿದೆ. ರಸ್ತೆ ಹಾಗೂ ಫುಟ್‌ಪಾತ್‌ಗಳನ್ನು ಅತಿಕ್ರಮಿಸಿಕೊಂಡು ನಿತ್ಯ ಲಕ್ಷ ಲಕ್ಷ ವ್ಯವಹಾರ ನಡೆಯುತ್ತಿದೆ. ಪಾದಚಾರಿಗಳ ಹಕ್ಕುಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಜನ ಸಾಮಾನ್ಯರು ರಸ್ತೆಯಲ್ಲಿ ವಾಹನ ನಿಲ್ಲಿಸಿದರೆ ದಂಡ ವಿಧಿಸುವ ಸಂಚಾರಿ ಪೊಲೀಸರು ರಸ್ತೆ ಹಾಗೂ ಫುಟ್‌ಪಾತ್‌ಗಳಲ್ಲಿ ನೂರಾರು ವಾಹನಗಳ ನಿಲ್ಲಿಸಿಕೊಂಡು ವ್ಯವಹಾರ ಮಾಡುತ್ತಿದ್ದರೂ ಕಣ್ಮುಚ್ಚಿ ಕುಳಿತಿರುವುದು ಅಚ್ಚರಿ ಮೂಡಿಸಿದೆ.

ಸೆಕೆಂಡ್ ಹ್ಯಾಂಡ್ (ಬಳಸಿದ) ಕಾರುಗಳನ್ನು ಮಾರಾಟ ಮಾಡುವ ಆಟೋ ಕನ್ಸಲ್ಟೆಂಟ್‌ಗಳು ಮೈಸೂರಿನ ಎಲ್ಲೆಡೆ ರಸ್ತೆ ಹಾಗೂ ಫುಟ್‌ಪಾತ್‌ಗಳನ್ನು ರಾಜಾರೋಷವಾಗಿ ಅತಿಕ್ರಮಿಸಿಕೊಂಡಿದ್ದಾರೆ. ಕಾರುಗಳ ಮಾರಾಟಕ್ಕೆ ಇವರಿಗೆ ಸಾರ್ವಜನಿಕ ರಸ್ತೆ ಹಾಗೂ ಫುಟ್‌ಪಾತ್ ವ್ಯಾಪಾರದ 'ರಹದಾರಿ' ಕೇಂದ್ರಗಳಾಗಿವೆ.

ನಾಮಕಾವಸ್ಥೆಗೆ ಬೋರ್ಡ್ ಹಾಕಿಕೊಂಡು ಮಳಿಗೆಯಲ್ಲಿ ಕುಳಿತು ಒಳಗೆ ಏಳೆಂಟು ಸೆಕೆಂಡ್ ಹ್ಯಾಂಡ್ ಕಾರುಗಳನ್ನು ನಿಲ್ಲಿಸಿಕೊಂಡಿರುತ್ತಾರೆ. ಆದರೆ ರಸ್ತೆ ಬದಿ ಹಾಗೂ ಫುಟ್‌ಪಾತ್‌ನಲ್ಲಿ ನೂರಾರು ಕಾರುಗಳನ್ನು ನಿಲ್ಲಿಸಿ, ರಾಜಾರೋಷವಾಗಿ ವ್ಯವಹಾರ ಮಾಡುತ್ತಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ರಸ್ತೆಗಳಲ್ಲಿ ಪಾದಚಾರಿಗಳು ಸಾಗಲು, ಕಾರು, ಆಟೋಗಳಿರಲಿ, ದ್ವಿಚಕ್ರ ವಾಹನಗಳು ಹೋಗಲು ಜಾಗವಿಲ್ಲದಂತಾಗಿದೆ. ಪಾದಚಾರಿಗಳು ಅನಿವಾರ್ಯವಾಗಿ ರಸ್ತೆಗಿಳಿದು ಸಂಕಷ್ಟಕ್ಕೀಡಾಗುತ್ತಿದ್ದಾರೆ.



ನೋಟಿಸ್ ಜಾರಿ ಮಾಡಿ, ಕ್ರಮ ನಿಶ್ಚಿತ



ಅಕ್ರಮವಾಗಿ ರಸ್ತೆ ಬದಿ, ಫುಟ್‌ಪಾತ್‌ಗಳಲ್ಲಿ ಕಾರುಗಳನ್ನು ನಿಲ್ಲಿಸಿರುವ ಆಟೋ ಕನ್ಸಲ್ಟೆಂಟ್‌ಗಳಿಗೆ ಕೂಡಲೇ ನೋಟಿಸ್ ನೀಡಿ ಕ್ರಮ ಕೈಗೊಳ್ಳಲಾಗುವುದು. ಹೀಗೆ ರಸ್ತೆ ಹಾಗೂ ಫುಟ್‌ಪಾತ್ ಒತ್ತುವರಿ ಮಾಡಿಕೊಳ್ಳುವುದು ಸಂಚಾರ ನಿಯಮ ಉಲ್ಲಂಘನೆಯಾಗುತ್ತದೆ. ಆಟೋ ಕನ್ಸಲ್ಟೆಂಟ್‌ಗಳು ತಮ್ಮ ಜಾಗದಲ್ಲಿ ಕಾರು ನಿಲ್ಲಿಸಿಕೊಳ್ಳಲಿ. ಆದರೆ ರಸ್ತೆ ಬದಿ ಹಾಗೂ ಫುಟ್‌ಪಾತ್ ಜಾಗವನ್ನು ಅಕ್ರಮವಾಗಿ ಬಳಕೆ ಮಾಡಿಕೊಂಡು ಕಾರು ನಿಲ್ಲಿಸಿಕೊಳ್ಳುವುದು ತಪ್ಪು. ಈ ಸಂಬಂಧ ನಿಯಮ ಉಲ್ಲಂಘನೆ ಮಾಡಿರುವ ಆಟೋ ಕನ್ಸಲ್ಟೆಂಟ್‌ನವರಿಗೆ ನೋಟಿಸ್ ಜಾರಿ ಮಾಡಿ, ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು. –ಎಸ್.ಜಾಹ್ನವಿ, ಡಿಸಿಪಿ (ಅಪರಾಧ ಮತ್ತು ಸಂಚಾರ)


ಕನಿಷ್ಠ 2 ಲಕ್ಷದಿಂದ 30 ಲಕ್ಷದ ತನಕ ಸೆಕೆಂಡ್ ಹ್ಯಾಂಡ್ ಕಾರುಗಳನ್ನು ಮಾರಾಟ ಮಾಡಿ ದಿನಕ್ಕೆ ಲಕ್ಷಾಂತರ ರೂಪಾಯಿ ವಹಿವಾಟು ನಡೆಸುತ್ತಾರೆ. ರಸ್ತೆ ಹಾಗೂ ಫುಟ್‌ಪಾತ್ ಬಳಕೆಗೆ ಬಾಡಿಗೆ ಇಲ್ಲ.

ಆಟೋ ಕನ್ಸಲ್ಟೆಂಟ್‌ಗಳು ಮಾತ್ರವಲ್ಲ ಇನ್ನಿತರೆ ವಾಣಿಜ್ಯ ವಹಿವಾಟು ನಡೆಸುವವರೂ ರಸ್ತೆ ಹಾಗೂ ಫುಟ್‌ಪಾತ್ ಆವರಿಸಿಕೊಂಡಿರುವ ಕಾರಣ ಓಡಾಡಲು ಹಾಗೂ ವಾಹನದಲ್ಲಿ ಸಾಗಲು ತುಂಬಾ ತೊಂದರೆಯಾಗಿದೆ ಎಂದು ಜನಸಾಮಾನ್ಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇದನ್ನೆಲ್ಲಾ ನೋಡಿದರೆ ಮೈಸೂರು ನಗರಪಾಲಿಕೆಯವರು ನಗರದೆಲ್ಲೆಡೆ ರಸ್ತೆ ಹಾಗೂ ಫುಟ್‌ಪಾತ್‌ಗಳನ್ನು ಗುತ್ತಿಗೆ ಅಥವಾ ಬಾಡಿಗೆಗೆ ನೀಡಿದ್ದಾರೆಯೇ ಎಂಬ ಪ್ರಶ್ನೆ ಕಾಡುತ್ತಿದೆ. ಒಂದು ವೇಳೆ ರಸ್ತೆ ಬದಿ ಹಾಗೂ ಫುಟ್‌ಪಾತ್‌ನಲ್ಲಿ ಕಾರು ನಿಲ್ಲಿಸಿ ಮಾರಾಟ ಮಾಡಲು ಆಟೋ ಕನ್ಸಲ್ಟೆಂಟ್‌ಗಳಿಗೆ ನಗರ ಪಾಲಿಕೆ ಗುತ್ತಿಗೆ ಅಥವಾ ಬಾಡಿಗೆಗೆ ನೀಡಿದ್ದರೆ ಬಹಿರಂಗಪಡಿಸಲಿ ಎಂಬುದು ಸಾರ್ವಜನಿಕರ ಆಗ್ರಹ.

ಮಾನವ ಹಕ್ಕುಗಳ ಹೋರಾಟಗಾರರಿಗೆ ಇದು ಕಣ್ಣಿಗೆ ಬೀಳುತ್ತಿಲ್ಲವೇ, ವಿಚಾರ ಗೊತ್ತಿದ್ದರೂ ಜಾಣ ಕುರುಡಿಗೆ ಶರಣಾಗಿದ್ದಾರೆಯೇ ಎಂಬ ಸರಣಿ ಪ್ರಶ್ನೆಗಳು ಎದುರಾಗಿದೆ. ಇನ್ನು ನೋ ಪಾರ್ಕಿಂಗ್ ಅಥವಾ ರಸ್ತೆ ಬದಿ ವಾಹನ ನಿಲ್ಲಿಸಿ ಸಂಚಾರ ನಿಯಮ ಉಲ್ಲಂಘನೆ ಮಾಡಿದರೆ ದಂಡ ವಿಧಿಸುವ ಮೈಸೂರಿನ ಸಂಚಾರಿ ಪೊಲೀಸರಿಗೆ ಇದು ಕಾಣಿಸುತ್ತಿಲ್ಲವೇ ಅಥವಾ ಕಂಡರೂ ಪ್ರಭಾವಕ್ಕೆ ಮಣಿದಿದ್ದಾರೆಯೇ?

ಈಗಲಾದರೂ ನಗರ ಪಾಲಿಕೆ ಹಾಗೂ ಸಂಚಾರಿ ಪೊಲೀಸರು ರಸ್ತೆ ಬದಿ ಅಕ್ರಮವಾಗಿ ನಿಲ್ಲಿಸಿರುವ ಕಾರುಗಳನ್ನು ತೆರವು ಮಾಡಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡುವರೇ ಎಂದು ಕಾದು ನೋಡಬೇಕಿದೆ.



ತೆಲುಗು ಸಾಂಸ್ಕೃತಿಕ ಸಮಿತಿಯಿಂದ ಅನ್ನಮಯ ಗಾನಮಾಧುರಿ

ಮೈಸೂರು, ಜ. 17– ಮೈಸೂರಿನ ತೆಲುಗು ಸಾಂಸ್ಕೃತಿಕ ಸಮಿತಿ ವತಿಯಿಂದ ಜಯಲಕ್ಷ್ಮಿಪುರಂನಲ್ಲಿರುವ ಮಹಾಜನ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ಜ. 21 ರಂದು ಸಂಜೆ 5 ಗಂಟೆಗೆ ಸಂಕ್ರಾಂತಿ ಹಬ್ಬ ಆಚರಿಸಲಿದೆ.

ಇದರ ಅಂಗವಾಗಿ ಸದಸ್ಯರಿಗೆ ರಂಗೋಲಿ ಸ್ಪರ್ಧೆ, ಮಕ್ಕಳಿಗೆ ಚಿತ್ರಕಲೆ, ಕವಿತೆಗಳು ಮತ್ತು ಜಾನಪದ ಹಾಡುಗಳು ಮತ್ತು ನೃತ್ಯ ಕಾರ್ಯಕ್ರಮಗಳಿವೆ. ಪ್ರಸಿದ್ಧ ಗಾಯಕ, ಸಂಗೀತಗಾರ ತಿರುಮಲ ತಿರುಪತಿ ದೇವಸ್ಥಾನದಿಂದ ತಿರುಮಲ ಗಾನಗಂಧರ್ವ ಅನ್ನಮಯ ಸುಧಾರಕ ಪ್ರಶಸ್ತಿ ಪಡೆದಿರುವ ಗರುಜಾಡ ಮಧುಸೂಧನರಾವ್ ಅವರಿಂದ ಅನ್ನಮಯ್ಯ ಗಾನಮಾಧುರಿ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8277055197 ಸಂಪರ್ಕಿಸಬಹುದು.

ಜ. 22ರಂದು ಲಾಡು ವಿತರಣೆ

ಮೈಸೂರು, ಜ.17– ಜ.22ರ ಸೋಮವಾರ ಅಯೋಧ್ಯೆಯಲ್ಲಿ 'ಶ್ರೀರಾಮ ಪ್ರಾಣ ಪ್ರತಿಷ್ಠಾಪನೆ' ನಡೆಯುತ್ತಿರುವುದರ ಪ್ರಯುಕ್ತ ಮೈಸೂರಿನ ವಿಜಯನಗರ, 3ನೇ ಹಂತದಲ್ಲಿರುವ ಗೆಳೆಯರ ಬಳಗ ಅಭಿವೃದ್ಧಿ ಸಹಕಾರ ಸಂಘದ ವತಿಯಿಂದ ಜ. 22 ರಂದು ಸಂಜೆ 6 ಗಂಟೆಯಿಂದ ವಿಜಯನಗರ 3ನೇ ಹಂತದಲ್ಲಿರುವ ಶ್ರೀ ಸಪ್ತಮಾತೃಕ ಚೌಡೇಶ್ವರಿ ಅಮ್ಮನವರ ದೇವಸ್ಥಾನದ ಸನ್ನಿಧಿಯಲ್ಲಿ ಭಕ್ತಾದಿಗಳಿಗೆ 'ಲಾಡು ಪ್ರಸಾದ'ವನ್ನು ವಿತರಿಸಲಾಗುವುದು. ಆದ್ದರಿಂದ ಬಡಾವಣೆಯ ನಿವಾಸಿಗಳು ಹಾಗೂ ಸಂಘದ ಸದಸ್ಯರು ಸಕ್ರಿಯವಾಗಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾಗಬೇಕೆಂದು ಕೋರಲಾಗಿದೆ.

ಕಣ್ಣಳತೆಗೆ ಸಿಕ್ಕ ದೃಶ್ಯಗಳಿಗೆ ಕಾವ್ಯಾತ್ಮಕ ಗದ್ಯರೂಪ:ಪ್ರೊ.ಸಿ.ನಾಗಣ್ಣ ಬಣ್ಣನೆ

ಪುಟಾಣಿ ಶ್ರೀಯಾ ರಚನೆಯ ಪ್ರಬಂಧ, ಪದ್ಯಗಳ ಸಂಕಲನ ಬಿಡುಗಡೆ

ಮೈಸೂರು, ಜ. 17– ಕಣ್ಣಳತೆಗೆ ಸಿಕ್ಕ ದೃಶ್ಯಗಳನ್ನು ಕಾವ್ಯಾತ್ಮಕ ಗದ್ಯದಲ್ಲಿ ಪಡಿಮೂಡಿಸುವ ಕೌಶಲ್ಯ ಶ್ರೀಯಾಗೆ ಸುಲಲಿತವಾಗಿ ಒಲಿದು ಬಂದಿದೆ ಎಂದು ಹಿರಿಯ ವಿದ್ವಾಂಸ ಪ್ರೊ.ಸಿ. ನಾಗಣ್ಣ ಬಣ್ಣಿಸಿದರು.

ಮೈಸೂರು ಮೂಲದ, ಪ್ರಸ್ತುತ ಆಸ್ಟ್ರೇಲಿಯಾದ ಮೆಲ್ಬೋರ್ನ್‌ನಲ್ಲಿ ನೆಲೆಸಿರುವ ಪುಟಾಣಿ ಶ್ರೀಯಾ ಅವರ ಇನ್‌ಸ್ಪೈರಿಂಗ್ ಎಸ್ಸೇಸ್ ಅಂಡ್ ಪೊಯಮ್ಸ್ ಆಫ್ ಎ ಪ್ರೀ– ಟೀನ್ ಗರ್ಲ್ ಕೃತಿಯನ್ನು ಸೋಮವಾರ ಬಿಡುಗಡೆ ಮಾಡಿ ಮಾತನಾಡಿದ ಅವರು, ಶ್ರೀಯಾಗೆ ಈಗ 13 ವರ್ಷ. ಆಕೆ 10 ವರ್ಷ ಇದ್ದಾಗಲೇ ಈ ರೀತಿಯ ಕವಿತೆ ಹಾಗೂ ಪ್ರಬಂಧಗಳನ್ನು ರಚಿಸಿರುವುದು ಆಶ್ಚರ್ಯ ಮೂಡಿಸುತ್ತದೆ. ಪದಕ್ಕೆ ಪದ ಹದವಾಗಿ ಕೂಡಿ ಬರುವುದರಿಂದ ಆಕೆಯ ವರ್ಣನೆ ಓದುಗರ ಮನಸ್ಸಿಗೆ ಮುದ ನೀಡುತ್ತದೆ. ಭಾವ ಬಂಧುರತೆಗೆ ಕಿಂಚಿತ್ತು ಕೊರತೆಯಿಲ್ಲದ ಕಾರಣ ಇಲ್ಲಿಯ ಗದ್ಯ ಹೃದ್ಯವಾಗಿದೆ ಎಂದರು.

ವಾಸ್ತವ ಘಟನೆಗಳಿಗೆ ಕಲ್ಪನೆಯ ಬಣ್ಣ ತೊಡಿಸುವುದೆಂದರೆ ಶ್ರೀಯಾಳಿಗೆ ಎಲ್ಲಿಲ್ಲದ ಸಂಭ್ರಮ. ಹಾಗೆಯೇ ಸಾಮಾನ್ಯ ಅನುಭವಗಳನ್ನು ಸಾಮಾನ್ಯ ಸ್ವರದಲ್ಲೇ ನಡೆಸದೆ ಉಸಿರು ಕಟ್ಟಿಸುವ ವಾತಾವರಣಕ್ಕೆ ಅಲ್ಲಿಯ ಜೀವಿಗಳನ್ನು ದೂಡಿ ಪ್ರಕೃತಿ ವಿಕೋಪ, ಬೆಂಕಿಯ ಅವಘಡ, ವಾಹನ ಅಪಘಾತ ಮುಂತಾದ ಸನ್ನಿವೇಶಗಳಲ್ಲಿ ಜೀವಿಗಳು ಬಗೆಬಗೆಯಾಗಿ ಪ್ರತಿಕ್ರಿಯಿಸುವ ಪ್ರಕ್ರಿಯೆಯನ್ನು ಶ್ರೀಯಾ ತನ್ನದೇ ಆದ ವಿಶೇಷ ಗದ್ಯದಿಂದ ಬಿಡಿಸುವ ಕ್ರಮ ಚೋದ್ಯವನ್ನುಂಟು ಮಾಡುತ್ತದೆ ಎಂದರು.

ಈ ಸಂಕಲನದಲ್ಲಿರುವ ದ ಎಸ್ಕೇಪ್, ಕಮಿಂಗ್ ಅಲೈವ್, ಕಾರ್ ಕ್ರ್ಯಾಶ್, ಇನ್ ದ ಮಿಡ್ಲ್ ಆಫ್‌ದ ನೈಟ್, ಎ ಶಾಕ್, ಇನ್ –ಟು ದ ಅಬಿಸ್, ಅಬ್ಯಾಂಡನ್ಡ್ ಪಾರ್ಕ್ –ಪ್ರಬಂಧ, ಕಥೆಗಳು ಇದಕ್ಕೆ ಸಾಕ್ಷಿಯಾಗಿವೆ ಎಂದು ಅವರು ಹೇಳಿದರು.

ಮೆಲ್ಬೋರ್ನ್‌ನಿಂದ ಅಡಿಲೇಯ್ಡ್‌ಗೆ ಹೊರಟು ಏಳು ದಿನಗಳ ರೋಡ್ ಟ್ರಿಪ್‌ನ ನಂತರ ತಾಯಿ ಮತ್ತು ಅಜ್ಜಿಯೊಡನೆ ಶ್ರೀಯಾ ಮಾಡಿದ ಪ್ರವಾಸದ ಅನುಭವವನ್ನು ಓದುವುದೇ ಸೊಗಸು. ಇಷ್ಟು ಚಿಕ್ಕವಯಸ್ಸಿಗೆ ಆ ವರ್ಣನಾ ಕೌಶಲ್ಯ ಹೇಗೆ ಸಾಧ್ಯವೆಂದು ಬೆರಗಾಗುತ್ತದೆ ಎಂದರು.

ಈ ಸಂಕಲನದಲ್ಲಿ ಹದಿನಾಲ್ಕು ಗದ್ಯ ಬರಹಗಳು, ಏಳು ಕವನಗಳಿವೆ. ಶ್ರೀಯಾಳ ಲೇಖನಿ ಗದ್ಯಕ್ಕೂ ಸೈ, ಕಾವ್ಯಕ್ಕೂ ಸೈ. ಸೃಜನಾತ್ಮಕ ಬರವಣಿಗೆಯ ಕೋರ್ಸ್‌ನಲ್ಲಿ ಪದವಿ ಮಾಡಿದರೆ ಈಕೆ ಉತ್ತಮ ಬರಹಗಾರ್ತಿಯಾಗಬಲ್ಲಳು ಎಂದರು.

ಟೆಂಪಲ್– ದೇವಸ್ಥಾನ, ಇಮ್ಯಾಜಿನೇಷನ್– ಕಲ್ಪನೆ, ಮೈ ಮಾಮ್– ನನ್ನ ತಾಯಿ ಕವಿತೆಗಳನ್ನು ಪ್ರೊ.ನಾಗಣ್ಣ ಕನ್ನಡಕ್ಕೆ ಅನುವಾದಿಸಿದ್ದು, ಕಾರ್ಯಕ್ರಮದಲ್ಲಿ ಓದಿದರು. ಶ್ರೀಯಾ ಇಂಗ್ಲಿಷ್ ಕವಿತೆಗಳನ್ನು ಓದಿದರು.

ಖ್ಯಾತ ಮಧುಮೇಹ ತಜ್ಞ ಡಾ.ವಿ. ಲಕ್ಷ್ಮೀನಾರಾಯಣ, ಮೈಸೂರು ವಿವಿ ಪ್ರಸಾರಾಂಗ ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕೃತಿಯ ಪ್ರಕಾಶಕ ಚಿಂತನ ಚಿತ್ತಾರದ ನಿಂಗರಾಜು ಚಿತ್ತಣ್ಣನವರ್, ಕಾವ್ಯಾ ಬಿ. ಶ್ರೀಧರ್, ದ್ವಾರಕಿ ಶ್ರೀಧರ್ ಮೊದಲಾದವರು ಇದ್ದರು. ಸಾಹಿತಿ ಬಾ.ವೇ. ಶ್ರೀಧರ ಸ್ವಾಗತಿಸಿದರು. ದಿವ್ಯಾ ಬಿ. ಶ್ರೀಧರ್ ಪ್ರಾರ್ಥಿಸಿದರು.



ಪುಟಾಣಿ ಶ್ರೀಯಾ ಅವರ ಇನ್‌ಸ್ಪೈರಿಂಗ್ ಎಸ್ಸೇಸ್ ಅಂಡ್ ಪೊಯಮ್ಸ್ ಆಫ್ ಎ ಪ್ರೀ– ಟೀನ್ ಗರ್ಲ್ ಕೃತಿಯನ್ನು ಹಿರಿಯ ವಿದ್ವಾಂಸ ಪ್ರೊ.ಸಿ. ನಾಗಣ್ಣ ಬಿಡುಗಡೆ ಮಾಡಿದರು.

ಡಾ.ವಿಜಯಾ ದಬ್ಬೆ ಸ್ಮರಣಾರ್ಥ ರಾಜ್ಯ ಮಟ್ಟದ ಕವನ, ಲಲಿತ ಪ್ರಬಂಧ ಸ್ಪರ್ಧೆ

ಮೈಸೂರು, ಜ. 17– ಮೈಸೂರಿನ ಸಮತಾ ಅಧ್ಯಯನ ಕೇಂದ್ರದ ವತಿಯಿಂದ ಸ್ಥಾಪಕ ಅಧ್ಯಕ್ಷರಾದ ಡಾ. ವಿಜಯಾ ದಬ್ಬೆ ಅವರ ಸ್ಮರಣಾರ್ಥ 20 ರಿಂದ 35 ವಯೋಮಾನದ ವಿದ್ಯಾರ್ಥಿ, ಯುವಜನರಿಗೆ ರಾಜ್ಯ ಮಟ್ಟದ ಕವನ, ಲಲಿತ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದೆ. ಆಸಕ್ತರು ಕವನ ಸ್ಪರ್ಧೆಗೆ ಎರಡು ಲೇಖನ, ಲಲಿತ ಪ್ರಬಂಧ ಸ್ಪರ್ಧೆಗೆ ಒಂದು ಪ್ರಬಂಧವನ್ನು ಶ್ರೀಮತಿ ವಿಜಯಾ ರಾವ್, ಮನೆ ನಂ. 861, 14ನೇ ಮೇನ್, ವಿಜಯನಗರ ಮೊದಲನೇ ಹಂತ, ಮೈಸೂರು ಇಲ್ಲಿಗೆ ಕಳುಹಿಸಲು ಕೋರಲಾಗಿದೆ. ವಿಜೇತರಿಗೆ ಪ್ರಥಮ ಬಹುಮಾನ ರೂ. 5000, ದ್ವಿತೀಯ ಬಹುಮಾನ ರೂ. 3000 ಮತ್ತು ತೃತೀಯ ಬಹುಮಾನ ರೂ. 2000 ನೀಡಲಾಗುವುದು.

ಇಂದು ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಜ. 17–ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಜ. 18 ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಮೂವರು ಸಾಧಕರಿಗೆ ಭೂಮಿಗಿರಿ ನಾರಾಯಣಪ್ಪ ಪ್ರಶಸ್ತಿ ಪ್ರದಾನ

- ಸಾಹಿತ್ಯದ ಗತವೈಭವ ಮರುಕಳಿಸಬೇಕು– ಕೆ.ಹರೀಶ್‌ಗೌಡ ಆಶಯ
- ಕ್ಯಾಲೆಂಡರ್ ಬಿಡುಗಡೆ, ಗಾನ–ನಂದನ ಲಾಂಛನ ಅನಾವರಣ

ಮೈಸೂರು, ಜ. 17– ಸಾಹಿತ್ಯದ ಗತವೈಭವ ಮರುಕಳಿಸಬೇಕು ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ. ಹರೀಶ್ ಗೌಡ ಆಶಯ ವ್ಯಕ್ತಪಡಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಭೂಮಿಗಿರಿ ನಾರಾಯಣಪ್ಪ ಪ್ರತಿಷ್ಠಾನದ ವತಿಯಿಂದ ಸೋಮವಾರ ವಿಜಯನಗರ ಕನ್ನಡ ಸಾಹಿತ್ಯ ಭವನದಲ್ಲಿ ನಡೆದ ಕಾರ್ಯಕ್ರಮ ಉದ್ಘಾಟಿಸಿದ ಅವರು, ಹಿಂದೆ ಸಾಹಿತ್ಯದ ಕಾರ್ಯಕ್ರಮಗಳು ಮೇಳೈಸುತ್ತಿದ್ದವು. ಸಿಪಿಕೆ ಅವರಾದಿಯಾಗಿ ಹಲವಾರು ಗಣ್ಯಮಾನ್ಯರು ಮೈಸೂರಿನಲ್ಲಿ ಭಾಗವಹಿಸುತ್ತಿದ್ದರು. ಮುಂದೆ ಕೂಡ ಅದೇ ರೀತಿ ಆಗಬೇಕು. ಇದಕ್ಕಾಗಿಯೇ ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮುಂದಿನ ದಿನಗಳಲ್ಲಿ ಏರ್ಪಡಿಸಲಾಗುತ್ತಿದೆ ಎಂದರು. ಗಾನ–ನಂದನ ಲಾಂಛನ ಅನಾವರಣ ಮಾಡಿದ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಜ್ಞಾನ ಭಂಡಾರವನ್ನು ಹಂಚಬೇಕು. ದುಡ್ಡು ಮತ್ತು ಬ್ಲಡ್ಡು ಒಂದೆಡೆ ಸಂಗ್ರಹವಾಗಬಾರದು. ಹಂಚಿದಷ್ಟು ವೃದ್ಧಿಸುತ್ತದೆ ಎಂದರು.

ಶ್ರೀರಾಮ ಪಿತೃವಾಕ್ಯ ಪರಿಪಾಲಕ ಎಂದು ಹೇಳುವ ನಾವು ತಂದೆ– ತಾಯಿಯನ್ನು ವೃದ್ಧಾಶ್ರಮಕ್ಕೆ ಸೇರಿಸುತ್ತಿದ್ದೇವೆ. ಇದು ತಪ್ಪಬೇಕು. ಭೂಮಿಗಿರಿ ನಾರಾಯಣಪ್ಪ ಅವರಂಥವರನ್ನು ಮುಂದಿನ ಪೀಳಿಗೆಗೆ ಪರಿಚಯಿಸಬೇಕು. ಆ ಮೂಲಕ ಸಮಾಜದ ಪರಿವರ್ತನೆಗೆ ಕಾರಣಕರ್ತರಾಗಬೇಕು ಎಂದು ಅವರು ಕರೆ ನೀಡಿದರು.

ಪ್ರಸ್ತುತ ಶಿಕ್ಷಣಕ್ಕೆ ಅಪಾರ ಬೆಲೆ ಇರುವುದರಿಂದ ಮುಂದಿನ ದಿನಗಳಲ್ಲಿ ಶಿಕ್ಷಣ ಹಾಗೂ ಆರೋಗ್ಯ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಅವರು ಅಭಿಪ್ರಾಯಪಟ್ಟರು. ಇದೇ ಸಂದರ್ಭದಲ್ಲಿ ಸಾಧಕರಾದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ತಾಂಡವಪುರ ಎಂಐಟಿ ಪ್ರಾಂಶುಪಾಲ ಡಾ.ವೈ.ಟಿ. ಕೃಷ್ಣೇಗೌಡ, ಲೇಖಕಿ ಬಿ.ಕೆ. ಮೀನಾಕ್ಷಿ ಅವರಿಗೆ ಲಯನ್ ಮಾಜಿ ಜಿಲ್ಲಾ ರಾಜ್ಯಪಾಲ ನಾಗರಾಜ ವಿ.ಭೈರಿ ಅವರು ಭೂಮಿಗಿರಿ ನಾರಾಯಣಪ್ಪ ಪ್ರಶಸ್ತಿ ಪ್ರದಾನ ಮಾಡಿದರು. ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ ಅವರು ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ ಮುಖ್ಯ ಅತಿಥಿಗಳಾಗಿದ್ದರು.

ಡಾ.ವೈ.ಡಿ. ರಾಜಣ್ಣ, ಎನ್. ಬೆಟ್ಟೇಗೌಡ, ಡಾ.ಬಿ.ಎನ್. ರವೀಶ್, ಡಾ.ಎ.ಎಸ್. ಪೂರ್ಣಿಮಾ, ಶ್ರೀಲತಾ, ಸಿ.ಎಸ್.ವಾಣಿ ಸಂಗೀತ ಸಂಜೆ ನಡೆಸಿಕೊಟ್ಟರು.



ಮೈಸೂರಿನ ಕನ್ನಡ ಸಾಹಿತ್ಯ ಭವನದಲ್ಲಿ ಸಾಧಕರಿಗೆ ಭೂಮಿಗಿರಿ ನಾರಾಯಣಪ್ಪ ಪ್ರಶಸ್ತಿಯನ್ನು ಶಾಸಕ ಕೆ.ಹರೀಶ್‌ಗೌಡ ಪ್ರದಾನ ಮಾಡಿದರು.

ಮೈಸೂರು ಮಿತ್ರ ಗುರುವಾರ 18 ಜನವರಿ 2024

ಆಸ್ಪತ್ರೆಯಲ್ಲಿ ಕಡ್ಡಾಯವಾಗಿ ಆಂಬುಲೆನ್ಸ್ ಇರಬೇಕು

• ಜಿಲ್ಲಾಧಿಕಾರಿ ವೆಂಕಟ್ ರಾಜಾ ಸೂಚನೆ • ಆರೋಗ್ಯ ಅಭಿಯಾನ ಪ್ರಗತಿ ಪರಿಶೀಲನೆ

ಮಡಿಕೇರಿ, ಜ.17– ಜಿಲ್ಲೆಯ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಕಡ್ಡಾಯವಾಗಿ ಆಂಬುಲೆನ್ಸ್ ಸೌಲಭ್ಯ ಇರಬೇಕು. ಜೊತೆಗೆ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಮತ್ತು ಸಿಬ್ಬಂದಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಜಿಲ್ಲಾ ಆರೋಗ್ಯ ಅಭಿಯಾನ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಯಲ್ಲಿ ಆಂಬುಲೆನ್ಸ್ ಸೌಕರ್ಯ ಇಲ್ಲವೆಂದು ಕೇಳಿ ಬರಬಾರದು. ಹೆರಿಗೆಗೆ ದಾಖಲಾಗುವ ತಾಯಿಯ ಆರೋಗ್ಯ ಕಾಪಾಡುವುದು ಅತಿ ಮುಖ್ಯವಾಗಿದೆ. ಆ ನಿಟ್ಟಿನಲ್ಲಿ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿ ಕರ್ತವ್ಯ ಪ್ರಜ್ಞೆಯಿಂದ ಕಾರ್ಯನಿರ್ವಹಿಸಬೇಕು ಎಂದು ನಿರ್ದೇಶಿಸಿದರು.



ಮಡಿಕೇರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಡಿಸಿ ವೆಂಕಟ್ ರಾಜಾ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಆರೋಗ್ಯ ಅಭಿಯಾನ ಪ್ರಗತಿ ಪರಿಶೀಲನಾ ಸಭೆಯಲ್ಲಿ ಆರೋಗ್ಯಾಧಿಕಾರಿಗಳು ಹಾಗೂ ವೈದ್ಯಾಧಿಕಾರಿಗಳು ಭಾಗವಹಿಸಿದ್ದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್ ಮಾತನಾಡಿ, ಜಿಲ್ಲೆಯಲ್ಲಿ 2023ರ ಏಪ್ರಿಲ್‌ನಿಂದ ಡಿಸೆಂಬರ್ ಅಂತ್ಯದವರೆಗೆ ಹೆರಿಗೆ ಸಂದರ್ಭದಲ್ಲಿ ಮೂವರು ತಾಯಂದಿರು ವಿವಿಧ ಕಾರಣಗಳಿಂದ ಮೃತಪಟ್ಟಿದ್ದಾರೆ. ಹಾಗೆಯೇ ಏಪ್ರಿಲ್‌ನಿಂದ ಡಿಸೆಂಬರ್ ಅಂತ್ಯದವರೆಗೆ 34 ಶಿಶುಗಳು ಮರಣ ಹೊಂದಿವೆ. ಜಿಲ್ಲೆಯ ಸರ್ಕಾರಿ ಆಸ್ಪತ್ರೆಯಲ್ಲಿ ಶೇಕಡವಾರು ಹೆರಿಗೆ, ಶಸ್ತ್ರಚಿಕಿತ್ಸೆ, ತಾಯಿ ಮತ್ತು ಶಿಶು ಸಂರಕ್ಷಣೆ ಮತ್ತಿತರ ಬಗ್ಗೆ ಮಾಹಿತಿ ನೀಡಿದರು.

ಕ್ಷಯರೋಗ, ಮಲೇರಿಯಾ ಹಾಗೂ ಸಾಂಕ್ರಾಮಿಕ ರೋಗಗಳ ನಿಯಂತ್ರಣ ಹಾಗೂ ಲಸಿಕಾ ಕಾರ್ಯಕ್ರಮದ ಪ್ರಗತಿ ಸಂಬಂಧ ತಿಳಿಸಿದರು. ಇದೇ ವೇಳೆ ಜಿಲ್ಲಾಧಿಕಾರಿ, ತಾಯಿ ಮತ್ತು ಶಿಶು ಮರಣ ಸಂಬಂಧ ಪೋಷಕರಿಂದ ಮಾಹಿತಿ ಪಡೆದರು.

ಸಭೆಯಲ್ಲಿ ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ನಂಜುಂಡಯ್ಯ, ಆರ್‌ಸಿಎಚ್ ಅಧಿಕಾರಿ ಡಾ.ಮಧುಸೂದನ, ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಡಾ.ಶ್ರೀನಿವಾಸ, ಕುಟುಂಬ ಕಲ್ಯಾಣಾಧಿಕಾರಿ ಡಾ.ಆನಂದ್, ವೈದ್ಯರಾದ ಡಾ.ಸೋಮಶೇಖರ್, ಡಾ.ಪುರುಷೋತ್ತಮ, ಡಾ.ಚೇತನ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ನಟರಾಜು, ಶಾಲಾ ಶಿಕ್ಷಣ ಮತ್ತು ಸಾಕ್ಷರತ ಇಲಾಖೆಯ ಕಾರ್ಯಕ್ರಮ ಸಂಯೋಜಕ ಕೃಷ್ಣಪ್ಪ, ನಗರಸಭೆ ಪರಿಸರ ಇಂಜಿನಿಯರ್ ಸೌಮ್ಯ, ವೈದ್ಯಾಧಿಕಾರಿಗಳು ಇತರರು ಇದ್ದರು.

ಅರಣ್ಯದಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮರಾ ಕಳವು

▸ ಅರಣ್ಯ ಇಲಾಖೆಯಿಂದ ಒಕ್ಕಲೆಬ್ಬಿಸುವ ಹುನ್ನಾರ ▸ ತಟ್ಟೆಕೆರೆ ಹಾಡಿಯ ನಿವಾಸಿಗಳ ಆರೋಪ



ಪೊನ್ನಂಪೇಟೆ ತಾಲೂಕಿನ ಬಾಳಲೆ ಹೋಬಳಿಯ ನಿಟ್ಟೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಟ್ಟೆಕೆರೆ ಹಾಡಿಯ ನಿವಾಸಿಗಳು.

ಪೊನ್ನಂಪೇಟೆ, ಜ.17–ತಾಲೂಕಿನ ಬಾಳಲೆ ಹೋಬಳಿಯ ನಿಟ್ಟೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಟ್ಟೆಕೆರೆ ಹಾಡಿಯ ಕಲ್ಲಳ್ಳ ಬಳಿ ಹುಲಿಗಳ ಚಲನ ವಲನ ವೀಕ್ಷಿಸಲು ಅಳವಡಿಸಿದ್ದ 2 ಸಿಸಿ ಕ್ಯಾಮರಾ ಕಳುವಾಗಿವೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಬಾಳಲೆ ಪೊಲೀಸ್ ಉಪಠಾಣೆಗೆ ದೂರು ನೀಡಿದ್ದಾರೆ.

ಅರಣ್ಯ ಇಲಾಖೆಯ ದೂರಿನ ಸಂಬಂಧ ತಟ್ಟೆಕೆರೆ ಹಾಡಿಯ 5–6 ನಿವಾಸಿಗಳನ್ನು ಪೊಲೀಸರು ವಿಚಾರಣೆಗೊಳಪಡಿಸಿದ್ದು, ಇದು ನಿವಾಸಿಗಳ ಅಸಮಾಧಾನಕ್ಕೆ ಕಾರಣವಾಗಿದೆ. ಅರಣ್ಯ ಇಲಾಖೆ ನಮ್ಮನ್ನು ಒಕ್ಕಲೆಬ್ಬಿಸುವ ತಂತ್ರ ರೂಪಿಸುತ್ತಿದೆ ಎಂದು ಹಾಡಿಯ ನಿವಾಸಿಗಳು ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹಾಡಿಯಲ್ಲಿ ಸುಮಾರು 70 ರಿಂದ 80 ಆದಿವಾಸಿ ಕುಟುಂಬಗಳು ತಲತಲಾಂತರಗಳಿಂದ ಅರಣ್ಯವನ್ನು ಸಂರಕ್ಷಿಸುತ್ತಿದ್ದು, ಆದರೆ, ಅರಣ್ಯ ಇಲಾಖೆ ನಮ್ಮ ಮೇಲೆ ಸಿಸಿ ಕ್ಯಾಮರಾ ಕಳುವು ಆರೋಪ ಮಾಡಿ ಇಲ್ಲಿಂದ ಒಕ್ಕಲೆಬ್ಬಿಸಲು ಹುನ್ನಾರ ನಡೆಸಲಾಗುತ್ತಿದೆ ಎಂದು ಹಾಡಿಯ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇದೇ ರೀತಿ ಮುಂದುವರೆದರೆ ಹಾಡಿಯ ನಿವಾಸಿಗಳು ಅರಣ್ಯ ಇಲಾಖೆಯ ಕಚೇರಿ ಎದುರು ನಿರಂತರ ಧರಣಿ ನಡೆಸಲಾಗುವುದು ಎಂದು ಎಚ್ಚರಿಸಿದರು. ಇದೇ ವೇಳೆ ಹಾಡಿಯ ಅಧ್ಯಕ್ಷ ದಾಸಪ್ಪ, ಆದಿವಾಸಿ ಜಮ್ಮಾ ಪಾಳೆ ಹಕ್ಕು ಸ್ಥಾಪನಾ ಸಮಿತಿ ಅಧ್ಯಕ್ಷ ಜೆ.ಕೆ.ತಿಮ್ಮ, ಅರಣ್ಯ ಹಕ್ಕು ಸಮಿತಿ ಅಧ್ಯಕ್ಷ ರಾಮು ಹಾಗೂ ಹಾಡಿಯ ನಿವಾಸಿಗಳು ಇದ್ದರು.

ಮನೆಗಳ್ಳನ ಬಂಧನ: ಬೆಳ್ಳಿ ಚೆಂಬು, ಮೊಬೈಲ್ ವಶ

ಮಡಿಕೇರಿ, ಜ.17–ಜಿಲ್ಲೆಯ ವಿವಿಧೆಡೆ ಮನೆಗಳಲ್ಲಿ ಕಳ್ಳತನ ಮಾಡಿದ್ದ ಕಳ್ಳನನ್ನು ಕೊಡಗು ಠಾಣೆ ಪೊಲೀಸರು ಬಂಧಿಸಿದ್ದಾರೆ.



ವಿರಾಜಪೇಟೆಯ ಮಾಗೋಳ್ಳಿ ನಿವಾಸಿ ವೀರೇಶ್ ಕುಮಾರ್ (32) ಬಂಧಿತ ಆರೋಪಿ. ಈತನ ವಿರುದ್ಧ ಕುಶಾಲನಗರ ಪಟ್ಟಣ ಮತ್ತು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ತಲಾ 1, ವಿರಾಜಪೇಟೆ ಗ್ರಾಮಾಂತರ ಠಾಣೆಯಲ್ಲಿ 2, ಕುಟ್ಟ ಠಾಣೆಯಲ್ಲಿ 2 ಹಾಗೂ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ 3 ಪ್ರಕರಣ ದಾಖಲಾಗಿವೆ.

ಸುಂಟಿಕೊಪ್ಪ ಪೊಲೀಸ್ ಠಾಣೆ ವ್ಯಾಪ್ತಿಯ ಕೊಡಗರಹಳ್ಳಿ ಗ್ರಾಮ ನಿವಾಸಿ ಬಿ.ಸಿತಿಮ್ಮಯ್ಯ ಅವರ ಕೂರ್ಗಹಳ್ಳಿ ಎಸ್ಟೇಟ್‌ನ ಮನೆಯ ಬೀಗ ಮುರಿದು ಬೀರುವಿನಲ್ಲಿದ್ದ ಬೆಳ್ಳಿ ಚೆಂಬು, ಮೊಬೈಲ್ ಮತ್ತು 1 ವಾಚ್ ಕಳವು ಮಾಡಿರುವ ಕುರಿತು ಜ.7ರಂದು ಸುಂಟಿಕೊಪ್ಪ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಈ ಪ್ರಕರಣಗಳ ತನಿಖೆ ಹಾಗೂ ಪತ್ತೆಗಾಗಿ ಸೋಮವಾರಪೇಟೆ ಡಿವೈಎಸ್‌ಪಿ ಆರ್.ವಿ.ಗಂಗಾಧರಪ್ಪ ನೇತೃತ್ವದಲ್ಲಿ ತಂಡ ರಚಿಸಲಾಗಿತ್ತು. ಬಳಿಕ ವೀರೇಶ್ ಕುಮಾರ್‌ನನ್ನು ಬಂಧಿಸಿ ವಿಚಾರಣೆ ನಡೆಸಿದ ಪೊಲೀಸರು, ಆತನ ಬಳಿಯಿಂದ 1 ಬೆಳ್ಳಿ ಚೆಂಬು, ಮೊಬೈಲ್ ಮತ್ತು ವಾಚ್ ಅನ್ನು ವಶಕ್ಕೆ ಪಡೆದಿದ್ದಾರೆ.

ಕುಶಾಲನಗರ ವೃತ್ತ ನಿರೀಕ್ಷಕ ಕೆ.ರಾಜೇಶ್, ಸುಂಟಿಕೊಪ್ಪ ಪೊಲೀಸ್ ಠಾಣಾಧಿಕಾರಿ ಎಂ.ಸಿ.ಶ್ರೀಧರ್ ಮತ್ತು ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಬೆಳೆಹಾನಿ ಸಮೀಕ್ಷೆಗೆ ಅಧಿಕಾರಿಗಳ ತಂಡ ರಚನೆ

ಮಡಿಕೇರಿ, ಜ.17–ಕೊಡಗು ಜಿಲ್ಲೆಯಲ್ಲಿ ಜನವರಿ ಮೊದಲ ವಾರ ಸುರಿದ ಅಕಾಲಿಕ ಮಳೆಯಿಂದಾಗಿ ಉಂಟಾಗಿರುವ ಬೆಳೆಹಾನಿ ಸಮೀಕ್ಷೆಗೆ ಜಿಲ್ಲಾಧಿಕಾರಿ ವೆಂಕಟ್ ರಾಜಾ, ಅಧಿಕಾರಿಗಳ ತಂಡ ರಚಿಸಿದ್ದಾರೆ.



ಅಕಾಲಿಕ ಮಳೆ ಮತ್ತು ಹವಾಮಾನ ವೈಪರೀತ್ಯದಿಂದಾಗಿ ಜಿಲ್ಲೆಯಲ್ಲಿ ಶೇ.33ಕ್ಕೂ ಹೆಚ್ಚು ಬೆಳೆಹಾನಿಯಾಗಿದ್ದು, ನಷ್ಟ ಅಂದಾಜಿಸುವ ಸಂಬಂಧ ಜಿಲ್ಲಾಧಿಕಾರಿ, ಅಧಿಕಾರಿಗಳ ತಂಡವನ್ನು ನಿಯೋಜಿಸಿದ್ದಾರೆ. ಜಿಲ್ಲಾ ಕೃಷಿ ಜಂಟಿ ನಿರ್ದೇಶಕರು, ತೋಟಗಾರಿಕೆ ಉಪನಿರ್ದೇಶಕರು, ಕಾಫಿ ಮಂಡಳಿಯ ಉಪನಿರ್ದೇಶಕರು ಹಾಗೂ ಮಡಿಕೇರಿ, ಸೋಮವಾರಪೇಟೆ, ವಿರಾಜಪೇಟೆ, ಕುಶಾಲನಗರ ಹಾಗೂ ಪೊನ್ನಂಪೇಟೆ ತಾಲೂಕಿನ ತಹಶೀಲ್ದಾರ್‌ಗಳು ಸಮೀಕ್ಷೆಯ ತಂಡದಲ್ಲಿ ಇದ್ದಾರೆ. ಉಪವಿಭಾಗಾಧಿಕಾರಿ ತಂಡದ ಮೇಲುಸ್ತುವಾರಿ ವಹಿಸಲಿದ್ದಾರೆ ಎಂದು ಡಿಸಿ ತಿಳಿಸಿದ್ದಾರೆ. ಸಂಬಂಧಪಟ್ಟ ಇಲಾಖೆ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಿ, ಛಾಯಾಚಿತ್ರದೊಂದಿಗೆ ಜ.25ರೊಳಗೆ ಸೂಕ್ತ ವರದಿ ಸಲ್ಲಿಸಬೇಕು. ತಾಲೂಕುವಾರು ಕಾಫಿ ಮಂಡಳಿ, ಕೃಷಿ, ತೋಟಗಾರಿಕೆ ಅಧಿಕಾರಿಗಳ ತಂಡ ವರದಿಯನ್ನು ಕ್ರೋಢೀಕರಿಸಿ ವರದಿ ಸಲ್ಲಿಸಬೇಕು ಎಂದು ಸೂಚಿಸಿದ್ದಾರೆ.

ಇಂದು ಚೆಟ್ಟಿಮಾನಿಯಲ್ಲಿ ಗ್ರಾಮಸಿರಿ ಕಾರ್ಯಕ್ರಮ

ಮಡಿಕೇರಿ, ಜ.17–ಸುವರ್ಣ ಕರ್ನಾಟಕ 50ರ ಸಂಭ್ರಮ ಹಿನ್ನೆಲೆಯಲ್ಲಿ ಭಾಗಮಂಡಲ ಹೋಬಳಿಯ ಕನ್ನಡ ಸಾಹಿತ್ಯ ಪರಿಷತ್, ಕುಂದಚೇರಿ, ಭಾಗಮಂಡಲ ಮತ್ತು ಅಯ್ಯಂಗೇರಿ ಗ್ರಾಪಂ ಹಾಗೂ ಚೆಟ್ಟಿಮಾನಿ ಗ್ರಾಮಸಿರಿ ಆಚರಣಾ ಸಮಿತಿ ವತಿಯಿಂದ ಗ್ರಾಮಸಿರಿ ಕಾರ್ಯಕ್ರಮವನ್ನು ಜ.18ರಂದು ಚೆಟ್ಟಿಮಾನಿ ಶಾಲಾ ಮೈದಾನದಲ್ಲಿ ಏರ್ಪಡಿಸಲಾಗಿದೆ. ಅಂದು ಬೆಳಗ್ಗೆ 8 ಗಂಟೆಗೆ ರಾಷ್ಟ್ರಧ್ವಜಾರೋಹಣ, ಬೆಳಗ್ಗೆ 9 ಗಂಟೆಗೆ ಕಾವೇರಿ ಪದವಿಪೂರ್ವ ಕಾಲೇಜು ಮೈದಾನದಿಂದ ಮೆರವಣಿಗೆ, ನಂತರ ಪ್ರವೇಶ ದ್ವಾರಗಳ ಉದ್ಘಾಟನೆ, ವಸ್ತುಪ್ರದರ್ಶನ ಉದ್ಘಾಟನೆ, ಬೆಳಗ್ಗೆ 10.30ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದೆ. ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ, ಸಂಸದ ಪ್ರತಾಪ್ ಸಿಂಹ, ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಇತರರು ಪಾಲ್ಗೊಳ್ಳಲಿದ್ದಾರೆ.

ಕೈಗಾರಿಕಾ ಪ್ರದೇಶ ವಿಸ್ತರಣೆಗೆ ಚಿಂತನೆ

ಕೈಗಾರಿಕೋದ್ಯಮಿಗಳ ಸಭೆಯಲ್ಲಿ ಶಾಸಕ ಡಾ.ಮಂತರ್‌ಗೌಡ ಹೇಳಿಕೆ



ಕೂಡ್ಲೂರು ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕೋದ್ಯಮಿಗಳು ಹಾಗೂ ಕೈಗಾರಿಕಾ ಇಲಾಖೆಯ ಅಧಿಕಾರಿಗಳೊಂದಿಗೆ ಮಡಿಕೇರಿ ಶಾಸಕ ಡಾ.ಮಂತರಗೌಡ ಸಭೆ ನಡೆಸಿದರು.

ಕುಶಾಲನಗರ, ಜ.17–ಕೂಡ್ಲೂರು ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕೋದ್ಯಮಿಗಳು ಹಾಗೂ ಕೈಗಾರಿಕಾ ಇಲಾಖೆಯ ಅಧಿಕಾರಿಗಳೊಂದಿಗೆ ಮಡಿಕೇರಿ ಶಾಸಕ ಡಾ.ಮಂತರಗೌಡ ಸಭೆ ನಡೆಸಿ, ಕೈಗಾರಿಕೋದ್ಯಮಿಗಳ ಅಹವಾಲು ಆಲಿಸಿದರು.

ಕುಶಾಲನಗರದ ಕೂಡ್ಲೂರಿನಲ್ಲಿ 30 ವರ್ಷಗಳ ಹಿಂದೆ ಕೈಗಾರಿಕಾ ಪ್ರದೇಶಕ್ಕೆಂದು 250 ಎಕರೆ ಭೂಮಿಯನ್ನು ಮೀಸಲಿಡುವ ಮೂಲಕ ನೂರಾರು ಕೈಗಾರಿಕೆಗಳು ತಲೆ ಎತ್ತುವಂತೆ ಮಾಡಿದ ಮಾಜಿ ಮುಖ್ಯಮಂತ್ರಿ ದಿ.ಆರ್.ಗುಂಡೂರಾವ್ ಅವರನ್ನು ಇಡೀ ಜಿಲ್ಲೆ ಮರೆಯುವಂತಿಲ್ಲ ಎಂದರು.

ಕೂಡ್ಲೂರು ಕೈಗಾರಿಕಾ ಪ್ರದೇಶ 250 ಎಕರೆ ಇದ್ದು, ಈ ಪೈಕಿ 85 ಎಕರೆ ಕಂದಾಯ ಇಲಾಖೆಯಿಂದ ವರ್ಗಾವಣೆಗೊಂಡಿಲ್ಲ. ಹಾಗಾಗಿ ಆರ್‌ಟಿಸಿ ಇಲ್ಲದೇ ಕೈಗಾರಿಕೋದ್ಯಮಿಗಳು ಸಮಸ್ಯೆ ಎದುರಿಸುವಂತಾಗಿದೆ. ಕೂಡಲೇ 85 ಎಕರೆ ಜಾಗಕ್ಕೆ ಆರ್‌ಟಿಸಿ ಸಿಗುವಂತೆ ಮಾಡಿಕೊಡಬೇಕೆಂದು ಕೈಗಾರಿಕೋದ್ಯಮಿಗಳ ಸಂಘದ ಅಧ್ಯಕ್ಷರಾದ ಬ್ಲಾನ್ ಕಾಫಿ ಮೆನೇಜಿಂಗ್ ಡೈರೆಕ್ಟರ್ ಪ್ರವೀಣ್ ಇದೇ ವೇಳೆ ಶಾಸಕರ ಗಮನಕ್ಕೆ ತಂದರು.

ಅಲ್ಲದೇ ಕೈಗಾರಿಕಾ ಪ್ರದೇಶದಲ್ಲಿ 110ಕ್ಕೂ ಹೆಚ್ಚಿನ ಕಾಫಿ ಸಂಸ್ಕರಣಾ ಘಟಕಗಳಿದ್ದು, ಸಾವಿರಾರು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಆದರೆ, ಅವರಿಗೆ ಶುದ್ಧ ಕುಡಿವ ನೀರಿನ ವ್ಯವಸ್ಥೆ ಇಲ್ಲ. ಈಗಿರುವ ಕುಡಿವ ನೀರಿನ ಯೋಜನೆ 30 ವರ್ಷಗಳ ಹಳೆಯದಾಗಿದ್ದು, ಪೈಪ್‌ಲೈನ್‌ಗಳು ಹಾಳಾಗಿ ನೀರು ಪೋಲಾಗುತ್ತಿದೆ. ಆದ್ದರಿಂದ ಕೈಗಾರಿಕಾ ಪ್ರದೇಶಕ್ಕೆ ಪ್ರತ್ಯೇಕವಾಗಿ ಹಾರಂಗಿಯಿಂದ ಕುಡಿವ ನೀರಿನ ಯೋಜನೆ ರೂಪಿಸಬೇಕು ಎಂದು ಆಗ್ರಹಿಸಿದರು.

ಅಮೃತ ಕಾಫಿ ಸಂಸ್ಥೆಯ ಎಂಡಿ ಕಣ್ಣನ್ ಮಾತನಾಡಿ, ಇಡೀ ಕೈಗಾರಿಕಾ ಪ್ರದೇಶದ ಮೇಲ್ಭಾಗದ ನೀರು ತಗ್ಗು ಪ್ರದೇಶದ ಕಾವೇರಿ ನದಿಯಂಚಿನ ಅಮೃತ ಕಾಫಿ ಸಂಸ್ಕರಣಾ ಘಟಕದೊಳಗೆ ಹರಿಯುತ್ತಿದೆ. ಇದರಿಂದ ಅನಾನುಕೂಲವಾಗುತ್ತಿದೆ. ಕೂಡಲೇ ಸರಿಪಡಿಸಿ ಎಂದು ಶಾಸಕರಿಗೆ ಮನವಿ ಮಾಡಿದರು.

ಕಾಫಿ ಉದ್ಯಮಿಗಳಾದ ಸುದೀಪ್, ಅಬ್ದುಲ್ ಮಜೀದ್, ರಾಜಶೇಖರ್ ಮಾತನಾಡಿದರು. ಕೂಡುಮಂಗಳೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಭಾಸ್ಕರ ನಾಯಕ್, ಪಿಡಿಓ ಸಂತೋಷ್, ಕಾಫಿ ಉದ್ಯಮಿ ಸಾತಪ್ಪನ್, ವಿಶ್ವನಾಥನ್, ಕುಮಾರ್, ದಾಧಿಕ್, ಸುದೀಪ್, ರಾಜಶೇಖರ್, ಭಾವನಾ ಪ್ರವೀಣ್ ಮೊದಲಾದವರಿದ್ದರು.



ಜ.22ರಂದು ಅಯೋಧ್ಯೆಯ ಶ್ರೀರಾಮ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಹಿಂದೂ ಕಾರ್ಯಕರ್ತರು ಗೋಣಿಕೊಪ್ಪದ ಉಮಾಮಹೇಶ್ವರಿ ದೇವಸ್ಥಾನ ಆವರಣ ಸ್ವಚ್ಛಗೊಳಿಸಿದರು. ಸುರೇಶ್ ರೈ, ಚೈತ್ರಾ ಬಿ.ಚೇತನ್, ರತಿ ಅಚ್ಚಪ್ಪ, ಸುಬ್ರಮಣಿ, ಅಕ್ಷಯ್, ಅನಿಲ್, ಮುರುಗೇಶ್, ಮಂಜು, ಚಿಮ್ಮಣಿ, ನೂರೇರ ರಂಜಿ, ಕೋಣಿಯಂಡ ಬೋಜಮ್ಮ, ರಾಜೇಶ್ ಇದ್ದರು.

ಲಾರಿ ಮಾಲೀಕರು, ಚಾಲಕರ ಪ್ರತಿಭಟನೆ



ಕೇಂದ್ರ ಸರ್ಕಾರ ಹೊಸದಾಗಿ ಜಾರಿಗೆ ತಂದಿರುವ 'ಹಿಟ್ ಅಂಡ್ ರನ್' ಅಪಘಾತ ಪ್ರಕರಣದಲ್ಲಿ ಶಿಕ್ಷೆ ಹೆಚ್ಚಿಸಿರುವುದರ ವಿರುದ್ಧ ಲಾರಿ ಮಾಲೀಕರು ಮತ್ತು ಚಾಲಕರ ಸಂಘದಿಂದ ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಯಿತು.

ಚಾಮರಾಜನಗರ, ಜ.17–ಕೇಂದ್ರ ಸರ್ಕಾರ ಹೊಸದಾಗಿ ಜಾರಿಗೆ ತಂದಿರುವ ಹಿಟ್ ಅಂಡ್ ರನ್ ಅಪಘಾತ ಪ್ರಕರಣದಲ್ಲಿ 10 ವರ್ಷ ಜೈಲು, 7 ಲಕ್ಷ ರೂ. ದಂಡ ವಿಧಿಸುವ ಕಾನೂನನ್ನು ಸಂಪೂರ್ಣವಾಗಿ ಕೈ ಬಿಡಬೇಕು ಎಂದು ಒತ್ತಾಯಿಸಿ ಲಾರಿ ಮಾಲೀಕರು ಮತ್ತು ಚಾಲಕರ ಸಂಘದ ವತಿಯಿಂದ ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಸುಲ್ತಾನ್ ಷರೀಫ್ ವೃತ್ತದಲ್ಲಿ ಸಮಾವೇಶಗೊಂಡ ಲಾರಿ ಮಾಲೀಕರು ಮತ್ತು ಚಾಲಕರು, ಅಲ್ಲಿಂದ ಮೆರವಣಿಗೆ ಹೊರಟು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಡಿವಿಯೇಷನ್ ರಸ್ತೆಯ ಮೂಲಕ ಭುವನೇಶ್ವರಿ ವೃತ್ತಕ್ಕೆ ತೆರಳಿ ಮಾನವ ಸರಪಳಿ ರಚಿಸಿ, ಕೆಲಕಾಲ ರಸ್ತೆತಡೆ ನಡೆಸಿದರು. ನಂತರ ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರಿಗೆ ಮನವಿ ಸಲ್ಲಿಸಿದರು.

ಚಾಲಕರ ಸೇವೆ ಗುರುತಿಸಿ, ಚಾಲಕರ ದಿನಾಚರಣೆ ನಿಗದಿಪಡಿಸಬೇಕು. ಚಾಲಕರ ಅಭಿವೃದ್ಧಿಗಾಗಿ ನಿಗಮ ಸ್ಥಾಪಿಸಬೇಕು. ವಾಹನ ಚಾಲನೆ ಮಾಡುವಾಗ ಹೃದಯಾಘಾತವಾದರೆ, ಅಪಘಾತ ಪರಿಹಾರ ನಿಧಿಗೆ ಸೇರಿಸಬೇಕು. ರಸ್ತೆಯಲ್ಲಿ ಕರ್ತವ್ಯ ನಿರತ ಖಾಸಗಿ ಚಾಲಕರ ಮೇಲೆ ಅನಾವಶ್ಯಕ ಹಲ್ಲೆಗಳು ನಡೆದಾಗ ಹಲ್ಲೆ ಮಾಡಿದವರ ವಿರುದ್ಧ ಕ್ರಮಕೈಗೊಳ್ಳಬೇಕು. ಚಾಲಕರು ಅಪಘಾತದಿಂದ ಮರಣ ಹೊಂದಿದ್ದರೆ ನೀಡುತ್ತಿರುವ ಪರಿಹಾರವನ್ನು 5 ಲಕ್ಷ ರೂ.ನಿಂದ 25 ಲಕ್ಷ ರೂ.ಗೆ ಏರಿಕೆ ಮಾಡಬೇಕು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಚಾಮರಾಜನಗರ ಡ್ರೈವರ್ ಅಸೋಸಿಯೇಷನ್ ಅಧ್ಯಕ್ಷ ತೌಹಿದ್ ಬೇಗ್, ಕಾರ್ಯದರ್ಶಿ ಮಾದೇಶ್, ಚಾಮರಾಜನಗರ ಲಾರಿ ಮಾಲೀಕರ ಸಂಘದ ಕಾರ್ಯದರ್ಶಿ ಮುರಳಿಕೃಷ್ಣ, ಆಟೋ ಚಾಲಕರ ಸಂಘದ ಜಿಲ್ಲಾಧ್ಯಕ್ಷ ಮಹದೇವಸ್ವಾಮಿ, ಲೋಕಲ್ ಲಾರಿ ಮಾಲೀಕರ ಅಸೋಸಿಯೇಷನ್ ಇರ್ಷಾದ್ ಪಾಷ, ಟೆಂಪೋ ಅಸೋಸಿಯೇಷನ್ ಯಾಸಿನ್ ಇತರರು ಭಾಗವಹಿಸಿದ್ದರು.

ಅಧಿಕಾರಿಗಳ ವಿರುದ್ಧ ಸಾಗುವಳಿದಾರರ ಪ್ರತಿಭಟನೆ

ಚಾಮರಾಜನಗರ, ಜ.17– ಎಸ್‌ಸಿ, ಎಸ್‌ಟಿ ಸಾಗುವಳಿ ಜಮೀನುದಾರರಿಗೆ ಅರಣ್ಯ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳಿಂದ ತೊಂದರೆಯಾಗುತ್ತಿದೆ ಆರೋಪಿಸಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ಬಡಾವಣೆಯ ನಿವಾಸಿಗಳು, ರಾಜ್ಯ ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ನಗರದ ಜಿಲ್ಲಾಡಳಿತ ಭವನದ ಮುಂಭಾಗ ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ, ತಾಲೂಕಿನ ಹೆಚ್.ಡಿ.ಫಾರೆಸ್ಟ್, ಪುಣಜನೂರು ಸ್ಟೇಟ್ ಫಾರೆಸ್ಟ್ ಸರ್ವೆ ನಂ: 1, 3, 5ರಲ್ಲಿ ಸುಮಾರು 150 ಜನರಿಗೆ ಸೇರಿದ ಜಮೀನಿದ್ದು, ಈ ಜಮೀನಿನಲ್ಲಿ ಸುಮಾರು 50 ವರ್ಷಗಳಿಂದಲ್ಲೂ ವ್ಯವಸಾಯ ಮಾಡುತ್ತಿದ್ದಾರೆ. ಕೋವಿಡ್ ಕಾರಣದಿಂದ 2–3 ವರ್ಷ ಸ್ವಲ್ಪ ಜಮೀನನ್ನು ಉಳುಮೆ ಮಾಡಲು ಆಗದ ಕಾರಣದಿಂದ ವ್ಯವಸಾಯ ಕೈಬಿಡಲಾಗಿತ್ತು. ಆದರೆ, ಈಗ ಜಮೀನನ್ನು ಉಳುಮೆ ಮಾಡಲು ಹೋದಾಗ ಅರಣ್ಯ ಇಲಾಖೆಯವರು ತೊಂದರೆ ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ನಂತರ ಶಾಸಕ ಸಿ.ಪುಟ್ಟರಂಗಶೆಟ್ಟಿ, ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ ಅವರೊಂದಿಗೆ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಮನವಿ ಆಲಿಸಿ, ಕೂಡಲೇ ಪರಿಶೀಲಿಸಿ ಸಾಗುವಳಿದಾರರಿಗೆ ವ್ಯವಸಾಯಕ್ಕೆ ಅವಕಾಶ ಕಲ್ಪಿಸಿಕೊಡುವಂತೆ ಜಿಲ್ಲಾಧಿಕಾರಿಗೆ ಸೂಚಿಸಿದರು. ನಂತರ ಪ್ರತಿಭಟನೆ ಕೈಬಿಡಲಾಯಿತು. ಪ್ರತಿಭಟನೆಯಲ್ಲಿ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಯೋಜಕ ಸಿ.ಎಂ.ಶಿವಣ್ಣ, ವಕೀಲರಾದ ದಲಿತರಾಜ್, ಯಜಮಾನರಾದ ನಾಗರಾಜು, ಮಹದೇವಯ್ಯ, ರಂಗಸ್ವಾಮಿ, ಡಿಎಸ್‌ಎಸ್ ಸಂಯೋಜಕ ಕೆ.ಎಂ.ನಾಗರಾಜು, ಉಮೇಶ್, ಉಮೇಶ್ ಕುಮಾರ್ ಭಾಗವಹಿಸಿದ್ದರು.



ಚಾ.ನಗರದ ಜಿಲ್ಲಾಡಳಿತ ಭವನದ ಮುಂಭಾಗ ಪ್ರತಿಭಟನೆ ನಡೆಸಿದ ಎಸ್‌ಸಿ, ಎಸ್‌ಟಿ ಸಾಗುವಳಿ ಜಮೀನುದಾರರು ಉಸ್ತುವಾರಿ ಸಚಿವ ಕೆ.ವೆಂಕಟೇಶ ಅವರಿಗೆ ಮನವಿ ಸಲ್ಲಿಸಿದರು.

ನಾಳೆ ವಿವಿಧ ಅಭಿವೃದ್ಧಿಗೆ ಚಾಲನೆ

ಚಾಮರಾಜನಗರ, ಜ.17– ಕೃಷಿ ಮಾರಾಟ ಇಲಾಖೆ, ಗುಂಡ್ಲುಪೇಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಆರ್‌ಐಡಿಎಫ್‌28ರ ಯೋಜನೆಯಡಿ ಗುಂಡ್ಲುಪೇಟೆ ತಾಲೂಕಿನ ಬೇಗೂರು ಉಪಮಾರುಕಟ್ಟೆ ಪ್ರಾಂಗಣದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಜ.19 ರಂದು ಬೆಳಗ್ಗೆ 11 ಗಂಟೆಗೆ ಚಾಲನೆ ನೀಡಲಾಗುವುದು. ಹತ್ತಿ ಮಾರುಕಟ್ಟೆ, ಸಿಸಿ ರಸ್ತೆ, ಆಡಳಿತ ಕಚೇರಿ ಮತ್ತು ಶೌಚಾಲಯ ನಿರ್ಮಾಣಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್.ಪಾಟೀಲ್ ಚಾಲನೆ ನೀಡಲಿದ್ದಾರೆ.

ವಿಪತ್ತು ನಿರ್ವಹಣೆ ಅರಿವು ಅಗತ್ಯ

ಅಂಗವಿಕಲರಿಗೆ ಜಿಲ್ಲಾ ನ್ಯಾಯಾಧೀಶೆ ಬಿ.ಎಸ್.ಭಾರತಿ ಸಲಹೆ



ಚಾಮರಾಜನಗರದ ಜಿಲ್ಲಾಡಳಿತ ಭವನದ ಹಳೇ ಕೆಡಿಪಿ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಾಗಾರ ಹಾಗೂ ಮತದಾನದ ಜಾಗೃತಿ ಕಾರ್ಯಕ್ರಮವನ್ನು ನ್ಯಾಯಾಧೀಶೆ ಬಿ.ಎಸ್.ಭಾರತಿ ಉದ್ಘಾಟಿಸಿದರು. ನ್ಯಾಯಾಧೀಶ ಎಂ.ಶ್ರೀಧರ, ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಜಿಪಂ ಉಪಕಾರ್ಯದರ್ಶಿ ಲಕ್ಷ್ಮೀ ಇದ್ದರು.

ಚಾಮರಾಜನಗರ, ಜ.17– ಅಂಗವಿಕಲರಿಗೆ ವಿಪತ್ತು ನಿರ್ವಹಣೆ ಅರಿವು ಅಗತ್ಯ ಎಂದು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶೆ ಬಿ.ಎಸ್.ಭಾರತಿ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ಹಳೇ ಕೆಡಿಪಿ ಸಭಾಂಗಣದಲ್ಲಿ ಬುಧವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಮೊಬಿಲಿಟಿ ಇಂಡಿಯಾ ಸಹಯೋಗದಲ್ಲಿ ಆಯೋಜಿಸಿದ್ದ ಜಿಲ್ಲೆಯ ಗ್ರಾಮೀಣ, ನಗರ ಪುನರ್ವಸತಿ ಕಾರ್ಯಕರ್ತರಿಗೆ ವಿಪತ್ತು ನಿರ್ವಹಣೆಯಲ್ಲಿ ವಿಕಲಚೇತನರ ಒಳಗೊಳ್ಳುವಿಕೆ ಮತ್ತು ಮನೋ ಸಾಮಾಜಿಕ ಆರೈಕೆ ಕುರಿತ ಕಾರ್ಯಾಗಾರ ಹಾಗೂ ಮತದಾನದ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿಪತ್ತಿನ ಸಂದರ್ಭದಲ್ಲಿ ಅಂಗವಿಕಲರಿಗೆ ಸಹಕಾರ ಕೊಡಬೇಕು. ಅಲ್ಲದೇ ಸಾಮಾನ್ಯ ಜನರಲ್ಲೂ ವಿಪತ್ತು ನಿರ್ವಹಣೆ ಅರಿವು ಇರಬೇಕು. ಅಂಗವಿಕಲರು ಸ್ವಶಕ್ತಿಯಿಂದ ವಿಪತ್ತು ಎದುರಿಸಲು ಸಿದ್ಧರಾಗಬೇಕು. ಇಂತಹ ಸಂದರ್ಭದಲ್ಲಿ ಮಾನಸಿಕ ಸಿದ್ಧತೆಯೂ ಅಗತ್ಯ ಎಂದು ಸಲಹೆ ನೀಡಿದರು.

ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಆನಂದ್ ಪ್ರಕಾಶ್ ಮೀನಾ ಮಾತನಾಡಿ, ಭಾರತ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಸಂವಿಧಾನದ ಮೂಲಕ ಇಲ್ಲಿನ ಪ್ರಜೆಗಳಿಗೆ ಮತದಾನದ ಹಕ್ಕು ನೀಡಲಾಗಿದೆ. ಅಂಗವಿಕಲರು ಮತ ಚಲಾಯಿಸಬೇಕು. ವಿಶೇಷಚೇತನರಿಗೆ ನೀಡಲಾಗಿರುವ ಶೇ.5ರಷ್ಟು ಮೀಸಲಾತಿಯನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

> ಕರ್ನಾಟಕದಲ್ಲಿ ಮಾತ್ರ ಈ ರೀತಿಯ ಕಾರ್ಯಕ್ರಮಗಳು ನಡೆಯುತ್ತಿರುವುದು ಶ್ಲಾಘನೀಯ. ಸರ್ಕಾರೇತರ ಸಂಸ್ಥೆಗಳು ಉತ್ತಮ ರೀತಿ ಕೆಲಸ ಮಾಡಬೇಕು. ವಿಪತ್ತು ನಿರ್ವಹಣೆ ಕುರಿತು ಸರ್ಕಾರೇತರ ಸಂಸ್ಥೆಗಳು ವಿಕಲಚೇತನರು ಹಾಗೂ ಜನರಲ್ಲಿ ಅರಿವು ಮೂಡಿಸಿ ಮಾನಸಿಕವಾಗಿ ತಯಾರು ಮಾಡಬೇಕು.
>
> –ಬಿ.ಎಸ್.ಭಾರತಿ, ನ್ಯಾಯಾಧೀಶೆ

ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಲಕ್ಷ್ಮೀ ಮಾತನಾಡಿ, 2019ರಲ್ಲಿ ಕೊಡಗಿನಲ್ಲಿ ಸಂಭವಿಸಿದ ವಿಪತ್ತಿನಿಂದಾಗಿ ಬಹಳಷ್ಟು ಜೀವ, ಆಸ್ತಿ–ಪಾಸ್ತಿ ಹಾನಿಯಾಯಿತು. ಈ ಸಂದರ್ಭದಲ್ಲಿ ಸಾಕಷ್ಟು ಸರ್ಕಾರೇತರ ಸಂಸ್ಥೆಗಳು ಧಾವಿಸಿ ಸಂಕಷ್ಟದಲ್ಲಿದ್ದ ಜನರಿಗೆ ಸಹಾಯ ಹಸ್ತ ಚಾಚಿದವು. ಪ್ರಕೃತಿ ನಮ್ಮ ಕೈಯಲ್ಲಿಲ್ಲ. ನಾವೆಲ್ಲ ಪ್ರಕೃತಿಯ ಕೈಗೊಂಬೆ. ಆದ್ದರಿಂದ ವಿಪತ್ತು ನಿರ್ವಹಣೆ ಅರಿವು ಹೊಂದುವುದು ಅಗತ್ಯ ಎಂದು ತಿಳಿಸಿದರು.

ಅಂಗವಿಕಲರಿಗೆ ಗ್ರಾಮ ಪಂಚಾಯಿತಿಯಲ್ಲಿ ಸಿಗಬೇಕಾದ ಸೌಲಭ್ಯಗಳನ್ನು ಒದಗಿಸಿಕೊಡಲು ಕ್ರಮವಹಿಸಲಾಗಿದೆ. ಮತದಾರರ ಗುರುತಿನ ಚೀಟಿ ಹೊಂದಿಲ್ಲದ ಅಂಗವಿಕಲರು ಗುರುತಿನ ಚೀಟಿ ಪಡೆದುಕೊಂಡು ಮುಂಬರುವ ಚುನಾವಣೆಯಲ್ಲಿ ಮತದಾನ ಮಾಡಬೇಕು ಎಂದು ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಶ್ರೀಧರ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಸುರೇಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಹಮ್ಮದ್ ಮುಕ್ತಾರ್, ಜಿಲ್ಲಾ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಮೇಶ್, ಮೊಬಿಲಿಟಿ ಇಂಡಿಯಾದ ಕಾರ್ಯಕಾರಿ ನಿರ್ದೇಶಕ ಆಲ್ಬಿನಾ ಶಂಕರ್, ಹಿರಿಯ ಕಾರ್ಯಕ್ರಮ ವ್ಯವಸ್ಥಾಪಕ ಆನಂದ್, ಬೆಂಗಳೂರಿನ ನಿಮಾನ್ಸ್‌ನ ಡಾ.ಜಯಕುಮಾರ್ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಹುಂಡಿ ಹಣ ಕದಿಯುತ್ತಿದ್ದ ಕಳ್ಳನ ಬಂಧನ

ಹನೂರು, ಜ.17–ತಾಲೂಕಿನ ಕೌದಳ್ಳಿ ಗ್ರಾಮದ ದಂಡಿನ ಮಾರಮ್ಮ ದೇವಾಲಯದಲ್ಲಿ ಹುಂಡಿ ಹಣ ಕಳವು ಮಾಡುತ್ತಿದ್ದ ಕಳ್ಳನನ್ನು ರಾಮಪುರ ಠಾಣೆ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲೂಕಿನ ಕೆಸ್ತೂರು ಕೊಪ್ಪಲು ಗ್ರಾಮದ ಅವಿನಾಶ್ ಅಲಿಯಾಸ್ ಅವಿ ಬಂಧಿತ ಆರೋಪಿ. ಬುಧವಾರ ಮುಂಜಾನೆ ರಾಮಪುರ ಪೊಲೀಸರು ಗಸ್ತಿನಲ್ಲಿದ್ದಾಗ ಕೌದಳ್ಳಿ ಗ್ರಾಮದ ದಂಡಿನ ಮಾರಮ್ಮ ದೇವಸ್ಥಾನದ ಹುಂಡಿ ಕಳ್ಳತನ ಮಾಡುತ್ತಿರುವುದು ಪತ್ತೆಯಾಗಿದೆ. ತಕ್ಷಣ ಆತನನ್ನು ಪೊಲೀಸರು ಬಂಧಿಸಿ, ಹುಂಡಿಯಲ್ಲಿದ್ದ 9600 ರೂ. ಅನ್ನು ವಶಕ್ಕೆ ಪಡೆದರು. ವಿಚಾರಣೆ ವೇಳೆ ಈತ ಎರಡು ದಿನಗಳ ಹಿಂದೆ ಮಹದೇಶ್ವರಬೆಟ್ಟದ ನಿವಾಸಿ ಧನಕೋಟಿ ಅವರಿಗೆ ಸೇರಿದ 8 ಲಕ್ಷ ರೂ. ಬೆಲೆಬಾಳುವ ಟ್ರ್ಯಾಕ್ಟರ್ ಅನ್ನು ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ಡಿವೈಎಸ್ಪಿ ಸೋಮೇಗೌಡ, ರಾಮಪುರ ಠಾಣೆ ವೃತ್ತ ನಿರೀಕ್ಷಕ ಸಂತೋಷ ಕಶ್ಯಪ್ ನೇತೃತ್ವದಲ್ಲಿ ಪಿಎಸ್‌ಐ ಲೋಕೇಶ್, ಎಎಸ್‌ಐ ಗುರುಸ್ವಾಮಿ, ಮುಖ್ಯಪೇದೆ ನಾಗೇಂದ್ರ, ಪೇದೆಗಳಾದ ಗಿರೀಶ್, ಲಿಯಾಖತ್ ಅಲಿಖಾನ್, ಸಂಜಯ್ ಪವಾರ್, ಬಿರಾದಾರ್ ಕಾರ್ಯಾಚರಣೆ ನಡೆಸಿದರು.



ಕೊಳ್ಳೇಗಾಲ: ಅಬಕಾರಿ ಉಪನಿರೀಕ್ಷಕ ಸಿದ್ದಯ್ಯಗೆ ನೋಟಿಸ್

ಕೊಳ್ಳೇಗಾಲ, ಜ.17–ಕರ್ತವ್ಯದಲ್ಲಿ ನಿರ್ಲಕ್ಷ್ಯ, ಉದಾಸೀನತೆ ಹಾಗೂ ಬೇಜವಾಬ್ದಾರಿ ಹಿನ್ನೆಲೆಯಲ್ಲಿ ಅಬಕಾರಿ ಉಪನಿರೀಕ್ಷಕ ಸಿದ್ದಯ್ಯ ಅವರಿಗೆ ನೋಟಿಸ್ ನೀಡಲಾಗಿದೆ. ಕೊಳ್ಳೇಗಾಲ, ಹನೂರು, ಮಲೆ ಮಹದೇಶ್ವರಬೆಟ್ಟದ ವ್ಯಾಪ್ತಿಯ ಜಾಗೇರಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಅಕ್ರಮ ಮದ್ಯ ಮಾರಾಟ ಮತ್ತು ಸಾಗಣೆ ತಡೆಗಟ್ಟಲು ಅಬಕಾರಿ ಉಪನಿರೀಕ್ಷಕ ಸಿದ್ದಯ್ಯ ಅವರಿಗೆ ಸೂಚಿಸಲಾಗಿತ್ತು. ಆದರೆ, ಇವರು ಯಾವುದೇ ದಾಳಿ ಹಾಗೂ ಪ್ರಕರಣ ದಾಖಲಿಸದೇ ಕರ್ತವ್ಯದಲ್ಲಿ ನಿರ್ಲಕ್ಷ್ಯ, ಉದಾಸೀನತೆ ತೋರಿದ್ದಾರೆ ಎಂದು ಕಾರಣ ಕೇಳಿ ನೋಟಿಸ್ ನೀಡಲಾಗಿದೆ. ಸಿದ್ದಯ್ಯ ಅವರು ಮಹದೇಶ್ವರ ಬೆಟ್ಟದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಹಾಗೂ ಸಾಗಣೆಗೆ ಪರೋಕ್ಷವಾಗಿ ಸಹಕರಿಸಿ, ಶಾಮಿಲಾಗಿದ್ದಾರೆ ಎಂದು ಹನೂರು ಶಾಸಕ ಮಂಜುನಾಥ್ ಹಾಗೂ ಸ್ಥಳೀಯರು ದೂರು ನೀಡಿದ್ದರು. ಇದು ಮೇಲ್‌ನೋಟಕ್ಕೆ ಸತ್ಯ ಎಂದು ತಿಳಿದಿರುವುದರಿಂದ ಉಪನಿರೀಕ್ಷಕ ಸಿದ್ದಯ್ಯಗೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಕೊಳ್ಳೇಗಾಲ ವಲಯದ ಅಬಕಾರಿ ನಿರೀಕ್ಷಕ ತಿಳಿಸಿದ್ದಾರೆ.

ಕಾಡಾನೆ ದಾಳಿಯಿಂದ ರೈತನಿಗೆ ಗಾಯ

ಹನೂರು, ಜ.17–ಕಾಡಾನೆ ದಾಳಿಯಿಂದ ರೈತ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿರುವ ಘಟನೆ ಸಮೀಪದ ಗಂಗನದೊಡ್ಡಿ ಗ್ರಾಮದಲ್ಲಿ ಮಂಗಳವಾರ ರಾತ್ರಿ ನಡೆದಿದೆ. ಗಂಗನದೊಡ್ಡಿ ಗ್ರಾಮದ ರೈತ ನಟರಾಜು ಕಾಡಾನೆ ದಾಳಿಯಿಂದ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ನಟರಾಜು ರಾತ್ರಿ 11 ಗಂಟೆಯಲ್ಲಿ ತಮ್ಮ ಜಮೀನಿಗೆ ಕಾವಲು ಕಾಯಲು ಹೋಗುತ್ತಿದ್ದಾಗ ಕಾಡಾನೆ ಏಕಾಏಕಿ ದಾಳಿ ನಡೆಸಿದೆ. ಇದರಿಂದ ನಟರಾಜುವಿನ ಕಾಲು ಮುರಿದಿದೆ.



ದಿನನಿತ್ಯ ಕಾಡಾನೆ ತೊಂದರೆ ನೀಡುತ್ತಿರುವ ಬಗ್ಗೆ ಅರಣ್ಯಾಧಿಕಾರಿಗಳಿಗೆ ಸಾಕಷ್ಟು ಬಾರಿ ಮನವಿ ಮಾಡಿದರು ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಕೂಡಲೇ ಹಿರಿಯ ಅಧಿಕಾರಿ ಕಾಡಾನೆ ಹಾವಳಿ ತಪ್ಪಿಸಬೇಕು. ಜೊತೆಗೆ ಕಾಡಾನೆ ದಾಳಿಯಿಂದ ಗಾಯಗೊಂಡಿರುವ ರೈತ ನಟರಾಜುಗೆ ಚಿಕಿತ್ಸಾ ವೆಚ್ಚ ಭರಿಸಬೇಕು ಎಂದು ಈ ಭಾಗದ ರೈತರು ಒತ್ತಾಯಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ತೇಜಸ್ವಿನಿ ಟೂರಿಸ್ಟ್
28–1–24 9 ದಿನಗಳ ಪ್ರವಾಸ ಮಂತ್ರಾಲಯ ಶ್ರೀಶೈಲ, ಹೈದ್ರಾಬಾದ್, 9 ನವನರಸಿಂಹ, ಇತ್ಯಾದಿ 14 ಸ್ಥಳಗಳು. 25–2–24 6 ದಿನ ಮುಂಬೈ ಪ್ರವಾಸ. 15–3–24 18 ದಿನ ಮಧ್ಯಪ್ರದೇಶ ಗುಜರಾತ್, ರಾಜಸ್ಥಾನ, ಉಜ್ಜೈನಿ, 4 ಜ್ಯೋತಿರ್ಲಿಂಗ್ ಇತ್ಯಾದಿ. 4–4–24 10 ದಿನ ಕಾಶಿ, ಗಯಾ, ಅಯೋಧ್ಯ ಇತ್ಯಾದಿ
9379792644

ಬೇಕಾಗಿದ್ದಾರೆ
ಕೋಳಿ ಫಾರಂನಲ್ಲಿ ಕೆಲಸಕ್ಕಾಗಿ ಹೆವಿ ಲೈಸನ್ ಮತ್ತು ಬ್ಯಾಡ್ಜ್ ಹೊಂದಿರುವ 35 ವರ್ಷದೊಳಗಿನ ಡ್ರೈವರ್ ಬೇಕಾಗಿದ್ದಾರೆ. ಉಚಿತ ವಸತಿ ESI / PF ಸೌಲಭ್ಯವಿದೆ. ಸ್ಥಳ: ರೈಸನ್ ನ್ಯೂಟ್ರಿಷಿಯನ್ ಬೆಣಗಾಲು, ಪಿರಿಯಾಪಟ್ಟಣ ತಾ॥
9480055298

Q.P. CERTIFICATE AVAILABLE
ಮೆಡಿಕಲ್ ಸ್ಟೋರ್ ಮಾಡಲು ಬೇಕಾಗಿರುವ ಫಾರ್ಮಸಿ ಸರ್ಟಿಫಿಕೇಟ್ (QP) ದೊರೆಯುತ್ತದೆ
9901708430
8453877874

WANTED
Front Office Executive Graduates with Relevant Experience in Front Office Administration. Must Have good Oral and Written Communication For Interview Contact
8971799998

ತೆಂಗಿನ ಸಸಿಗಳು ಮಾರಾಟಕ್ಕಿದೆ
ತಿಪಟೂರು ವೆರೈಟಿ, $2^1/_2$ ವರ್ಷದ ಉತ್ತಮವಾದ 2 ಲಕ್ಷ ಸಸಿಗಳು ಕಡಿಮೆ ಬೆಲೆಗೆ ಮಾರಾಟಕ್ಕಿದೆ.
Mob: 91644 39469

ಶ್ರೀ ಭುವನೇಶ್ವರಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ
ನಂ. 622, "ಆನಂದ ಮನೆ" 1ನೇ ಹಂತ, ವಿಶ್ವೇಶ್ವರನಗರ ಮೈಸೂರು–08, 0821–2481718
ಕ್ಲರ್ಕ್ (ಗುಮಾಸ್ತ)ರ ಹುದ್ದೆಗೆ ಬೇಕಾಗಿದ್ದಾರೆ. ವಿದ್ಯಾರ್ಹತೆ: ಯಾವುದೇ ಪದವಿ ಹಾಗೂ ಕಂಪ್ಯೂಟರ್ ಜ್ಞಾನ ಹೊಂದಿರಬೇಕು. ಹುಡುಗರಿಗೆ ಆದ್ಯತೆ ಮತ್ತು ದ್ವಿಚಕ್ರ ವಾಹನ ಹೊಂದಿರಬೇಕು.
8431349378, 9844325851



Solar Water Heater SALES & SERVICE BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

WANTED
- GRAPHIC DESIGNER
- PRINTING MACHINE HELPER
- DIE PUNCHING OPERATOR

9448067939 | 9739569260

HOUSE FOR SALE
30X40, West Face Site North Face Door, Newly Constructed G+2, Dattagalli Somanathanagar, Mysore
9738884777
9900251194

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ. (ಹೆಬ್ಬಾಳು ಸುತ್ತಮುತ್ತ ಇರುವವರಿಗೆ ಮೊದಲ ಆದ್ಯತೆ) ವಿದ್ಯಾರ್ಹತೆ: SSLC Pass/Fail ಸಂಪರ್ಕಿಸಿ: ಶ್ರೀ ವಿನಾಯಕ ಟ್ರೇಡರ್ಸ್, ಹೆಬ್ಬಾಳ್, ಮೈಸೂರು
9901212321
8880883339

ಕೆಹೆಚ್‌ಬಿ ಸೈಟು ಮಾರಾಟಕ್ಕಿದೆ
ಎಲ್‌ಐಜಿ 30x40 ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಕೆನ್ನಾಳು ಗ್ರಾಮದಲ್ಲಿ ಮಾರಾಟಕ್ಕಿದೆ. ಸಂಪರ್ಕಿಸಿ:
8123542481

SHRIRAM LAND SITES
"Oxygen-2"
Rs.14.99L @ Lakhs Onwards HD Kote Road, (Jayapura) (90% Home Loan Available)
9686188919
7676644999

ಬೋಳು ತಲೆಯ ಸಮಸ್ಯೆಯೇ?

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethara Road, kuvempunagar, Mysuru
MYSURU 9611028523 MANGALORE 9343142258

ವಿಠಲ್ ರೆಕಾರ್ಡ್ಸ್ ಪ್ರೈವೇಟ್ ಲಿಮಿಟೆಡ್
ಖಾಲಿ ಹುದ್ದೆ: 150+
DATA ENTRY OPERATOR
ಸಂಬಳ 10,000 + 5000 Incentive ಸಂದರ್ಶನದ ಸಮಯ: 9.30 ರಿಂದ 5.30. ವಿಳಾಸ: #42, JCK ಇಂಡಸ್ಟ್ರಿಯಲ್ ಪಾರ್ಕ್, ಮೇಟಗಳ್ಳಿ ಪೋಸ್ಟ್, ಪ್ರೀತಿ ಗ್ರಾನೈಟ್ ಹತ್ತಿರ, ಕೆ.ಆರ್.ಎಸ್. ರಸ್ತೆ, ಮೈಸೂರು–570 016. ಕರೆ ಮಾಡಿ:
Mob: 8867064586

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194,9606783264

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಸೇಲ್ಸ್ ಮ್ಯಾನ್ ಕೆಲಸ ಮಾಡಲು ಅನುಭವವುಳ್ಳ ಹುಡುಗ ಹುಡುಗಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ, ESI+PF ಮತ್ತು ಇನ್ಸೆಂಟೀವ್ ಸೌಲಭ್ಯದೊಂದಿಗೆ ಗಾಂಧಿ ಸರ್ಕಲ್, ಮೈಸೂರು
9980620678
Call after 10:30 am

ಬೇಕಾಗಿದ್ದಾರೆ
ಹೊಸದಾಗಿ ಪ್ರಾರಂಭವಾಗಿರುವ ಸಂಸ್ಥೆಗೆ ಕನ್ನಡ ಓದಲು, ಬರೆಯಲು ಬರುವ ಹಾಗೂ Smart Phone Use ಮಾಡಬಲ್ಲ ಯುವತಿಯರು Office ಕೆಲಸಕ್ಕೆ ಬೇಕಾಗಿದ್ದಾರೆ. ವಯೋಮಿತಿ 18-29, ಸಂಬಳ: 7000-15000+ Incentive. ಕರೆಮಾಡಿ: (Vinu)
9632600206

WANTED
Marketing Executive for Fabrication & Rolling Shutter Strip Manufacturing Industry with or Without experience Salary as per Industrial Standard
8553307447

FOR RENT
3BHK North Facing 20x30 Duplex House Near to Kautilya School, Dattagalli Kanakadasanagar
9632020620

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ. ತರಬೇತಿಗಾಗಿ:
7406375196, 9880548596

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9108566022

WANTED FOR
Bhaskar Heart Centre

Post	Qualification
Receptionist	Degree / PUC
Marketing / PRO (M)	Degree / PUC
Staff Nurses (F)	GNM / ANM
Pharma Aid	PUC / Degree
Office Boy	SSLC

0821-2499188 / 9880186386

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
ಪ್ರತಿಷ್ಠಿತ ಸಸ್ಯಹಾರಿ ಹೋಟೆಲ್‌ಗೆ ಒಬ್ಬ ದೋಸೆ ಭಟ್ಟರು ಹಾಗೂ ಸೂಪರ್ ವೈಸರ್ ಬೇಕಾಗಿದ್ದಾರೆ. ಉಳಿಯಲು ವ್ಯವಸ್ಥೆ ಇದೆ.
9916206561

ನಿವೇಶನಗಳು ಮಾರಾಟಕ್ಕಿದೆ
ಬನ್ನೂರು ರಸ್ತೆಯಲ್ಲಿ ನಿವೇಶನಗಳು ಮಾರಾಟಕ್ಕಿವೆ. 30x40, 30x50, 40x50, 40x60 ಎಲ್ಲಾ ಅಳತೆಯ ನಿವೇಶನಗಳು ದೊರೆಯುತ್ತದೆ ನಿವೇಶನ ಮಾರುವವರು ಮತ್ತು ಕೊಳ್ಳುವವರು ಸಂಪರ್ಕಿಸಿ:
6363400519

40x60 Site at HEBBAL 2nd Stg
East Facing, MUDA, Commercial Site Price - 7800/sqft
Near Kitturu Rani Chennamma Circle,40 Feet Road
8660105902

SITES FOR SALE JP Nagar Ring Road
20 x 30 - 17 Lakhs
30 x 40 - 33 Lakhs
Near Gurur Bus Stop, Ramabainagar,Mysore.
DTCP approved (Corporation limits)
1.5 Kms from JP Nagar Ring Road
8660105902

ಮನೆ ಕಟ್ಟಿಸುವವರ ಗಮನಕ್ಕೆ
ನಿಮ್ಮ ಕನಸಿನ ಮನೆಯನ್ನು ಉತ್ತಮ ಗುಣಮಟ್ಟವುಳ್ಳ ಸಾಮಾಗ್ರಿಗಳೊಂದಿಗೆ ಚದುರಡಿಗೆ Rs. 1670/- ರಂತೆ ಕಟ್ಟಿಕೊಡಲಾಗುವುದು. ಮುಂಗಡ ಹಣ ಪಾವತಿ ಮಾಡುವಂತಿಲ್ಲ. ಸಾಲದ ಸೌಲಭ್ಯ ಒದಗಿಸಲಾಗುವುದು.
Mob: 94821-27279

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

OWN YOUR DREAM MUDA
Approved Plots Near Ring Road
- 30 X 40 - 22 lakhs to 38 lakhs
- Sapthamathruka, Shreesha & KBL Green Woods Layout
- All Dimension Sites Available

NIDHI ESTATES 78923 28320 88927 48934

ಆಫೀಸ್ ಕೆಲಸ
ಯುವತಿಯರಿಗೆ ಹೆಲ್ತ್ ಕೇರ್ ಸಂಸ್ಥೆಗೆ ಕೆಲಸಕ್ಕೆ ಬೇಕಾಗಿದ್ದಾರೆ. ಕಂಪ್ಯೂಟರ್ ಅನುಭವವಿರಬೇಕು.
7483960098

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಮತ್ತು ಮೈಸೂರಿನಾದ್ಯಂತ ಪ್ರಸಿದ್ಧ MNC ಕಂಪನಿಗಳಿಗೆ ಕಂಪನಿ ಕೆಲಸಕ್ಕೆ ಆಫೀಸ್ ಕೆಲಸಕ್ಕೆ ಮತ್ತು ವರ್ಕ್ ಫ್ರಂ ಹೋಂ ಕೆಲಸಕ್ಕೆ ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ. ಯಾವುದೇ ಎಜುಕೇಷನ್ ಯಾವುದೇ Age ಲಿಮಿಟ್ ಇಲ್ಲ. Salary (18000 to 38000rs) ಇರುತ್ತದೆ. ಹೆಚ್ಚಿನ ಮಾಹಿತಿಗೆ ಇಂದೇ ಸಂಪರ್ಕಿಸಿ. H.R. Madam
9886365585
8296278130

RS CONSTRUCTION
Engineers & Contractors
ನಿಮ್ಮ ಕನಸಿನ ಮನೆಯನ್ನು ಉತ್ಕೃಷ್ಟ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ.
ದರ 1,80,000/– ಪ್ರತಿ ಚದರ
ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ ಇಂದೇ ಸಂಪರ್ಕಿಸಿ
9538575009
7019151884

Commercial Space for Rent
100 meter from Aishwarya Petrol Bunk junction, suitable for co-working space / Corporate office, carpet area 2676 sqfeet, ready to move with A/C furnished work cabins, 24 hours power backup, #843, Anugraha Building, 2nd Floor, Vijayanagar 1st Stage, Yoganarasimhaswamy temple, 100 feet road. Contact
9448052546, 6364219885

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
21–3–2024: ನೇಪಾಳ್ ಮುಕ್ತಿನಾಥ್, ಪಶುಪತಿನಾಥ್, ಕಠ್ಮಂಡು 14–3–2024: ಜಾರ್ಖಂಡ್, ಬಾಬಾ ಬೈದ್ಯನಾಥ್, ಕಾಶಿ, ಗಯಾ, ಪ್ರಯಾಗ್‌ರಾಜ್, ಅಯೋಧ್ಯ 21–5–24: ಚಾರ್‌ಧಾಮ್ ಯಾತ್ರ, ಕೇದಾರ್‌ನಾಥ್, ಬದ್ರಿನಾಥ್, ಗಂಗೋತ್ರಿ, ಯಮುನೋತ್ರಿ 11–7–2024: ಅಮರ್‌ನಾಥ್ ಯಾತ್ರ, 12–2–2024: ಪುರಿ ಜಗನ್ನಾಥ್, ಭುವನೇಶ್ವರ್, ಕೋನಾರ್ಕ್, ಚಂದ್ರಭಾಗ್ ಬೀಚ್. 21–2–2024: ರಾಜಸ್ಥಾನ 11 ದಿನಗಳ ಪ್ಯಾಕೇಜ್.
9591017782, 9964527782

Site with House for Sale
East facing site measuring 50x80, S/F MUDA site "B" Block, J.P. Nagar, Near Vidyaranyapura Police Station for sale. No brokers only direct purchasers, full cheque payment only. Contact between 10 am to 8 pm only. *For inspection please contact:*
Mob: 9620794823, 9379322274, 9036194909

ಕೆಲಸಕ್ಕೆ ಬೇಕಾಗಿದ್ದಾರೆ
ವಿದ್ಯಾರ್ಹತೆ: 7th, 10th, SSLC, ITI, PUC, Diploma, Any Degree (Pass or Fail). ಸ್ಯಾಲರಿ: 18,000 – 30,000. ಪುರುಷ ಅಭ್ಯರ್ಥಿಗಳಿಗೆ ಮಾತ್ರ ತರಬೇತಿ ಸಮಯದಲ್ಲಿ ವೇತನ ಕೊಡಲಾಗುವುದು. ವಯಸ್ಸು: 35 Below.
Mob: 9880151303

IMMEDIATE REQUIREMENT
Receptionist & Restaurant Manager
Hospital Marketing Executive
House Keeping Supervisor
Security Supervisor For Reputed Hotel & Hotel in Mysore
ಸಸ್ಯಾಹಾರಿ ಕುಟುಂಬಕ್ಕೆ ಮನೆಯಲ್ಲಿ ಅಡುಗೆ ಕೆಲಸ ಮತ್ತು ಮಕ್ಕಳನ್ನು ನೋಡಿಕೊಳ್ಳಲು ಮಹಿಳೆ ಬೇಕಾಗಿದ್ದಾರೆ.
8884339446,9731592288

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡುಗಳು – 10 ಮಂದಿ ಸ್ಥಳ: ನಜರ್‌ಬಾದ್, ಕಡಕೊಳ, ಗುಂಡ್ಲುಪೇಟೆ, ಇಲವಾಲ
2) ಹೌಸ್ ಕೀಪರ್ (ಮಹಿಳೆಯರು ಮಾತ್ರ) ಸ್ಥಳ: GSSS ಕಾಲೇಜ್, ಮೇಟಗಳ್ಳಿ
9686566261
9242406261

MUDA App Site
Kamadhenu Layout, Srirampura
30x40
East-South Corner Site Price: 68 Lakhs Within Ring Road
Mob: 8660105902

FOR SALE
1) 30x50 next to New R.T. Nagar.
2) 20x30, 30x40 Bogadi Road.
3) 2 & 3 BHK flats at Ramakrishnanagar.
4) 10, 20 guntas farm land KRS back water attach.
5) 20x30, 30x40 site Srirampura.
6) 40x70 house, Vidyaranyapuram.
PRAKRUTHI PROPERTIES
9538690359, 9035990359

Aquaguard & Kent Sales and Service
Service Charge: 300/-
9901200444

Properties for Sale
30x40 : Near Rotary, Dattagalli. Approx 85 Lakhs.
20x30: Near Bevinamara, Dattagalli. Approx 40 Lakhs.
30x60: Near Christ Public School, BEML 2nd Stage. Approx 78 Lakhs.
30x45: Near Kuvempunagar Complex. Approx. 1.40 Cr.
Mob: 9739257081

2.5 BHK HOME INTERIORS @ ₹ 2.5 Lacs*
Home Space Mart
TALK TO OUR DESIGN TEAM 8197310113

WANTED
1. Electrician (BE/Dip In Electrical)
2. Accountant (Female only) (Tally / GST Retuns) Filing)
7259016509
7259016512

Rent-Lease-Sale
ಕುವೆಂಪು ನಗರ, ಹೆಬ್ಬಾಳು, ವಿಜಯನಗರ, ಸಿದ್ದಾರ್ಥನಗರ ಸುತ್ತಮುತ್ತ ಬಾಡಿಗೆಗೆ–ಭೋಗ್ಯ–ಸೈಟು ಮನೆ ಕೊಳ್ಳಲು–ಮಾರಲು
7483894889

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಸಸ್ಯಾಹಾರಿ ಹೋಟೆಲ್‌ಗೆ ಅನುಭವವುಳ್ಳ ಸಿಬ್ಬಂದಿಗಳು ಬೇಕಾಗಿದ್ದಾರೆ.
1) ಕಿಚನ್ ಸೂಪರ್‌ವೈಸರ್
2) ಕ್ಯಾಷಿಯರ್. 3) ದೋಸೆ ಭಟ್ಟರು
4) ರುಬ್ಬುವವರು
5) ಕೌಂಟರ್ ಬಾಯ್ಸ್. ಸಂಪರ್ಕಿಸಿ:
9538556565, 9986565800

ತಕ್ಷಣ ಬೇಕಾಗಿದ್ದಾರೆ
ಫೀಲ್ಡ್ ಆಫೀಸರ್‌ಗಳು –2 ಸೂಪರ್‌ವೈಸರ್‌ಗಳು ಕೇರ್ಗಳ್ಳಿ, ಬಂಬೂಬಜಾರ್, ವಿಜಯನಗರದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ.
8971367078

HOUSES & OFFICE SPACE FOR RENT
@ Saraswathipuram, Kuvempunagar & Surroundings
SS PROPERTY SERVICES (Opp. Kuvempu School) S.S.Puram
9342125252

ನಿವೇಶನ ಮಾರಾಟಕ್ಕಿದೆ
30x50 ಪೂರ್ವ ದಿಕ್ಕು ಡಾ॥ ಶ್ರೀ ಶಿವರಾತ್ರಿ ರಾಜೇಂದ್ರ ನಗರ ಟಿ.ನರಸೀಪುರ ರಸ್ತೆ, ಮೈಸೂರು ರಾಷ್ಟ್ರೀಯ ಹೆದ್ದಾರಿ –766, ಲಲಿತ ಮಹಲ್ ಹೋಟೆಲ್‌ನಿಂದ 6 ಕಿಲೋಮಿಟರ್. ದರ–Rs.2250/- ಚದರ ಅಡಿಗೆ (ನಿವೇಶನದ ಮಾಲೀಕರಿಂದ ನೇರ ಮಾರಾಟ)
9620657853

Property for Sale
40x60 Corner Commerical Property For Sale in City Nanjumalige Circle Mysore Broker Excuse
9738980114

"ದೈವ ಕೃಪ"
ಎಲ್ಲಾ ಜನಾಂಗದ ಎಲ್ಲಾ ವಿದ್ಯೆಯ ಎಲ್ಲಾ ಕೆಲಸದ ತಮಿಳ್. ತೆಲುಗು, ಅರಸು ಮರಾಠ ಹಾಗೂ ಗ್ರಾಮಾಂತರ ಹಳ್ಳಿಗಳ ವಧು ವರರಿಗೆ 40 ವರ್ಷ ಮೇಲ್ಪಟ್ಟವರಿಗೂ ಕೂಡ ಮತ್ತು ವಿಧವೆ, ವಿಧುರ ವಿಚ್ಛೇದಿತ ಹಾಗೂ Caste No bar ರವರಿಗೆ ಕೂಡಲೇ ಸಂಪರ್ಕಿಸಿ: ಮೈಸೂರು–16
9902802154

ತಕ್ಷಣ ಬೇಕಾಗಿದ್ದಾರೆ
RSR Security Services ಅನುಭವವುಳ್ಳ ಸೆಕ್ಯೂರಿಟಿಗಾರ್ಡ್ ಸೂಪರ್ ವೈಸರ್‌ಗಳುS/o ಬೇಕಾಗಿದ್ದಾರೆ. ವಿದ್ಯಾರ್ಹತೆ SSLC, PUC, BA, Diploma Any Degree ಮಾಡಿರುವವರು ವೇತನ S/G-19000/- S/Sup-20500/-, S/o-23000/- L/G-19000/- Valet Driver-20500/- ಸಂಬಳವಿರುತ್ತದೆ. ಕೆಲಸದ ಸಮಯ: 8 ಗಂಟೆಗಳು ಹಾಗೂ OT ಸೌಲಭ್ಯವಿರುತ್ತದೆ. ವಯೋಮಿತಿ 18 ರಿಂದ 45ರ ಒಳಪಟ್ಟಿರುವವರು ESI, PF & Week Off ಹಾಗೂ GH ಸೌಲಭ್ಯವಿರುತ್ತದೆ. ಕೆಲಸ ಮಾಡುವ ಸ್ಥಳ: NEXUS MALL, N.H.HOSPITAL: Dinesh
7760097320,8884431722
9481782571

WANTED
Chinese Chef Opp. Infoys, Hebbal, Mysore
9036646672
8587038058

30x40 ಮನೆ / ಸೈಟು ಬೇಕಾಗಿದೆ
ಆಲನಹಳ್ಳಿ ಲೇಔಟ್, ಶಕ್ತಿನಗರ, ಬಿಲ್ಡರ್ ಲೇಔಟ್, ಜೆ.ಎಸ್.ಎಸ್ ಲೇಔಟ್ ವಿದ್ಯಾಶಂಕರ ಲೇಔಟ್, ದೇವೇಗೌಡ ಸರ್ಕಲ್ ಸುತ್ತಮುತ್ತ ಬೇಕಾಗಿದೆ.
9900163626

ಬೇಕಾಗಿದ್ದಾರೆ
ಫರ್ನಿಶಿಂಗ್ ಅಂಗಡಿಯಲ್ಲಿ Billing & Telecaller ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. 1 Year Tally Experience Salary - 12K to 15K Address : Akbar Road, Near Ashoka Road
9916514950

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಮತ್ತು ಸೂಪರ್‌ವೈಸರ್ ಬೇಕಾಗಿದ್ದಾರೆ. ನಂಜನಗೂಡು & ಕಡಕೊಳ ಇಂಡಸ್ಟ್ರಿಯಲ್ ಏರಿಯಾದಲ್ಲಿ ವಯಸ್ಸು: 20 ರಿಂದ 45 ಸಂಬಳ: 15000 to 17500
9611232188
9606959660

21,000 Sqmts ALIENATED LAND FOR SALE/LEASE
Sringapatna Main Road, Rs. 1,500/Sqmts Suitable for Bar, Petrol Bunk and All Commercial Purpose
7892407735

ತಕ್ಷಣ ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ–ಯುವತಿಯರು ಬೇಕಾಗಿದ್ದಾರೆ. Salary: 13,000-21000 + ESI, PF ವಿದ್ಯಾರ್ಹತೆ: 10th, PUC, ITI Diploma And Any Degree
9035734821

ಕೆಲಸಕ್ಕೆ ಬೇಕಾಗಿದ್ದಾರೆ
ಕೃಷಿ ಅಭಿವೃದ್ಧಿ ಅಧಿಕಾರಿಗಳು
ರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಮಾಡಲು ನುರಿತ ಕೃಷಿ ಅಭಿವೃದ್ಧಿ ಅಧಿಕಾರಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, PUC/ ಪದವಿ ಕೆಲಸ: ಕೃಷಿ ಕ್ಷೇತ್ರ ಅಭಿವೃದ್ಧಿ (Field Works) ಸಂಬಳ: 16000 ರಿಂದ 25000 ರೂ.ಗಳು ಅನುಕೂಲತೆಗಳು: PF, ESI, Insurance ವಿಜಯ ಪ್ರಕಾಶ್, ಸೂಚನೆ: (ದ್ವಿಚಕ್ರ ಹಾಗೂ ಪರವಾನಗಿ ಕಡ್ಡಾಯ)
9663906666

ತಕ್ಷಣ ಬೇಕಾಗಿದ್ದಾರೆ
ವಯಸ್ಸಾದ ಪಾರ್ಶ್ವವಾಯು ಪೀಡಿತ ಮಹಿಳೆಯರನ್ನು ನೋಡಿಕೊಳ್ಳಲು ಅನುಭವವಿರುವ ಹೋಂ ನರ್ಸ್ ಮಹಿಳೆಯರು ಬೇಕಾಗಿದ್ದಾರೆ. ವಯಸ್ಸು : 45 ವರ್ಷದ ಒಳಗಿರಬೇಕು. ಉಚಿತ ಊಟ ವಸತಿಯೊಂದಿಗೆ ರೂ. 15000/ – ತಿಂಗಳ ಸಂಬಳ ನೀಡಲಾಗುವುದು. ಆಸಕ್ತರು ಸಂಪರ್ಕಿಸಿ:
8904288903

SHOP RENT
1100 Sqft. Commercial Shop in Ramakrishna Nagar I Block, Near ORCHIDS SCHOOL
9844775166

WANTED TEAHERS
MA, BEd in English Residential PE Teachers CBSC School in Mysore City
9483508822
8495983613

ಮನೆ ಮಾರಾಟಕ್ಕಿದೆ
40x70 W/N- 4HK 28 ಚದುರ ಮನೆ, Car ಪಾರ್ಕಿಂಗ್, JP ನಗರ, ರಿಂಗ್ ರಸ್ತೆ ನ್ಯಾಯಧೀಶರ ವಸತಿ ಗೃಹ ಹಿಂಭಾಗ, ಮಹದೇವಪುರ, ಮೈಸೂರು. ಬೆಲೆ: 120 ಲಕ್ಷ
9342288281

ಸೈಟು ಮಾರಾಟಕ್ಕಿದೆ
ಶ್ರೀರಾಂಪುರ LVR ಬಡಾವಣೆಯಲ್ಲಿ 40x60 E/F ಅಡಿ ರಸ್ತೆಯಲ್ಲಿದೆ ರಿಂಗ್ ರೋಡಿನ ಒಳಭಾಗದಲ್ಲಿದೆ. ಸಂಪರ್ಕಿಸಿ: (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
9342119411

ಕಳೆದಿದೆ
ಚೇತನ್ ಎನ್. # 14, 6ನೇ ಮೇನ್, 3ನೇ ಬ್ಲಾಕ್, ಜಯಲಕ್ಷ್ಮೀಪುರಂ, ಮೈಸೂರು ಇವರ ಮಂಜೂರಾತಿ ಪತ್ರ, ಕ್ರಯಪತ್ರ, ಕಂದಾಯ ಪತ್ರ, ಖಾತೆ ವರ್ಗಾವಣೆ ಪತ್ರ ಕಳೆದಿದೆ ಸಿಕ್ಕಿದವರು ಸಂಪರ್ಕಿಸಿ:
8553246599

HOUSE FOR LEASE
Newly Built 2BHK Independent House, Fully Furnished with Solar & UPS @ Lalithadri Nagar, Near Ring Road, Behind Indian Oil Petrol Bunk
9964414484

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. (ಕನ್ನಡ ಮಾತನಾಡಬಲ್ಲವರು) ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ, ಸಂಬಳ–9000
8150005111

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ ಉಚಿತ ಊಟ ವಸತಿಯೊಂದಿಗೆ 16000 ರಿಂದ 20000ವರೆಗೆ
7411304176,7411304177

40x30 MUDA ಖಾತೆಯುಳ್ಳ ಸೈಟು ಮಾರಾಟಕ್ಕಿದೆ
29 ಲಕ್ಷಗಳು ಯಶಸ್ವಿನಿ ದೃಷ್ಟಿ ಎನ್‌ಕ್ಲೈವ್ ಜೆ.ಪಿ. ನಗರದಿಂದ 3 Km ಮೈಸೂರು
9742198093

WANTED
Required Office Attender (Male) Education : SSLC/PUCC Pass Age: 20 Yrs to 30 Yrs Must be Two Wheeler
SNS SECURITY SERVICES
380/D, 14/A, 2nd Floor, Krishna Vilasa Road, Mysore-570001
9606023463

100% ಕೆಲಸ
ಮೈಸೂರಿನ ಕೈಗಾರಿಕ ಪ್ರದೇಶಗಳಾದ ಹೂಟಗಳ್ಳಿ, ಮೇಟಗಳ್ಳಿ, ನಂಜನಗೂಡು, ಹೆಬ್ಬಾಳ ಮುಂತಾದ ಏರಿಯಾಗಳಲ್ಲಿರುವ ಕಂಪನಿಗಳಿಗೆ Production, Maintenace, Line incharge, Store Dept., Machine Operators, Helpers, Packers ಇತ್ಯಾದಿ ಹುದ್ದೆಗಳಿಗೆ. 7th, 10th, PUC, ITI (Any Trade), Degree (Pass/Fail ಆದವರು ಬೇಕಾಗಿದ್ದಾರೆ. ಸಂಬಳ: 16500/- 42000 (ESI+PF+OT) ಯೊಂದಿಗೆ T&C Apply
9164052361,6366141586

ತಕ್ಷಣ ಬೇಕಾಗಿದ್ದಾರೆ
BMH ಗಂಗೋತ್ರಿ & ಒಂಟಿಕೊಪ್ಪಲ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC & ಮೇಲ್ಪಟ್ಟು ಸಂಬಳ : 16000+W/o
9880727819
9620777819

MATCH MAKERS, BRIDE / GROOM
ವಧು/ವರರ ಆಯ್ಕೆಗೆ ಭೇಟಿಕೊಡಿ
ಎಲ್ಲಾ ಜಾತಿಯ ಶ್ರೀಮಂತ/ಮಧ್ಯಮವರ್ಗದ ವಧುಗಳು/ವರರ Govt Job, Private Job, ಸ್ವಂತ/ಪ್ರಗತಿಪರರು/ ವ್ಯಾಪಾರಸ್ಥರು, ಡಾಕ್ಟರ್, ಇಂಜಿನಿಯರ್, ಎಲ್ಲಾ ವಿದ್ಯಾಭ್ಯಾಸದವರು ಕರ್ನಾಟಕದಾದ್ಯಂತ ಇರುವ ಲಕ್ಷಾಂತರ ಹೆಣ್ಣು/ಗಂಡುಗಳ ಆಯ್ಕೆಗೆ ಮೊದಲನೇ ಮದುವೆ ಡೈವೋರ್ಸಿಗಳು, ವಿಧವೆ/ವಿಧುರರ ಲೈಫ್ ಪಾರ್ಟನರ್ ಗಾಗಿ ಸ್ವಂತಂತ್ರರಿಗೆ/ಒಂಟಿ ಇರುವವರ ಮದುವೆಗೆ ನಮ್ಮ ಕಛೇರಿಗೆ ನೇರ ಭೇಟಿ ನೀಡಿ.
7975728012

ಉಚಿತ ಮದ್ಯವರ್ಜನ ಶಿಬಿರ
ಮೈಸೂರಿನ ಶ್ರೀರಾಂಪುರದಲ್ಲಿರುವ ಚೈತನ್ಯ ಫೌಂಡೇಷನ್ ವತಿಯಿಂದ ಜ.24 ರಿಂದ ಫೆ.13 ರವರೆಗೆ 21 ದಿನಗಳ ಕಾಲ 5ನೇ ಉಚಿತ ಕುಡಿತ ಮತ್ತು ಮಾದಕ ವಸ್ತುಗಳ ಚಟ ಬಿಡಿಸುವ ಶಿಬಿರ ನಡೆಯಲಿದೆ. ಶಿಬಿರದಲ್ಲಿ ಊಟ, ವಸತಿಯೊಂದಿಗೆ ವೈದ್ಯರಿಂದ ಚಿಕಿತ್ಸಾ ಸೌಲಭ್ಯ, ಯೋಗ, ಧ್ಯಾನದೊಂದಿಗೆ ಆಪ್ತಸಮಾಲೋಚನೆ ಸಿಗಲಿದೆ.
9164469570
6361744190

ಅನುಬಂಧ ಮ್ಯಾರೇಜಸ್
ವಧುವರರನ್ನು ಹುಡುಕಲು ಸಹಾಯ ಬೇಕೇ? ನಮಗೆ ಕರೆಮಾಡಿ
6361740552
anubanda.com

ಶ್ರೀ ಪುಟ್ಟಸ್ವಾಮಿ ಚಿಟ್ ಫಂಡ್ಸ್ ಪ್ರೈವೇಟ್. ಲಿಮಿಟೆಡ್
"ಸರ್ಕಾರದಿಂದ ಮಾನ್ಯತೆ ಪಡೆದಿದೆ"
1 ಲಕ್ಷದಿಂದ 10 ಲಕ್ಷದವರೆಗಿನ ಚೀಟಿಗಳು ಪ್ರಾರಂಭವಾಗಿದೆ. ಸಮಯ: ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
8747965423

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಒಂದನೇ ಪುಟದಿಂದ

ವರ್ಷಾಂತ್ಯಕ್ಕೆ ಪೂರ್ಣ

ಈ ಸಂದರ್ಭದಲ್ಲಿ ದಾಖಲಾತಿ ಪಡೆಯಲು ಕೆಲವರು ವಸೂಲಿಗಿಳಿಯುತ್ತಾರೆ. ಇದರಿಂದ ಜನ ಸಾಮಾನ್ಯರು ಶೋಷಣೆಗೊಳಗಾಗುತ್ತಾರೆ. ಇದನ್ನು ತಪ್ಪಿಸಿ ಕಂದಾಯ ಇಲಾಖೆಯಲ್ಲಿ ಸುಧಾರಣೆ ತರಲು ಸರ್ಕಾರ ಈ ಕ್ರಮ ಕೈಗೊಂಡಿದೆ ಎಂದು ಕೃಷ್ಣಭೈರೇಗೌಡ ತಿಳಿಸಿದರು. ಈ ಹಿನ್ನೆಲೆಯಲ್ಲಿ ಕಂದಾಯ ಇಲಾಖೆಯಲ್ಲಿರುವ ಆಸ್ತಿಗಳ ದಾಖಲಾತಿಗಳನ್ನು ಡಿಜಿಟಲೀಕರಣ ಮಾಡಲಾಗುವುದು. ಇದರಿಂದ ಆಸ್ತಿಗಳ ದಾಖಲಾತಿ ಕಳೆದು ಹೋಗುವುದಿಲ್ಲ. ಜೊತೆಗೆ ಅಕ್ರಮವಾಗಿ ತಿದ್ದುವುದರಿಂದ ಮುಕ್ತ ಮಾಡಬಹುದು. ಎಲ್ಲಕ್ಕಿಂತ ಮುಖ್ಯವಾಗಿ ದಾಖಲಾತಿಗಳಿಗೆ ಜನರು ಸರ್ಕಾರಿ ಕಚೇರಿಗೆ ಅಲೆಯುವುದು ತಪ್ಪುತ್ತದೆ. ಆಸ್ತಿಗಳ ಡಿಜಿಟಲೀಕರಣ ಮಾಡಿದರೆ ಜನರು ತಮ್ಮ ಆಸ್ತಿಗಳ ದಾಖಲಾತಿಗಳನ್ನು ಆನ್ ಲೈನ್ ನಲ್ಲಿ ನೋಡಬಹುದು ಹಾಗೂ ಪಡೆಯಬಹುದು. ಕಂದಾಯ ಇಲಾಖೆಯಲ್ಲಿ ಸುಧಾರಣೆ ತರಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ಮೇರೆಗೆ ಈ ಕಾರ್ಯ ಕೈಗೊಳ್ಳಲಾಗಿದೆ ಎಂದು ಕೃಷ್ಣಭೈರೇಗೌಡ ಸ್ಪಷ್ಟಪಡಿಸಿದರು.

ಕಾಲಮಿತಿಯಲ್ಲಿ ಪ್ರಕರಣ ಇತ್ಯರ್ಥ: ಡಿಸಿ ಕೋರ್ಟ್, ಎಸಿ ಕೋರ್ಟ್ ಹಾಗೂ ತಹಶೀಲ್ದಾರ್ ಕೋರ್ಟ್‌ನಲ್ಲಿ ಸಾವಿರಾರು ಪ್ರಕರಣ ಇತ್ಯರ್ಥವಾಗದೆ ಬಾಕಿ ಉಳಿದಿವೆ. ಡಿಸಿ ಕೋರ್ಟ್ ಒಂದರಲ್ಲೆ 1 ವರ್ಷ ಮೇಲ್ಪಟ್ಟ 60 ಸಾವಿರ ಪ್ರಕರಣ ಇತ್ಯರ್ಥವಾಗದೆ ಬಾಕಿ ಉಳಿದಿದೆ. ಈ ಹಿನ್ನೆಲೆಯೊಲ್ಲಿ ಕಾಲ ಮಿತಿಯಲ್ಲಿ ಇವುಗಳನ್ನು ಪರಿಹಾರ ಮಾಡುವ ಅಭಿಯಾನ ಆರಂಭಿಸಲಾಗಿದೆ. ಈಗಾಗಲೇ ಕಳೆದ ನಾಲ್ಕು ತಿಂಗಳ ಅವಧಿಯಲ್ಲಿ 33 ಸಾವಿರ ಪ್ರಕರಣ ಇತ್ಯರ್ಥಪಡಿಸಿದ್ದು, ಇನ್ನು 27 ಸಾವಿರ ಪ್ರಕರಣ ಬಾಕಿ ಇದೆ ಎಂದು ಅಂಕಿ ಅಂಶಗಳ ಸಮೇತ ವಿವರಿಸಿದರು. ಕಂದಾಯ ಅದಾಲತ್ ಮೂಲಕ ಬಹಳಷ್ಟು ಪ್ರಕರಣ ಬಗೆಹರಿದಿದೆ. ಆದರೆ ಜಟಿಲವಾದ ಕೆಲವು ಪ್ರಕರಣ ಇನ್ನು ಇತ್ಯರ್ಥವಾಗಿಲ್ಲ. ಪೌತಿ ಖಾತೆ ಸಮಸ್ಯೆ ಕೂಡ ಇನ್ನು ಪರಿಹಾರವಾಗಿಲ್ಲ. ಈ ಹಿನ್ನೆಲೆಯಲ್ಲಿ 15 ದಿನದಲ್ಲಿ ಇವುಗಳನ್ನು ಪರಿಹಾರ ಮಾಡುವಂತೆ ಟಾರ್ಗೆಟ್ ನೀಡಲಾಗಿದ್ದು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಇನ್ನು ಪ್ರಾಯೋಗಿಕವಾಗಿ ಆರಂಭಿಸಲಾಗಿದೆ. ಅಲ್ಲಿನ ಯಶಸ್ಸಿನ ನಂತರ ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಕೂಡ ಇದನ್ನು ಕೈಗೆತ್ತಿಕೊಂಡು ಸಮಸ್ಯೆ ಪರಿಹಾರ ಮಾಡಲಾಗುವುದು ಎಂದು ಹೇಳಿದರು.

ಕೇಂದ್ರ ಸರ್ಕಾರದ ಬರ ಅಧ್ಯಯನ ತಂಡ ಕರ್ನಾಟಕದಲ್ಲಿ ಅಧ್ಯಯನ ಮಾಡಿ ನಾಲ್ಕು ತಿಂಗಳಾಯಿತು. ಆದರೆ ಈ ತನಕ ಹಣ ಬಿಡುಗಡೆ ಮಾಡಿಲ್ಲ. ಈ ಹಿನ್ನಲೆ ರಾಜ್ಯ ಸರ್ಕಾರವೇ ಬರ ಪರಿಹಾರ ನೀಡಲು 550 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದು, ಈಗಾಗಲೇ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಪರಿಹಾರದ ನಗದು ಪಾವತಿ ಮಾಡುವ ಪ್ರಕ್ರಿಯೆ ಆರಂಭವಾಗಿದೆ ಎಂದು ಕೃಷ್ಣಭೈರೇಗೌಡ ತಿಳಿಸಿದರು.

ಸಿಎಂ, ಡಿಸಿಎಂ ಆಗುವುದು ನಮ್ಮ ಕೈಯಲ್ಲಿಲ್ಲ

ಯಾರು, ಯಾವಾಗ ಸಿಎಂ ಹಾಗೂ ಡಿಸಿಎಂ ಆಗಬೇಕೆಂದು ಕಾಂಗ್ರೆಸ್ ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದು ಕಂದಾಯ ಸಚಿವ ಕೃಷ್ಣಭೈರೇಗೌಡ ತಿಳಿಸಿದರು.

ಸಿದ್ದರಾಮಯ್ಯ ಅವರೇ ಪೂರ್ಣಾವಧಿ ಸಿಎಂ ಆಗಿರುತ್ತಾರೆ ಎಂಬ ಡಾ.ಯತೀಂದ್ರ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ಇಂತಹ ತೀರ್ಮಾನ ಮಾಡುವುದು ಹೈಕಮಾಂಡೇ ಹೊರತು, ಇದು ನಮ್ಮ ಕೈಯಲ್ಲಿರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಇಂತಹ ಚರ್ಚೆಗಳಿಂದ ಜನ ಸಾಮಾನ್ಯರಿಗೆ ಯಾವುದೇ ಪ್ರಯೋಜನವಿಲ್ಲ. ಆದ ಕಾರಣ ಇಂತಹ ಚರ್ಚೆಗಿಂತ ಅಭಿವೃದ್ಧಿ ವಿಚಾರ ಚರ್ಚೆ ಆಗಲಿ ಎಂದು ಸಲಹೆ ನೀಡಿದರು. ಬಿಜೆಪಿಯವರು ಸಮಾಜದಲ್ಲಿ ಅಶಾಂತಿಯ ವಾತಾವರಣ ನಿರ್ಮಾಣ ಮಾಡಿ ರಾಜಕೀಯ ಲಾಭ ಪಡೆಯುತ್ತಾರೆ. ನಾವು ಮನಸು ಒಂದುಗೂಡಿಸಿದರೆ, ಅವರು ಮನಸು ಒಡೆಯುತ್ತಾರೆ ಎಂದು ಕೃಷ್ಣಭೈರೇಗೌಡ ದೂರಿದರು.

ಮಾ.25ರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ

ಎಸ್‌ಎಸ್‌ಎಲ್‌ಸಿ ವೇಳಾಪಟ್ಟಿ: ಮಾರ್ಚ್ 25–ಪ್ರಥಮ ಭಾಷೆ, ಮಾ.27–ಸಮಾಜ ವಿಜ್ಞಾನ, ಮಾ.30–ವಿಜ್ಞಾನ, ಏಪ್ರಿಲ್ 2–ಗಣಿತ, ಏ.4–ತೃತೀಯ ಭಾಷೆ.

ದ್ವಿತೀಯ ಪಿಯು ವೇಳಾಪಟ್ಟಿ: ಮಾ.1–ಕನ್ನಡ, ಅರೇಬಿಕ್, ಮಾ.4–ಗಣಿತ, ಶಿಕ್ಷಣ ಶಾಸ್ತ್ರ, ಮಾ.5–ರಾಜ್ಯಶಾಸ್ತ್ರ, ಸಂಖ್ಯಾಶಾಸ್ತ್ರ, ಮಾ.6–ಮಾಹಿತಿ ತಂತ್ರಜ್ಞಾನ, ರೀಟೈಲ್, ಹೆಲ್ತ್ ಕೇರ್, ಆಟೋ ಮೊಬೈಲ್, ಮಾ.7–ಇತಿಹಾಸ, ಭೌತಶಾಸ್ತ್ರ, ಮಾ.9–ಐಚ್ಛಿಕ ಕನ್ನಡ, ಲೆಕ್ಕಾಶಾಸ್ತ್ರ, ಭೂಗರ್ಭಶಾಸ್ತ್ರ, ಗೃಹ ವಿಜ್ಞಾನ, ಮಾ.11–ತರ್ಕಶಾಸ್ತ್ರ, ವ್ಯವಹಾರ ಅಧ್ಯಯನ, ಮಾ.13 – ಇಂಗ್ಲಿಷ್, ಮಾ.15–ಹಿಂದೂಸ್ತಾನಿ ಸಂಗೀತ, ಮನಃಶಾಸ್ತ್ರ, ರಸಾಯನಶಾಸ್ತ್ರ, ಮೂಲ ಗಣಿತ, ಮಾ.16–ಅರ್ಥಶಾಸ್ತ್ರ, ಮಾ. 18–ಭೂಗೋಳಶಾಸ್ತ್ರ, ಜೀವಶಾಸ್ತ್ರ, ಮಾ.20– ಸಮಾಜಶಾಸ್ತ್ರ, ವಿದ್ಯುನ್ಮಾನಶಾಸ್ತ್ರ, ಗಣಕ ವಿಜ್ಞಾನ, ಮಾ.21–ತಮಿಳು, ತೆಲುಗು, ಮಲಯಾಳಂ, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್, ಮಾ.22–ಹಿಂದಿ

ಅನಿರ್ದಿಷ್ಟಾವಧಿ ಲಾರಿ ಮುಷ್ಕರ ಆರಂಭ



ಮೈಸೂರಿನ ಹಳೇ ಆರ್‌ಎಂಸಿ ಮಾರುಕಟ್ಟೆಯಲ್ಲಿ ಮೈಸೂರು ಜಿಲ್ಲಾ ಲಾರಿ ಮಾಲೀಕರು ಮತ್ತು ಚಾಲಕರ ಒಕ್ಕೂಟದ ಉಪಾಧ್ಯಕ್ಷ ಅಬ್ದುಲ್ ಖಾದರ್ ಶಾಹಿದ್ ಪತ್ರಿಕಾಗೋಷ್ಠಿ ನಡೆಸಿದರು.

ಆ ವೃತ್ತಿಯನ್ನೇ ತೊರೆಯುತ್ತಾರೆ. ಹಾಗಾದಲ್ಲಿ ಸರಕು ಸಾಗಣೆ ಮಾಡುವವರ್ಯಾರು, ಲಾರಿ, ಟ್ರಕ್ ಮಾಲೀಕರ ಪರಿಸ್ಥಿತಿ ಏನಾಗಬೇಕು ಎಂದು ಪ್ರಶ್ನಿಸಿದ ಅವರು, ಅಪಘಾತ ಎಂಬುದು ಅನಿರೀಕ್ಷಿತವಾಗಿ ಸಂಭವಿಸುವಂತಹದ್ದು. ಆದ್ದರಿಂದ ಈ ನೂತನ ಕಾಯ್ದೆಯನ್ನು ಕೈಬಿಡಬೇಕೆಂದು ಆಗ್ರಹಿಸಿ ಇಂದು(ಜ.17) ಮಧ್ಯರಾತ್ರಿಯಿಂದ ಅನಿರ್ದಿಷ್ಟ ಕಾಲ ಮುಷ್ಕರ ನಡೆಸಲು ನಿರ್ಧರಿಸಿದ್ದೇವೆ ಎಂದರು.

ವಾಹನ ರಿಪೇರಿ ಮಾಡುವ ಮೆಕ್ಯಾನಿಕ್‌ಗಳು, ಸರಕು ಸಾಗಣೆ ವಾಹನ, ಟ್ರಕ್, ರೈಲ್ವೇ ಗೂಡ್ಸ್‌ಶೆಡ್, ಇಂಧನ ಸಾಗಣೆ ಟ್ಯಾಂಕರ್, ಕೆಎಫ್‌ಸಿ ಸಾಗಣೆ ವಾಹನ ಚಾಲಕರು ಸೇರಿದಂತೆ ಇನ್ನಿತರ ವಾಹನ ಚಾಲಕರು ಹಾಗೂ ಮಾಲೀಕರೂ ಸಹ ಮುಷ್ಕರದಲ್ಲಿ ಪಾಲ್ಗೊಳ್ಳಲಿದ್ದು, ಸರ್ಕಾರ ಈ ಕಾಯ್ದೆಯನ್ನು ಹಿಂಪಡೆಯುವವರೆಗೂ ಮುಷ್ಕರ ಮುಂದುವರೆಸುತ್ತೇವೆ ಎಂದು ಶಾಹಿದ್ ತಿಳಿಸಿದರು. ಅಗತ್ಯ ವಸ್ತುಗಳಾದ ಪಡಿತರ, ಡೀಸೆಲ್, ಪೆಟ್ರೋಲ್, ಸೀಮೆಎಣ್ಣೆ ಸಾಗಣೆ ವಾಹನ ಚಾಲಕರಿಗೆ ನಮ್ಮ ಮುಷ್ಕರದಲ್ಲಿ ಪಾಲ್ಗೊಳ್ಳಬೇಡಿ ಎಂದು ನಾವೇ ಸಲಹೆ ನೀಡಿದೆವಾದರೂ, ನಮ್ಮ ವಾಹನ ಮಾಲೀಕರು ನಮ್ಮ ಹೆಸರಿನಲ್ಲಿ 10 ಲಕ್ಷ ರೂ. ಹಣ ಠೇವಣಿ ಮಾಡಿದರೆ ನಾವು ಮುಷ್ಕರದಲ್ಲಿ ಪಾಲ್ಗೊಳ್ಳದೇ ಕೆಲಸ ಮಾಡುತ್ತೇವೆ ಎಂದು ಹೇಳಿ ನಮಗೆ ಬೆಂಬಲ ನೀಡುತ್ತೇವೆಂದು ಬಂದಿದ್ದಾರೆ ಎಂದು ಅವರು ತಿಳಿಸಿದರು. ಬಹುತೇಕ ಎಲ್ಲಾ ಬಗೆಯ ಸರಕು ಸಾಗಣೆ ವಾಹನಗಳೂ ಮುಷ್ಕರದಲ್ಲಿ ಪಾಲ್ಗೊಳ್ಳುತ್ತಿರುವುದರಿಂದ ನಾಳೆ(ಜ.18)ಯಿಂದ ಸರಕು ಸಾಗಣೆ ಪ್ರಕ್ರಿಯೆ ಸ್ಥಗಿತಗೊಳ್ಳುವ ಸಾಧ್ಯತೆ ಇದೆ. ಅದರಿಂದ ಉಂಟಾಗುವ ತೊಂದರೆಗೆ ಕೇಂದ್ರ ಸರ್ಕಾರವೇ ಹೊಣೆಯಾಗಬೇಕಿದೆ ಎಂದು ತಿಳಿಸಿದರು. ಪ್ರಕಾಶ್, ಶ್ರೀನಿವಾಸರಾವ್, ಹರ್ದರ್, ಎಲ್.ಶಂಕರ್, ವಿಶ್ವನಾಥ್, ಅಭಿಷೇಕ್, ಅಕ್ರಂ ಹಾಗೂ ಇತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಸಿದ್ದರಾಮಯ್ಯ ನೇತೃತ್ವದಲ್ಲೇ ಲೋಕಸಭೆ ಚುನಾವಣೆ

ಈ ಹೇಳಿಕೆ ಕಾಂಗ್ರೆಸ್‌ನಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಿದೆ. ಈ ಬಗ್ಗೆ ಪ್ರತಿ ಕ್ರಿಯಿಸಿದ ಡಿ.ಕೆ.ಶಿವಕುಮಾರ್ ಅವರು, ಅವರ(ಸಿದ್ದರಾಮಯ್ಯ) ನಾಯಕತ್ವ ದಲ್ಲೇ ಚುನಾವಣೆ ನಡೆಯುತ್ತೆ. ಅದರಲ್ಲಿ ಅನುಮಾನ ಬೇಡ ಎಂದರು. ನಮ್ಮ ಸರ್ಕಾರ ಬಲಿಷ್ಠವಾಗಿದೆ. ಅದನ್ನು ಅಲುಗಾಡಿಸಲು ಯಾರಿಂದಲೂ ಸಾಧ್ಯವಿಲ್ಲ. ಸಿದ್ದರಾಮಯ್ಯ ನಮ್ಮ ರಾಜ್ಯದ ಮುಖ್ಯಮಂತ್ರಿ. ನಾನು ಕೆಪಿಸಿಸಿ ಅಧ್ಯಕ್ಷನಾಗಿದ್ದೇನೆ. ನಾವಿಬ್ಬರು ಸೇರಿ ಒಟ್ಟಿಗೆ ಚುನಾವಣೆ ಮಾಡುತ್ತೇವೆ. ಆದ್ರೆ, ಅವರ ನಾಯಕತ್ವದಲ್ಲೇ ಚುನಾವಣೆ ನಡೆಯುತ್ತೆ ಅದರಲ್ಲಿ ಯಾವುದೇ ಅನುಮಾನ ಬೇಡ ಎಂದು ಸ್ಪಷ್ಟಪಡಿಸಿದರು. ಸಿದ್ದರಾಮಯ್ಯ 5 ವರ್ಷ ಸಿಎಂ ಹೇಳಿಕೆಗೆ ಪ್ರತಿಕ್ರಿಯಿಸಿದ ಡಿಕೆಶಿ, ಆಸೆ ಪಡುವುದು, ಹೇಳೋದು, ಜನರಿಗೆ ಮನವಿ ಮಾಡುವುದು ಸಾಮಾನ್ಯ. ನಾನು ನನ್ನೂರಿಗೆ ಹೋದಾಗ ನನಗೆ ಶಕ್ತಿ ಕೊಡಿ ಎಂದು ಕೇಳುತ್ತೇನೆ. ಅದು ಸ್ವಾಭಾವಿಕ, ಬೇರೆ ರೀತಿ ಯಾಕೆ ಟ್ವಿಸ್ಟ್ ಮಾಡಬೇಕು. ಯತೀಂದ್ರ ಸೂಕ್ಷ್ಮ ವ್ಯಕ್ತಿ, ಉದ್ಭವ ಆಗುತ್ತಿರುವ ನಾಯಕ. ನಾವು ಅವರಿಗೆ ಸಹಕಾರ ಕೊಡೋಣ. ಬಿಜೆಪಿಯವರು ಅವರ ಪಕ್ಷವನ್ನ ಸರಿ ಮಾಡಿಕೊಳ್ಳಲಿ ಎಂದು ತಿರುಗೇಟು ನೀಡಿದರು.

ಹೈಕಮಾಂಡ್‌ಗೆ ಬಿಟ್ಟ ವಿಚಾರ

ಆಗೋದಿಲ್ಲ. ಅದನ್ನ ಹೈಕಮಾಂಡ್ ನವರು ತೀರ್ಮಾನ ಮಾಡ್ತಾರೆ ಎಂದರು. ಲೋಕಸಭೆ ಚುನಾವಣೆಗಾಗಿ 28 ಸಚಿವರ ಸಭೆಯನ್ನ ದೆಹಲಿಯಲ್ಲಿ ಮಾಡಿದ್ರು. ಒಂದೊಂದು ಕ್ಷೇತ್ರದ ಜವಾಬ್ದಾರಿ ಕೊಟ್ಟಿದ್ದಾರೆ. ನಾವು ಆ ಕ್ಷೇತ್ರ ಗೆದ್ದುಕೊಂಡು ಬರಬೇಕು ಎಂದರು. ಯತೀಂದ್ರ ಅವರ ಹೇಳಿಕೆ ನಮಗೆ ಗೊತ್ತಿಲ್ಲ. ಅವರ ಹೇಳಿಕೆಯನ್ನು ನಾನು ಗಮನಿಸಿಲ್ಲ. ಆದರೆ ನಮಗೆ ಜವಾಬ್ದಾರಿ ಕೊಟ್ಟಿದ್ದಾರೆ. 28 ಕ್ಷೇತ್ರ ಗೆಲ್ಲಿಸೋದಕ್ಕೆ ಸೂಚನೆ ಕೊಟ್ಟಿದ್ದಾರೆ ಎಂದರು.

ಮೈಸೂರು ನಗರದ ಎರಡು ರೈಲ್ವೆ ಅಂಡರ್‌ಪಾಸ್‌ಗೆ 107 ಕೋಟಿ ಬಿಡುಗಡೆ

ರೈಲ್ವೆ ಇಲಾಖೆ ಅಧಿಕಾರಿಗಳ ಸಭೆಯಲ್ಲಿ ಸಂಸದ ಪ್ರತಾಪ್ ಸಿಂಹ ಮಾಹಿತಿ



ಮೈಸೂರು, ಜ.17(ಬಿಎಲ್‌ಯು)– ಮೈಸೂರು ನಗರದ ಎರಡು ರೈಲ್ವೆ ಅಂಡರ್ ಪಾಸ್ ನಿರ್ಮಾಣಕ್ಕೆ ಯೋಜನೆ ರೂಪಿಸಿದ್ದು, ಕೇಂದ್ರ ಸರ್ಕಾರದಿಂದ ಈಗಾಗಲೇ 107 ಕೋಟಿ ರೂಪಾಯಿ ಹಣ ಬಿಡುಗಡೆ ಆಗಿದೆ ಎಂದು ಪ್ರತಾಪ್ ಸಿಂಹ ತಿಳಿಸಿದರು. ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ರೈಲ್ವೆ ಇಲಾಖೆಯ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಮೈಸೂರು ನಗರದ ಕೆಆರ್‌ಎಸ್ ರಸ್ತೆ (ಫಾಲ್ಕನ್ ಟೈರ್ಸ್ ಬಳಿ) ರೈಲ್ವೆ ಅಂಡರ್‌ಪಾಸ್ ಮಾಡಲು 62.30 ಕೋಟಿ ರೂಪಾಯಿ ಹಣ ಬಿಡುಗಡೆಯಾಗಿದೆ ಎಂದರು.

ನಗರದ ಕುಕ್ಕರಹಳ್ಳಿ ಕೆರೆ ಬಳಿಯಿಂದ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದವರೆಗೆ ಅಂಡರ್ ಪಾಸ್ (ಮೈಸೂರು– ನಂಜನಗೂಡು ಸೆಕ್ಷನ್) ನಿರ್ಮಾಣ ಮಾಡಲು 45.35 ಕೋಟಿ ರೂಪಾಯಿ ಬಿಡುಗಡೆಯಾಗಿದೆ. ಈ ಯೋಜನೆಗೆ ರಾಜ್ಯ ಸಚಿವ ಸಂಪುಟದಲ್ಲಿ ಅನುಮೋದನೆ ದೊರೆತ ನಂತರ ಟೆಂಡರ್ ಕರೆದು ಕಾಮಗಾರಿ ಆರಂಭಿಸಲಾಗುವುದು ಎಂದು ಹೇಳಿದರು.

ನಗರದ ಅಶೋಕಪುರಂನಲ್ಲಿ 30 ಕೋಟಿ ವೆಚ್ಚದಲ್ಲಿ ಫ್ಲಾಟ್‌ಫಾರಂ ಹಾಗೂ ಫುಟ್ ಬ್ರಿಡ್ಜ್ ನಿರ್ಮಾಣ ಸೇರಿದಂತೆ ಇತರೆ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸಲಾಗಿದೆ. ಇದರ ಜೊತೆಗೆ 6 ನೇ ಫ್ಲಾಟ್ ಫಾರಂನ್ನು ಹೊಸದಾಗಿ ನಿರ್ಮಿಸಲಾಗುವುದು. ಈ ಕಾಮಗಾರಿಗೆ ಟೆಂಡರ್ ಕರೆದಿದ್ದು, ಮುಂದಿನ 6 ತಿಂಗಳಲ್ಲಿ ನಿರ್ಮಾಣ ಕಾರ್ಯ ಪೂರ್ಣಗೊಳಿಸಲಾಗುವುದು ಎಂದು ಪ್ರತಾಪ್ ಸಿಂಹ ತಿಳಿಸಿದರು. ಪಿಎಂ ಜನ್‌ಮನ್ ಯೋಜನೆಯಲ್ಲಿ ಜೇನು ಕುರುಬ ಸಮುದಾಯಕ್ಕೆ ವಿವಿಧ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿದೆ. ಜೇನು ಕುರುಬರ ಹಾಡಿಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ರಸ್ತೆ ನಿರ್ಮಾಣ, ಮೊಬೈಲ್ ಆಸ್ಪತ್ರೆ, ಚೆಸ್ಕಾಂನಿಂದ ವಿದ್ಯುತ್ ಹಾಗೂ ಸೋಲಾರ್ ಸಂಪರ್ಕ, ಜಲ ಜೀವನ್ ಮಿಷನ್‌ನಲ್ಲಿ ಕೊಳವೆ ಬಾವಿ ಸೌಲಭ್ಯ, ಅಂಗನವಾಡಿಗಳ ಸ್ಥಾಪನೆ ಮತ್ತು ನಿರ್ವಹಣೆ, ಬಿಎಸ್‌ಎನ್‌ಎಲ್‌ನಿಂದ ಟವರ್‌ಗಳ ನಿರ್ಮಾಣ ಮಾಡಲಾಗುವುದು ಎಂದು ವಿವರಿಸಿದರು. ಮೂಲ ನಿವಾಸಿ ಬುಡಕಟ್ಟು ಸಮುದಾಯದ ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳನ್ನು ಸುಧಾರಿಸಲು ಪ್ರಧಾನಮಂತ್ರಿ ಪಿವಿಹೆಚ್‌ಜಿ ಅಭಿವೃದ್ಧಿ ಮಿಷನ್ ಆರಂಭಿಸಲಾಗಿದ್ದು, ಮನೆ ನಿರ್ಮಾಣಕ್ಕೆ 2.39 ಲಕ್ಷ ರೂಪಾಯಿ ನೀಡಲಾಗುತ್ತಿದೆ. ಇದಕ್ಕಾಗಿ ಮೈಸೂರಿನ ಹೆಚ್.ಡಿ.ಕೋಟೆಯಲ್ಲಿ 1,414, ಹುಣಸೂರಿನಲ್ಲಿ 935, ನಂಜನಗೂಡಿನಲ್ಲಿ 76, ಪಿರಿಯಾಪಟ್ಟಣದಲ್ಲಿ 687, ಕೊಡಗು ಜಿಲ್ಲೆಯ ವಿರಾಜಪೇಟೆಯಲ್ಲಿ 1,213 ಹಾಗೂ ಸೋಮವಾರಪೇಟೆಯಲ್ಲಿ 353 ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ ಎಂದು ಪ್ರತಾಪ್ ಸಿಂಹ ತಿಳಿಸಿದರು.

ನಕಲಿ ಮೈಸೂರು ಸ್ಯಾಂಡಲ್ ಸೋಪ್‌ನಲ್ಲಿ ರಾಜ್ಯ ಬಿಜೆಪಿ ನಾಯಕರ ಪಾಲೆಷ್ಟು!?

ಪ್ರಕರಣದ ಬಂಧಿತರಿಬ್ಬರು ಬಿಜೆಪಿ ಕಾರ್ಯಕರ್ತರು



ಪ್ರಿಯಾಂಕ್ ಖರ್ಗೆ

ಬೆಂಗಳೂರು, ಜ.17(ಕೆಎಂಶಿ)–ನಕಲಿ ಮೈಸೂರು ಸ್ಯಾಂಡಲ್ ಸೋಪ್ ತಯಾರಿಕೆಯಲ್ಲಿ ಬಿಜೆಪಿ ನಾಯಕರ ಪಾಲೆಷ್ಟು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್‌ಖರ್ಗೆ ಇಂದಿಲ್ಲಿ ಪ್ರಶ್ನಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವ ವಿಖ್ಯಾತ ಮೈಸೂರು ಸ್ಯಾಂಡಲ್ ಸೋಪ್‌ನ ನಕಲಿ ಉತ್ಪನ್ನಗಳ ಮಾರಾಟ ಪ್ರಕರಣ ಜನವರಿ ಮೊದಲ ವಾರ ಪತ್ತೆಯಾದ ನಂತರ ನಡೆದ ತನಿಖೆಯ ಎಫ್‌ಐಆರ್ ಪ್ರಕಾರ ರಾಕೇಶ್ ಜೈನ್ ಹಾಗೂ ಮಹಾವೀರ್ ಜೈನ್ ಎಂಬ ಇಬ್ಬರು ವ್ಯಕ್ತಿಗಳ ಮೇಲೆ ಪ್ರಕರಣ ದಾಖಲಾಗಿದ್ದು, ಇಬ್ಬರೂ ಪೊಲೀಸರ ವಶದಲ್ಲಿದ್ದಾರೆ.

ವಿಚಾರಣೆ ಸಂದರ್ಭದಲ್ಲಿ ಬಂಧಿತ ಇಬ್ಬರು ವ್ಯಕ್ತಿಗಳು ಬಿಜೆಪಿಯ ಸಕ್ರಿಯ ಕಾರ್ಯಕರ್ತರು ಎಂಬುದು ವ್ಯಕ್ತವಾಗಿದೆ. ನಕಲಿ ಮೈಸೂರು ಸ್ಯಾಂಡಲ್ ಸೋಪು ಮಾರಿರುವ ಅಕ್ರಮದಲ್ಲಿ ರಾಜ್ಯ ಬಿಜೆಪಿ ನಾಯಕರಿಗೆ ಎಷ್ಟು ಪಾಲು ಸಿಗುತ್ತಿದೆ ಎಂದು ಪ್ರಶ್ನಿಸಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷರು ಹಾಗೂ ವಿರೋಧ ಪಕ್ಷದ ನಾಯಕರು ಈ ಬಗ್ಗೆ ಉತ್ತರ ನೀಡಬೇಕು, ಇವರನ್ನೂ ರಾಮ ಭಕ್ತರು ಎಂದು ಹೇಳಿ ಬೀದಿಗಿಳಿದು ಹೋರಾಟ ಮಾಡುತ್ತೀರಾ ಅಥವಾ ಪಕ್ಷದಿಂದ ವಜಾ ಮಾಡಿ ರಾಜ್ಯದ ಜನರಿಗೆ ಉತ್ತರ ನೀಡುತ್ತೀರಾ ಎಂದರು.

ಅಗ್ನಿಪತ್ ಯೋಜನೆಯಡಿ ಆಯ್ಕೆ ಪರೀಕ್ಷೆಗಾಗಿ ಅರ್ಜಿ ಆಹ್ವಾನ

ಮೈಸೂರು, ಜ.17– ಭಾರತೀಯ ವಾಯುದಳದಲ್ಲಿ "ಅಗ್ನಿಪತ್" ಯೋಜನೆಯಡಿ "ಅಗ್ನಿವೀರ್" ವಾಯು ಪ್ರವೇಶಕ್ಕೆ ಭಾರತೀಯ ಅರ್ಹ ಅವಿವಾಹಿತ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಂದ ತಾಂತ್ರಿಕ ಮತ್ತು ತಾಂತ್ರಿಕೇತರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ಆನ್‌ಲೈನ್ ಮೂಲಕ ಆಯ್ಕೆ ಪರೀಕ್ಷೆಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯ ಅರ್ಹ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದ್ದು, ವಯೋಮಿತಿ 02–01–2004 ರಿಂದ 02–07–2007ರೊಳಗೆ ಜನಿಸಿದವರಾಗಿರಬೇಕು. ವಿಜ್ಞಾನದ ವಿಷಯದಲ್ಲಿ–ವಿದ್ಯಾರ್ಹತೆ ಪಿಯುಸಿ ತೇರ್ಗಡೆ ಹೊಂದಿರಬೇಕು. ಪಿಯುಸಿಯಲ್ಲಿ ಗಣಿತ, ಭೌತಶಾಸ್ತ್ರ, ಇಂಗ್ಲೀಷ್ ವಿಷಯಗಳಲ್ಲಿ ಕನಿಷ್ಠ ಶೇ.50 ಅಂಕ ಪಡೆದಿರಬೇಕು ಮತ್ತು ಇಂಗ್ಲೀಷ್‌ನಲ್ಲಿ ಕನಿಷ್ಠ ಶೇ.50 ಅಂಕಗಳೊಂದಿಗೆ ತೇರ್ಗಡೆ ಅಥವಾ 3 ವರ್ಷದ ಡಿಪ್ಲೋಮದಲ್ಲಿ ತೇರ್ಗಡೆ ಹೊಂದಿರಬೇಕು. ಅದರಲ್ಲಿ ಕನಿಷ್ಠ ಶೇ.50 ಅಂಕಗಳೊಂದಿಗೆ ತೇರ್ಗಡೆ ಮತ್ತು ಇಂಗ್ಲಿಷ್ ನಲ್ಲಿ ಕನಿಷ್ಠ ಶೇ.50 ಅಂಕಗಳೊಂದಿಗೆ ತೇರ್ಗಡೆ ಹೊಂದಿರಬೇಕು. ಅಥವಾ ಎರಡು ವರ್ಷಗಳ ವೃತ್ತಿಪರ ಶಿಕ್ಷಣದಲ್ಲಿ ಗಣಿತ, ಭೌತಶಾಸ್ತ್ರ,ವಿಷಯಗಳಲ್ಲಿ ಕನಿಷ್ಠ ಶೇ.50 ಅಂಕ ಪಡೆದಿರಬೇಕು ಇಂಗ್ಲಿಷ್ ನಲ್ಲಿ ಕನಿಷ್ಠ ಶೇ.50 ಅಂಕಗಳೊಂದಿಗೆ ತೇರ್ಗಡೆ ಹೊಂದಿರಬೇಕು.

ವಿಜ್ಞಾನೇತರ ವಿಷಯದಲ್ಲಿ– ಪಿಯುಸಿ ಯಾವುದೇ ವಿಷಯದಲ್ಲಿ ಕನಿಷ್ಠ ಶೇ.50 ಅಂಕ ಪಡೆದಿರಬೇಕು ಇಂಗ್ಲೀಷ್‌ನಲ್ಲಿ ಕನಿಷ್ಠ ಶೇ.50 ಅಂಕಗಳೊಂದಿಗೆ ತೇರ್ಗಡೆ ಹೊಂದಿರಬೇಕು. ಪುರುಷ ಅಭ್ಯರ್ಥಿಗಳಿಗೆ–ಎತ್ತರ 152.5 ಸೆಂ.ಮೀ. ತೂಕ ಎತ್ತರಕ್ಕೆ ಅನುಗುಣವಾಗಿ ಇರತಕ್ಕದ್ದು, ಮಹಿಳಾ ಅಭ್ಯರ್ಥಿಗಳಿಗೆ–ಎತ್ತರ 152 ಸೆಂ.ಮೀ. ತೂಕ ಎತ್ತರಕ್ಕೆ ಅನುಗುಣವಾಗಿ ಇರಬೇಕು.

ಅಭ್ಯರ್ಥಿಗಳು 17–01–2024 ರಿಂದ 06–02–2024ರೊಳಗೆ https://agnipathvayu.cdac.in ಮೂಲಕ ಅರ್ಜಿ ಸಲ್ಲಿಸಬೇಕು. ಮಾ.17 ರಿಂದ ಪರೀಕ್ಷೆಯು ಪ್ರಾರಂಭವಾಗಲಿದೆ.

ಹೆಚ್ಚಿನ ಮಾಹಿತಿಗಾಗಿ ದೂ.ಸಂಖ್ಯೆ: 0821–2489972 ಎನ್.ಆರ್.ಮೊಹಲ್ಲಾ ಮೈಸೂರು–07, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಆವರಣ, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಸಹಾಯಕ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕರು ತಿಳಿಸಲಾಗಿದೆ.

ರೈತರಿಗೆ ಒಂದು ದಿನದ ಕ್ಷೇತ್ರಾಧಾರಿತ ತರಬೇತಿ

ಮೈಸೂರು, ಜ.17– ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ವತಿಯಿಂದ ಜ.23 ರಂದು ಹೆಚ್.ಡಿ.ಕೋಟೆ ತಾಲೂಕಿನ ಕಸಬಾ ಹೋಬಳಿಯ ಸೊಳ್ಳೇಪುರಹಾಡಿ ಗ್ರಾಮದ ಪುನರ್ವಸತಿ ಕೇಂದ್ರದಲ್ಲಿ "ತೋಟಗಾರಿಕೆ ಮತ್ತು ರೇಷ್ಮೆ ಬೆಳೆಯಲ್ಲಿ ಹನಿ ನೀರಾವರಿ ಹಾಗೂ ರಸಾವರಿ ಪದ್ಧತಿಗಳ ಅಳವಡಿಕೆ" ವಿಷಯದ ಬಗ್ಗೆ ರೈತರು, ರೈತ ಮಹಿಳೆಯರಿಗೆ ಒಂದು ದಿನದ ಕ್ಷೇತ್ರಾಧಾರಿತ ತರಬೇತಿಯನ್ನು ಆಯೋಜಿಸಲಾಗಿದೆ.

ಆಸಕ್ತ ರೈತರು, ರೈತ ಮಹಿಳೆಯರು ತಮ್ಮ ಹೆಸರನ್ನು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಕೃಷಿ ಅಧಿಕಾರಿಗಳ ದೂ.9164397510ಗೆ ಕರೆ ಮಾಡಿ ತಮ್ಮ ಹೆಸರುಗಳನ್ನು ನೋಂದಾಯಿಸಬೇಕು. ಕೇವಲ 50 ರೈತರು, ರೈತ ಮಹಿಳೆಯರಿಗೆ ಮಾತ್ರ ಅವಕಾಶವಿದ್ದು, ಮೊದಲು ನೋಂದಣಿ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ ಎಂದು ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಉಪಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಕೃಷಿ ಕುರಿತು ವರದಿ ಮಾಡುವ ಪತ್ರಕರ್ತರು ಮೊದಲು ಕೃಷಿ ಬಗ್ಗೆ ತಿಳಿದಿರಬೇಕು



ಕೃಷಿ ಲೋಕದೊಳಗೆ ಪುಸ್ತಕದ ಕುರಿತ ವಿಚಾರ ಸಂಕಿರಣ ಮತ್ತು ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನಿ ಡಾ.ಎಂ.ಎನ್.ವೇಣುಗೋಪಾಲ್ ಮಾತನಾಡಿದರು.

ಕೃಷಿ ವಿಜ್ಞಾನಿ ಡಾ.ವಸಂತ ಕುಮಾರ್ ಸಲಹೆ

ಮೈಸೂರು, ಜ.17(ಜಿಎ)–ಪತ್ರಕರ್ತರು ಕೃಷಿಗೆ ಸಂಬಂಧಿಸಿದಂತೆ ವರದಿ ಮಾಡಬೇಕಾದರೆ ಮೊದಲು ಆ ವಿಷಯದ ಕುರಿತು ಮಾಹಿತಿಯನ್ನು ತಿಳಿದುಕೊಂಡಿರಬೇಕು. ತಪ್ಪು–ಸರಿ ಎಂಬ ಪರಿಕಲ್ಪನೆ ಇರಬೇಕು. ಸಮಾಜವನ್ನು ಹಾಳು ಮಾಡದೆ ಸರಿದಾರಿಗೆ ತರುವ ಜವಾಬ್ದಾರಿ ಪತ್ರಕರ್ತರದ್ದು ಎಂದು 'ಕೃಷಿ ಲೋಕದೊಳಗೆ' ಕೃತಿಯ ಲೇಖಕ ಹಾಗೂ ಕೃಷಿ ವಿಜ್ಞಾನಿ ಡಾ. ವಸಂತಕುಮಾರ್ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮಾನಸಗಂಗೋತ್ರಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗವು ಕೃಷಿ ಜ್ಞಾನ ವಿಜ್ಞಾನ ವೇದಿಕೆಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೃತಿ ಕೃಷಿ ಲೋಕದೊಳಗೆ ಪುಸ್ತಕದ ಕುರಿತು ವಿಚಾರ ಸಂಕಿರಣ ಮತ್ತು ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ರೈತ ಕಲ್ಪವೃಕ್ಷ, ಮಣ್ಣಿಗೆ ಜೀವ ಕೊಡುವುದೇ ಜೀವಾಮೃತ. ನಾವು ಎಷ್ಟೇ ದೊಡ್ಡ ಸ್ಥಾನದಲ್ಲಿ ಇದ್ದರೂ ರೈತರನ್ನು ಮರೆಯಬಾರದು ಎಂದ ಅವರು, ಪ್ರತಿಯೊಬ್ಬರಲ್ಲಿ ಒಬ್ಬ ಲೇಖಕ ಇದ್ದಾನೆ ಎಂಬುದು ನಮಗೆ ಗೊತ್ತಿರಲ್ಲ. ಪ್ರಯತ್ನಿಸಿದಾಗ ಪ್ರತಿಭೆ ಹೊರಬರುತ್ತದೆ. ಸಣ್ಣಪುಟ್ಟ ಲೇಖನಗಳನ್ನು ಬರೆಯುವ ಅಭ್ಯಾಸದಿಂದಲೇ ಪುಸ್ತಕವನ್ನು ಬರೆಯುವ ಸಾಮರ್ಥ್ಯ ಬರುತ್ತದೆ ಎಂದರು. ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ನಿವೃತ್ತ ಪ್ರಧಾನ ವಿಜ್ಞಾನಿ ಡಾ.ಎಂ.ಎನ್.ವೇಣುಗೋಪಾಲ್ ಮಾತನಾಡಿ, ಗೋಧಿಗೆ ತುಕ್ಕು ರೋಗ ಶತ್ರುವಾಗಿತ್ತು. ಅದೇ ರೀತಿ ಪ್ರತಿಯೊಂದು ಧಾನ್ಯಕ್ಕೂ ಬರುವ ರೋಗಗಳನ್ನು ತಡೆಯಲು ಪ್ರಯತ್ನಿಸಿ ಒಂದು ಹಂತಕ್ಕೆ ತಲುಪಿದ್ದೇವೆ ಎಂದರೆ ಅದು ಕೃಷಿ ವಿಜ್ಞಾನಿಗಳಿಂದ. ಸಂಪ್ರದಾಯದೊಂದಿಗೆ ವಿಜ್ಞಾನ ಬೆರೆತರೆ ಕೃಷಿಯಲ್ಲಿ ಹೆಚ್ಚು ಮುಂದುವರೆಯಬಹುದು. ಮಳೆಯನ್ನು ನಂಬಿ ಏನನ್ನೂ ಮಾಡಲಾಗುವುದಿಲ್ಲ. ಅನ್ನ ದಾಸೋಹ ಪಡೆದ ನಾವು ನಮ್ಮಲ್ಲಿರುವ ಜ್ಞಾನ ದಾಸೋಹವನ್ನು ಮಾಡಬೇಕು. ಯಾವುದೇ ಬೆಳೆಯನ್ನು ಬೆಳೆಯಲು ಅದನ್ನು ಮೊದಲು ತಿಳಿದುಕೊಂಡಿರಬೇಕು. ಆಗ ಮಾತ್ರ ಯಶಸ್ವಿ ಆಗಲು ಸಾಧ್ಯ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಪ್ರಸಾರಾಂಗದ ಮಾಜಿ ನಿರ್ದೇಶಕ ಪ್ರೊ. ಕೆ.ಟಿ.ಈರಪ್ಪ, ಹಿರಿಯ ಸಾಹಿತಿ ಡಾ. ಕೃಷ್ಣಮೂರ್ತಿ ಚಮರಂ, ಪತ್ರಕರ್ತ ಡಾ. ಅಮ್ಮಸಂದ್ರ ಸುರೇಶ್, ಮಾನಸಗಂಗೋತ್ರಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥೆ ಡಾ.ಎಂ.ಎಸ್.ಸಪ್ನ, ಡಾ. ಎನ್.ಮಮತಾ, ಪ್ರೊ. ಸಿ.ಕೆ.ಪುಟ್ಟಸ್ವಾಮಿ ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸ್ವಿಟ್ಜರ್ಲೆಂಡ್‌ನ ವಿಶ್ವ ಆರ್ಥಿಕ ಸಮಾವೇಶದಲ್ಲಿ ರಾಜ್ಯದಲ್ಲಿ 22 ಸಾವಿರ ಕೋಟಿ ಹೂಡಿಕೆ ಒಡಂಬಡಿಕೆ



ಎಂ.ಬಿ.ಪಾಟೀಲ್

ಬೆಂಗಳೂರು, ಜ.17(ಕೆಎಂಶಿ)– ಸ್ವಿಟ್ಜರ್ಲೆಂಡ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ಸಮಾವೇಶದಲ್ಲಿ ಪಾಲ್ಗೊಂಡಿರುವ ಕರ್ನಾಟಕ ಸರ್ಕಾರ, ವಿವಿಧ ಕಂಪನಿಗಳೊಂದಿಗೆ 22 ಸಾವಿರ ಕೋಟಿ ರೂ. ಹೂಡಿಕೆ ಪ್ರಸ್ತಾವನೆಯ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಿದೆ ಎಂದು ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಸಚಿವರು, ವೆಬ್‌ವರ್ಕ್ಸ್ ಕಂಪನಿ ಬೆಂಗಳೂರಿನಲ್ಲಿ ಸ್ಥಾಪಿಸಲಿರುವ 100 ಮೆಗಾವ್ಯಾಟ್ ಸಾಮರ್ಥ್ಯದ 20 ಸಾವಿರ ಕೋಟಿ ರೂ. ಬಂಡವಾಳ ಹೂಡಿಕೆಯ ಡೇಟಾ ಸೆಂಟರ್ ಪಾರ್ಕ್ ಯೋಜನೆ ಇದರಲ್ಲಿ ಸೇರಿದೆ ಎಂದಿದ್ದಾರೆ.

ಇದಲ್ಲದೆ ಮೈಕ್ರೋಸಾಫ್ಟ್, ಹಿಟಾಚಿ, ಲುಲು ಗ್ರೂಪ್, ಹ್ಯೂಲೆಟ್ ಪೆಕಾರ್ಡ್ (ಎಚ್.ಪಿ), ಹನಿವೆಲ್, ಐನಾಕ್ಸ್, ವೋಲ್ವೊ, ನೆಸ್ಲೆ, ಕಾಯಿನ್ ಬೇಸ್, ಟಕೇಡಾ ಫಾರ್ಮಾ, ಬಿಎಲ್ ಆಗ್ರೋ ಸೇರಿದಂತೆ ವಿವಿಧ ಕಂಪನಿಗಳೊಂದಿಗೆ 2,000 ಕೋಟಿ ರೂ. ಮೌಲ್ಯದ ಹೂಡಿಕೆಯ ತಿಳುವಳಿಕೆ ಪತ್ರಗಳಿಗೆ ಸಹಿ ಹಾಕಲಾಗಿದೆ. ಮೈಕ್ರೋಸಾಫ್ಟ್ ಕಂಪನಿ ಕೌಶಲ್ಯಾಭಿವೃದ್ಧಿ ಮತ್ತು ಸುಗಮ ಆಡಳಿತ ಉಪಕ್ರಮಗಳ ತರಬೇತಿ ಕೊಡಲಿದೆ, ಹಿಟಾಚಿ ಕಂಪನಿ ಕರ್ನಾಟಕದ ಗ್ರಾಮೀಣ ಭಾಗಗಳಲ್ಲಿ ಆರೋಗ್ಯ ಸೇವೆ, ಶಿಕ್ಷಣ ಮತ್ತು ಇ–ಗವರ್ನೆನ್ಸ್ ಕ್ಷೇತ್ರಗಳಲ್ಲಿ ಬಂಡವಾಳ ತೊಡಗಿಸಲಿದ್ದು, ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ, ಲುಲು ಸಮೂಹ ಸಂಸ್ಥೆ ಹಣ್ಣು ಮತ್ತು ತರಕಾರಿ ಸಂಸ್ಕರಣೆ ಕ್ಷೇತ್ರದಲ್ಲಿ ಹೂಡಿಕೆಗೆ ಉತ್ಸುಕವಾಗಿದೆ.

ಈ ಹೂಡಿಕೆಗಳಿಂದ ಉತ್ತರ ಕರ್ನಾಟಕದ ವಿಜಯಪುರ, ಕಲಬುರಗಿ ಸೇರಿದಂತೆ ಹಲವು ಭಾಗಗಳು ಮುಂಚೂಣಿಗೆ ಬರಲಿದ್ದು, ಯೋಜನೆಗಳಿಗೆ ಸರ್ಕಾರ ಸಂಪೂರ್ಣ ಸಹಕಾರ ನೀಡಲಿದೆ ಎಂದಿದ್ದಾರೆ.

ಮೈಕ್ರೋಸಾಫ್ಟ್ ಕಂಪನಿಯು ಡಿಜಿಟಲ್ ಉತ್ಪಾದಕತೆ, ಉದ್ಯಮಶೀಲತೆ ಮತ್ತು ಸಂವಹನಕ್ಕೆ ಸಂಬಂಧಿಸಿದಂತೆ 'ಮೈಕ್ರೋಸಾಫ್ಟ್ ರೈಸ್' ಡಿಜಿಟಲ್ ಸ್ಕಿಲ್ಲಿಂಗ್ ಸೌಲಭ್ಯ ಮೂಲಕ 70 ಗಂಟೆಗಳ ವರ್ಚ್ಯುಯಲ್ ತರಬೇತಿ ನೀಡಲಿದೆ. ಅಲ್ಲದೆ, ಅಭ್ಯರ್ಥಿಗಳಿಗೆ ಮೈಕ್ರೋಸಾಫ್ಟ್ ಟ್ರೈನಿಂಗ್ ಪ್ಲಾಟ್ ಫಾರಂ ಮೂಲಕ 150 ಗಂಟೆಗಳ ಹೆಚ್ಚುವರಿ ಕೌಶಲ್ಯಾಭಿವೃದ್ಧಿ ಪಠ್ಯ ಸಾಮಗ್ರಿ ಲಭಿಸಲಿದ್ದು, ರಾಜ್ಯದ ಯುವಜನರಿಗೆ ಕ್ಲೌಡ್, ಎಐ, ಸೈಬರ್ ಸೆಕ್ಯುರಿಟಿ ಕ್ಷೇತ್ರಗಳಲ್ಲಿ ಅವಕಾಶಗಳು ಸಿಗಲಿವೆ. ಹನಿವೆಲ್ ಕಂಪನಿಯು ಐಒಟಿ (ಇಂಟರ್ನೆಟ್ ಆಫ್ ಥಿಂಗ್ಸ್) ಮೂಲಕ ಸಂಚಾರ ನಿರ್ವಹಣೆ, ತ್ಯಾಜ್ಯ ನಿರ್ವಹಣೆ ಮುಂತಾದವುಗಳನ್ನು ನಿಭಾಯಿಸಲಿದೆ. ಲುಲು ಸಮೂಹ 300 ಕೋಟಿ ರೂ. ಹೂಡಿಕೆಯೊಂದಿಗೆ ವಿಜಯಪುರ ಜಿಲ್ಲೆಯಲ್ಲಿ ಆಹಾರ ಸಂಸ್ಕರಣೆ, ಟಕೇಡಾ ಫಾರ್ಮಾ ಬೆಂಗಳೂರಿನಲ್ಲಿ ಗ್ಲೋಬಲ್ ಕೆಪಾಸಿಟಿ ಸೆಂಟರ್ ತೆರೆಯಲು ಮುಂದೆ ಬಂದಿದೆ ಎಂದು ಪಾಟೀಲ್ ತಿಳಿಸಿದ್ದಾರೆ.

ಮೈಸೂರಲ್ಲಿ ರಸ್ತೆ ಸುರಕ್ಷತಾ ಜಾಗೃತಿ ಜಾಥಾ

ಮೈಸೂರು, ಜ.17(ಆರ್‌ಕೆ)–ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ಮೈಸೂರಿನ ವಿವಿಧೆಡೆ ಜನ ಜಾಗೃತಿಗಾಗಿ ಸರಣಿ ಜಾಥಾ ನಡೆದವು.

ಮೈಸೂರು ನಗರ ಸಂಚಾರ ಪೊಲೀಸ್, ಎನ್.ಆರ್. ಸಂಚಾರ ಠಾಣೆ ಹಾಗೂ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜು ವತಿಯಿಂದ ಕಾಲೇಜು ವಿದ್ಯಾರ್ಥಿಗಳು ಇಂದು ಪ್ರಮುಖ ರಸ್ತೆಗಳಲ್ಲಿ ಜಾಥಾ ನಡೆಸಿದರು. ಪ್ರಾಂಶುಪಾಲ ಎಂ.ಪ್ರಕಾಶ್ ಜಾಗೃತಿ ಜಾಥಾಗೆ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಅಶೋಕ ರಸ್ತೆ, ಫೌಂಟೆನ್ ಸರ್ಕಲ್, ಎಫ್‌ಟಿಎಸ್ ಸರ್ಕಲ್, ಸರ್ಕಾರಿ ಅತಿಥಿ ಗೃಹ ಉತ್ತರ ದ್ವಾರ, ಫೈವ್‌ಲೈಟ್ ಸರ್ಕಲ್, ಸೇಂಟ್ ಫಿಲೋಮಿನಾ ಚರ್ಚ್ ಮಾರ್ಗ ಸಾಗಿದ ಜಾಥಾವು ಮರಳಿ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಅಂತ್ಯಗೊಂಡಿತು.



ರಸ್ತೆ ಸಂಚಾರ ನಿಯಮಗಳನ್ನು ಪಾಲಿಸಿ, ಅಪಘಾತ ತಪ್ಪಿಸುವ ಮೂಲಕ ಅಮೂಲ್ಯ ಪ್ರಾಣ ರಕ್ಷಿಸುವಂತೆ ಜಾಥಾದಲ್ಲಿ ಪಾಲ್ಗೊಂಡಿದ್ದ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಘೋಷಣಾ ಫಲಕಗಳನ್ನು ಪ್ರದರ್ಶಿಸಿದರಲ್ಲದೆ, ಮಾಹಿತಿ ಪತ್ರಗಳನ್ನು ಸಾರ್ವಜನಿಕರಿಗೆ ವಿತರಿಸಿದರು.

ನಂತರ ಕಾಲೇಜಿನ ಅಲ್ಯೂಮ್ನಿ ಸಭಾಂಗಣದಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ, ಎನ್.ಆರ್. ಸಂಚಾರ ಠಾಣೆ ಇನ್ಸ್‌ಪೆಕ್ಟರ್ ರೇಖಾಬಾಯಿ ಅವರು ಸಂಚಾರ ನಿಯಮಗಳ ಪಾಲನೆ, ರಸ್ತೆ ಸುರಕ್ಷತೆ ಕುರಿತಂತೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು. ಉಪನ್ಯಾಸಕ ಡಾ. ದೊಡ್ಡಯ್ಯ, ಎನ್‌ಸಿಸಿ ಅಧಿಕಾರಿಗಳಾದ ಎಸ್.ಎಂ.ಮಧುಸೂದನ್, ಲೆಫ್ಟಿನೆಂಟ್ ಮಹೇಂದ್ರ ಎಲ್ಲಾ ವಿಭಾಗಗಳ ಮುಖ್ಯಸ್ಥರು, ಸಿಬ್ಬಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ವಿವಿ ಪುರಂ ಸಂಚಾರ ವತಿಯಿಂದ ವಿಜಯನಗರ 2ನೇ ಹಂತದ ಚಿಕ್ಕಮ್ಮ ಶಿಕ್ಷಣ ಸಂಸ್ಥೆಯಲ್ಲಿ ಸುತ್ತಲಿನ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಬಸ್ ಚಾಲಕರಿಗಾಗಿ ರಸ್ತೆ ಸುರಕ್ಷತಾ ಅರಿವು ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಅದೇ ರೀತಿ ರೋಟರಿ ಮೈಸೂರು ಸಹಯೋಗದಲ್ಲಿ ಹೆಬ್ಬಾಳಿನ ಅಭಿಷೇಕ್ ಸರ್ಕಲ್ ಬಳಿಯ ಶಿಷ್ಯರಣಿ ಶಾಲೆ ಹಾಗೂ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲೂ ಸಂಚಾರ ನಿಯಮ ಪಾಲಿಸುವ ಬಗ್ಗೆ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ, ವಿವಿ ಪುರಂ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಲವ ಅವರು ಭಾಗವಹಿಸಿ, ಉಪನ್ಯಾಸ ನೀಡಿದರು.

ಅತೀ ವೇಗ, ನಿರ್ಲಕ್ಷ್ಯತೆ, ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವುದು ಅಪಘಾತಕ್ಕೆ ಪ್ರಮುಖ ಕಾರಣವಾಗಿದ್ದು, ನಮ್ಮ ಬೇಜವಾಬ್ದಾರಿ ಚಾಲನೆಯಿಂದ ಏನೂ ತಪ್ಪು ಮಾಡದ ಅಮಾಯಕರು ಸಾವನ್ನಪ್ಪಬಹುದು. ಸಂಚಾರ ನಿಯಮಗಳನ್ನು ಚಾಚೂ ತಪ್ಪದೇ ಪಾಲಿಸುವ ಮೂಲಕ ಅಪಘಾತ ತಪ್ಪಿಸಿ, ಅಮೂಲ್ಯ ಪ್ರಾಣ ಉಳಿಸಬೇಕೆಂದು ಸಂಚಾರ ಎಸಿಪಿ ಪರಶುರಾಮಪ್ಪ ಸಲಹೆ ನೀಡಿದರು.

ಸ್ಮಶಾನ ಸೌಲಭ್ಯವಿಲ್ಲದೆ ಆಕ್ರೋಶಗೊಂಡ ಮಾದಿಗ ಸಮುದಾಯ

ತಾಲೂಕು ಕಚೇರಿ ಮುಂದೆ ಶವಸಂಸ್ಕಾರ ನಡೆಸಲು ನಿರ್ಧಾರ

ತಿ.ನರಸೀಪುರ, ಜ.17– ಸ್ಮಶಾನ ಸೌಲಭ್ಯಗಳಿಲ್ಲದ ಮಾದಿಗ ಸಮಾಜದವರು ವಾಸವಿರುವ ಗ್ರಾಮಗಳಲ್ಲಿ ಯಾವುದಾದರೂ ಮಾದಿಗ ಸಮಾಜದವರು ಸಾವು ಸಂಭವಿಸಿದರೆ, ತಾಲೂಕು ಕಚೇರಿ ಮುಂದೆ ಶವಸಂಸ್ಕಾರ ಮಾಡುವುದಾಗಿ ತಾಲೂಕು ಡಾ.ಬಾಬು ಜಗಜೀವನ ರಾಂ ಜನ ಕಲ್ಯಾಣ ಸಂಘದ ಅಧ್ಯಕ್ಷ ಮಲಿಯೂರು ಡಿ.ಶಂಕರ್ ಎಚ್ಚರಿಕೆ ನೀಡಿದ್ದಾರೆ.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಬುಧವಾರ ಕರೆಯಲಾಗಿದ್ದ ತಾಲೂಕಿನ 28 ಗ್ರಾಮಗಳ ಮಾದಿಗ ಸಮಾಜದ ಮುಖಂಡರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಾಲೂಕಿನ 30 ಗ್ರಾಮಗಳಲ್ಲಿ ಸುಮಾರು 24 ಸಾವಿರಕ್ಕೂ ಹೆಚ್ಚು ಮಾದಿಗ ಸಮಾಜದವರಿದ್ದು, 13 ಹಳ್ಳಿಗಳಲ್ಲಿ ಸ್ಮಶಾನ ಸೌಲಭ್ಯಗಳಿಲ್ಲ. ಸ್ಮಶಾನ ಸೌಕರ್ಯ ಕಲ್ಪಿಸಿಕೊಡುವಂತೆ ಆಗ್ರಹಿಸಿ ಕಳೆದ 35 ವರ್ಷಗಳಿಂದಲೂ ಸತತವಾಗಿ ಹೋರಾಟ ಮಾಡುತ್ತಾ ಬಂದಿದ್ದೇವೆ. ಆದರೆ ತಾಲೂಕು ಆಡಳಿತವಾಗಲೀ, ಜಿಲ್ಲಾಡಳಿತವಾಗಲಿ ಸಮಸ್ಯೆ ಬಗೆಹರಿಸಲು ಮುಂದಾಗಿಲ್ಲ. ಇನ್ನು ಮುಂದೆ ಮಾದಿಗ ಸಮುದಾಯವರು ಸಾವನ್ನಪ್ಪಿದರೆ ಹೆಣ ಹೊತ್ತು ತಂದು ತಾಲೂಕು ಕಚೇರಿ ಮುಂದೆ ಶವಸಂಸ್ಕಾರ ಮಾಡುತ್ತೇವೆ. ಈ ಸಂಬಂಧ ಇಂದು ನಡೆದ ಸಭೆಯಲ್ಲಿ ಸಮಾಜದ ಮುಖಂಡರು ಒಮ್ಮತದ ನಿರ್ಣಯ ಕೈಗೊಂಡಿದ್ದಾರೆ ಎಂದು ತಿಳಿಸಿದರು.



ತಿ.ನರಸೀಪುರ ಪಟ್ಟಣದಲ್ಲಿ ತಾಲೂಕು ಡಾ.ಬಾಬು ಜಗಜೀವನರಾಂ ಜನ ಕಲ್ಯಾಣ ಸಂಘದ ಆಶ್ರಯದಲ್ಲಿ ಕರೆಯಲಾಗಿದ್ದ ಮಾದಿಗ ಜನಾಂಗದ ಸಭೆಯಲ್ಲಿ ಸಂಘದ ಅಧ್ಯಕ್ಷ ಮಲಿಯೂರು ಡಿ.ಶಂಕರ್ ಮಾತನಾಡಿದರು.

ಬನ್ನೂರು ಪಟ್ಟಣದಲ್ಲಿ ಸ್ಮಶಾನ ಇದ್ದರೂ ರಸ್ತೆ ಇಲ್ಲ, ಮಾಕನಹಳ್ಳಿ ಗ್ರಾಮದಲ್ಲಿ ಸ್ಮಶಾನ ಇದೆ. ಆದರೆ ಅಲ್ಲಿಗೆ ಹೋಗಬೇಕಾದರೆ ಅಡ್ಡಹಳ್ಳ ಹತ್ತಿ ಇಳಿದು ಹೋಗಬೇಕು, ಇನ್ನು ನರೀಪುರದಲ್ಲಿ ಸ್ಮಶಾನವೇ ಇಲ್ಲ, ಮಂಗಿ ಪಚ್ಚನಹುಂಡಿಯಲ್ಲಿ ಸ್ಮಶಾನ ಕೊಟ್ಟಿದ್ದಾರೆ, ಆರ್‌ಟಿಸಿಯಲ್ಲೂ ನಮೂದಾಗಿದೆ.ಆದರೆ ಆ ಜಾಗಕ್ಕೆ ಕೇಸ್ ಹಾಕಿ ಹೈಕೋರ್ಟ್‌ನಲ್ಲಿದೆ. ಅಲ್ಲಿ ಶವ ಹೂಳಲು ಹೋದರೆ ಸವರ್ಣೀಯರು, ನಮ್ಮೊಂದಿಗೆ ಗಲಾಟೆ ಮಾಡುತ್ತಾರೆ, ನರೀಪುರದಲ್ಲಿ ನಾಲೆ ಮೇಲೆ ಹೆಣ ಹೂಳುತ್ತೇವೆಂದರೂ ಬಿಡದ ಹಿನ್ನೆಲೆಯಲ್ಲಿ ರಸ್ತೆಯಲ್ಲೇ ಹೂಳುವ ಸನ್ನಿವೇಶ ನಿರ್ಮಾಣವಾಗಿದೆ ಎಂದು ಶಂಕರ್ ಬೇಸರ ವ್ಯಕ್ತಪಡಿಸಿದರು.

ಪ್ರಗತಿಪರ ಸಂಘಟನೆಗಳ ಬೆಂಬಲ! : ಮಾದಿಗ ಸಮಾಜದವರಿಗೆ ಸ್ಮಶಾನ ಸೌಲಭ್ಯ ದೊರಕಿಸಿಕೊಡುವ ಸಂಬಂಧದ ಹೋರಾಟಕ್ಕೆ ಪ್ರಗತಿ ಪರ ಸಂಘಟನೆಗಳ ಬೆಂಬಲ ಕೋರಿರುವುದಾಗಿ ತಿಳಿಸಿದ ಮಲಿಯೂರು ಶಂಕರ್ ದಸಂಸ, ಕುರುಬರ ಸಂಘ, ನಾಯಕ ಸಂಘ, ವೀರಶೈವ ಸಮಾಜ ಸೇರಿದಂತೆ ಮತ್ತಿತರೆ ಸಂಘಗಳಿಂದ ಸಕಾರಾತ್ಮಕ ಸ್ಪಂದನೆ ದೊರಕಿದೆ ಎಂದರು.

ಸ್ಮಶಾನ ಸೌಲಭ್ಯ ದೊರಕಿಸಿಕೊಡುವಂತೆ ಮನವಿ ಸಲ್ಲಿಸಲು ಸಮಾಜದ ಮುಖಂಡರ ನಿಯೋಗ ಮುಂದಿನ ವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಲಿದೆ. ಅಲ್ಲದೇ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೂ ಪ್ರತ್ಯೇಕ ಮನವಿ ಸಲ್ಲಿಸಲಾಗುತ್ತದೆ ಎಂದು ತಿಳಿಸಿದರು.

ಸಚಿವರ ಆದೇಶಕ್ಕೂ ನಿರ್ಲಕ್ಷ್ಯ : ಬನ್ನೂರು ಪುರಸಭಾ ಸದಸ್ಯ ಬಿ.ಶಿವಣ್ಣ ಮಾತನಾಡಿ, ಮಾದಿಗ ಸಮಾಜದ ಸ್ಮಶಾನಕ್ಕಾಗಿ ತಾಲೂಕಿನಾದ್ಯಂತ ಪ್ರತಿಭಟನೆ, ರಸ್ತೆ ತಡೆ ನಡೆಸಿ ತಹಶೀಲ್ದಾರ್, ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ್ದರೂ ನಮಗೆ ಯಾವುದೇ ರೀತಿಯ ಪರಿಹಾರ ದೊರಕಿಲ್ಲ. ಮಾದಿಗರು ಎಂಬ ಕಾರಣಕ್ಕೆ ಅಧಿಕಾರಿಗಳು ಅಸಡ್ಡೆಯಿಂದ ವರ್ತಿಸುತ್ತಿದ್ದಾರೆ. ಸಚಿವ ಮಹದೇವಪ್ಪರವರು ತಹಶೀಲ್ದಾರ್ ಹಾಗೂ ಜಿಲ್ಲಾಡಳಿತಕ್ಕೆ ಸಮಸ್ಯೆ ಬಗೆಹರಿಸುವಂತೆ ಆದೇಶ ನೀಡಿದ್ದರೂ ಅಧಿಕಾರಿಗಳು ಕೆಲಸ ಮಾಡುತ್ತಿಲ್ಲ ಎಂದರು.

ಸಭೆಯಲ್ಲಿ ಜನಕಲ್ಯಾಣ ಸಂಘದ ಉಪಾಧ್ಯಕ್ಷ ಸಿದ್ದನಹುಂಡಿ ಗೋವಿಂದರಾಜು, ಪ್ರಧಾನ ಕಾರ್ಯದರ್ಶಿ ಜಿ.ಎನ್.ಪುಟ್ಟಸ್ವಾಮಿ, ಸಹ ಕಾರ್ಯದರ್ಶಿ ಹೊಸಹಳ್ಳಿ ಮಾದೇಶ್, ಸಂಚಾಲಕರಾದ ಮಲಿಯೂರು ಶಿವರಾಜು, ಬನ್ನೂರು ಬಿ.ಆರ್.ಮಂಜುನಾಥ್, ನಿರ್ದೇಶಕರಾದ ಸಿ.ಲಿಂಗರಾಜು, ಹುಣಸೂರು ನಿಂಗರಾಜು, ನಾಗಣ್ಣ, ರಾಜಪ್ಪ, ಕೆ.ಜಿ.ಲಿಂಗರಾಜು, ಬೈರಾಪುರ ಮಹದೇವು, ಶಿವಕುಮಾರ್, ನ್ಯಾಯಬೆಲೆ ಅಂಗಡಿ ಸ್ವಾಮಿ, ಚನ್ನಪ್ಪ, ಶಿವಣ್ಣ, ಶಿವಕುಮಾರ್, ಸಿ.ನಾಗರಾಜು, ನಿಂಗಯ್ಯ,ರಾಚಯ್ಯ ಸೇರಿದಂತೆ ತಾಲೂಕಿನ 28 ಗ್ರಾಮಗಳ 250ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ನಂಜನಗೂಡಿನಲ್ಲಿ ರೈಲಿಗೆ ಸಿಲುಕಿ ಅಪರಿಚಿತ ವ್ಯಕ್ತಿ ಸಾವು

ನಂಜನಗೂಡು, ಜ.17– ಚಲಿಸುತ್ತಿರುವ ರೈಲಿಗೆ ಸಿಲುಕಿ ಅಪರಿಚಿತ ವ್ಯಕ್ತಿಯೊಬ್ಬರು ಸಾವಿಗೀಡಾಗಿರುವ ಘಟನೆ ವರದಿಯಾಗಿದೆ.

ಜ.13ರಂದು ಕಡಕೊಳ ನಂಜನಗೂಡು ರೈಲು ನಿಲ್ದಾಣಗಳ ಮಧ್ಯೆ ಸುಮಾರು 40 ವರ್ಷದ ಅಪರಿಚಿತ ವ್ಯಕ್ತಿ ಚಲಿಸುತ್ತಿರುವ ರೈಲು ಗಾಡಿಗೆ ಸಿಲುಕಿ ಮೃತಪಟ್ಟಿದ್ದಾರೆ.

ಸಾಧಾರಣ ಮೈಕಟ್ಟು, ಗೋಧಿ ಮೈ ಬಣ್ಣ, ಕೋಲುಮುಖ, ತಲೆ ಕೂದಲು ಗಡ್ಡ ಮೀಸೆ ಬೋಳಿಸಿದ್ದಾರೆ. ಮಾಸಲು ನೀಲಿ ಬಣ್ಣದ ತುಂಬ ತೋಳಿನ ಶರ್ಟ್ ಧರಿಸಿದ್ದು, ಕಾಫಿ ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ, ವ್ಯಕ್ತಿಯ ಶವವನ್ನು ಶವಾಗಾರದಲ್ಲಿರಿಸಲಾಗಿದ್ದು, ಯಾರಾದರೂ ವಾರಸುದಾರರು ಇದ್ದಲ್ಲಿ ನಂಜನಗೂಡು ರೈಲ್ವೆ ಪೊಲೀಸರನ್ನು ಸಂಪರ್ಕಿಸಬೇಕೆಂದು ಪ್ರಕಟಣೆಯಲ್ಲಿ ಕೋರಿದ್ದಾರೆ. ಈ ಸಂಬಂಧ ನಂಜನಗೂಡು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಲ್ಲೇನಹೊಸಳ್ಳಿ ಹಾಡಿಯಲ್ಲಿ ಮೈಕ್ರೋಗ್ರಿಡ್ ವಿದ್ಯುತ್ ಯೋಜನೆಗೆ ಶಾಸಕ ಜಿ.ಡಿ.ಹರೀಶ್‌ಗೌಡ ಚಾಲನೆ

73 ಮನೆಗಳಿಗೆ ಬೆಳಕು ನೀಡಿದ ಆಶಾ ಜ್ಯೋತಿ



ಹುಣಸೂರು, ಜ.17– ಬೆಂಗಳೂರಿನ ಆಶ್ರಯ ಹಸ್ತ ಟ್ರಸ್ಟ್, ಮೈಸೂರಿನ ಎನ್‌ಐಇ–ಕ್ರೆಸ್ಟ್ ಕಾಲೇಜು ಮತ್ತು ಹುಣಸೂರು ಡೀಡ್ ಸಂಸ್ಥೆ ಸಹಯೋಗದಲ್ಲಿ ತಾಲೂಕಿನ ಬಿಲ್ಲೇನಹೊಸಳ್ಳಿ ಹಾಡಿಯಲ್ಲಿ ಸ್ಥಾಪಿಸಿರುವ ನವೀಕರಿಸಬಹುದಾದ ಮೈಕ್ರೋಗ್ರಿಡ್ ವಿದ್ಯುತ್ ಯೋಜನೆ ಆಶಾ ಜ್ಯೋತಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಬುಧವಾರ ಚಾಲನೆ ನೀಡಿದರು.

ಬಿಲ್ಲೇನಹೊಸಳ್ಳಿ ಹಾಡಿಯಲ್ಲಿ 73 ಮನೆಗಳಿಗೆ ವಿದ್ಯುತ್ ಪೂರೈಕೆಗೆ ಚಾಲನೆ ನೀಡಿ ಈ ವೇಳೆ ಮಾತನಾಡಿದ ಅವರು, ಸಾಂಪ್ರದಾಯಿಕ ಇಂಧನ ಮೂಲಗಳ ಕೊರತೆ ಕಾಡುತ್ತಿರುವ ಈ ಸಂಕೀರ್ಣ ಪರಿಸ್ಥಿತಿಯಲ್ಲಿ ಎನ್‌ಐಇ ಕ್ರೆಸ್ಟ್ ಕಾಲೇಜಿನ ಯುವ ವಿದ್ಯಾರ್ಥಿಗಳು ಮತ್ತು ಆಶ್ರಯ ಹಸ್ತ ಟ್ರಸ್ಟ್ ಸಂಸ್ಥೆಯು ಹೈಬ್ರಿಡ್ ತಂತ್ರಜ್ಞಾನಗಳ ಮೂಲಕ ಮೈಕ್ರೋಗ್ರಿಡ್ ಬಳಸಿ ವಿದ್ಯುತ್ ಉತ್ಪಾದನೆ ಮಾಡಬಹುದೆನ್ನುವುದನ್ನು ಇಡೀ ವಿಶ್ವಕ್ಕೆ ಸಂದೇಶ ನೀಡಿದ್ದಾರೆ ಎಂದರು.

ಅಭಿವೃದ್ಧಿಯ ಹೆಸರಿನಲ್ಲಿ ಮಾಲಿನ್ಯತೆ ತುಂಬುತ್ತಿರುವ ಈ ಪ್ರಪಂಚದಲ್ಲಿ ಆಶಾ ಜ್ಯೋತಿ ಯೋಜನೆಯಡಿ ಶುದ್ಧ ಇಂಧನ(ಕ್ಲೀನ್ ಎನರ್ಜಿ) ಶೂನ್ಯ ಇಂಗಾಲ ಹೊರಸೂಸುವಿಕೆಯ ತಂತ್ರಜ್ಞಾನ ನೀಡುವ ಮೂಲಕ ಆರೋಗ್ಯವನ್ನು ರಕ್ಷಿಸುವ ಮಹತ್ತರ ಕಾರ್ಯ ಆಗುತ್ತಿದೆ ಮೊಟ್ಟಮೊದಲನೆಯದಾಗಿ ಯೋಜನೆ ನನ್ನ ಕ್ಷೇತ್ರಕ್ಕೆ ಬಂದಿರುವುದು ನನಗೆ ಹೆಮ್ಮೆ ಎನಿಸಿದೆ. ಬೆಂಗಳೂರಿನ ಆಶ್ರಯ ಹಸ್ತ ಟ್ರಸ್ಟ್ ಸಂಸ್ಥೆಯು ಯೋಜನೆಗಾಗಿ 30 ಲಕ್ಷ ರೂ.ಗಳ ಆರ್ಥಿಕ ನೆರವು ನೀಡುವ ಮೂಲಕ ಹಾಡಿಯ ಮುಗ್ಧ ಗಿರಿಜನರ ಬದುಕಿಗೆ ಬೆಳಕಾಗಿದೆ. ತಾಲೂಕಿನ 37 ಹಾಡಿಗಳ ಸಮಗ್ರ ಅಭಿವೃದ್ಧಿಗೆ ಕೇಂದ್ರ ಸರ್ಕಾರದ ಪಿಎಂ ಜನ್‌ಮನ್ ಯೋಜನೆ ಜಾರಿಗೊಂಡಿದ್ದು, ಸರ್ಕಾರೇತರ ಸಂಘಸಂಸ್ಥೆಗಳಿಂದ ಇಂತಹ ಸಹಕಾರ ಸಿಕ್ಕಲ್ಲಿ ಇನ್ನಷ್ಟು ಅಭಿವೃದ್ಧಿ ಸಾಧ್ಯವೆಂದರು.

ಆಶ್ರಯ ಹಸ್ತ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಕೆ.ದಿನೇಶ್ ಮಾತನಾಡಿ, ವಿಶ್ವಸಂಸ್ಥೆಯ ಸಮೀಕ್ಷೆಯಂತೆ ದೇಶದಲ್ಲಿ 64 ಲಕ್ಷ ಮನೆಗಳು ಇಂದಿಗೂ ಕತ್ತಲೆಯಲ್ಲಿವೆ. ವಿದ್ಯುತ್ ಪೂರೈಕೆ ಮೂಲಕ ಗ್ರಾಮೀಣ ಜನರ ಶಿಕ್ಷಣ, ಆರೋಗ್ಯ ಮತ್ತು ಆರ್ಥಿಕ ಸ್ಥಿತಿ ಸುಧಾರಿಸಲಿದೆ. ನಮ್ಮ ಟ್ರಸ್ಟ್ ದೇಶದ 26 ಜಿಲ್ಲೆಗಳಲ್ಲಿ 76ಕ್ಕೂ ಹೆಚ್ಚು ಒಡಂಬಡಿಕೆಯ ಮೂಲಕ ಜನರ ನೆರವಿಗೆ ನಿಂತಿದೆ ಎಂದರು. ಎನ್‌ಐಇ ಕ್ರೆಸ್ಟ್ ಕಾಲೇಜಿನ ಮುಖ್ಯಸ್ಥ ಎನ್.ಶ್ಯಾಮ್‌ಸುಂದರ್ ಮಾತನಾಡಿ, ಸೌರಶಕ್ತಿ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಮೂಲಕ ದೇಶದಲ್ಲೇ ಮೈಕ್ರೋಗ್ರಿಡ್ ಅಳವಡಿಸಿ ವಿದ್ಯುತ್ ಉತ್ಪಾದನೆ ಕೈಗೊಳ್ಳುತ್ತಿರುವುದು ಇದೇ ಮೊದಲ ಬಾರಿಯಾಗಿದೆ. ಯೋಜನೆಯು ವಿಶ್ವಾಸಾರ್ಹ ವಿದ್ಯುತ್ ಸರಬರಾಜು, ಪೋರ್ಟಬಲ್, ದೃಢವಾದ ಮತ್ತು ಬಾಳಿಕೆ ಬರುವ ಯೋಜನೆಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ನೇರಳಕುಪ್ಪೆ ಗ್ರಾಪಂ ಅಧ್ಯಕ್ಷೆ ಗೀತಾ ಸುರೇಶ್, ಟ್ರಸ್ಟಿಗಳಾದ ಆಶಾ ದಿನೇಶ್, ದಿವ್ಯಾ ದಿನೇಶ್, ಸೋನಿಯಾ, ವಿಕ್ರಂ, ಡೀಡ್ ಸಂಸ್ಥೆಯ ನಿರ್ದೇಶಕ ಡಾ.ಎಸ್.ಶ್ರೀಕಾಂತ್, ದಲಿತ ಮುಖಂಡ ಹರಿಹರ ಆನಂದಸ್ವಾಮಿ, ನಿವೃತ್ತ ಪ್ರಾಂಶುಪಾಲ ಪ್ರೊ.ಎಚ್.ಆರ್.ಸಿದ್ದೇಗೌಡ, ಆದಿವಾಸಿ ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ಪಿ.ಕೆ.ರಾಮು, ರಮೇಶ್ ಸೇರಿದಂತೆ ಹಾಡಿಯ ಗಿರಿಜನರು ಮತ್ತು ಗ್ರಾಮಸ್ಥರು ಹಾಜರಿದ್ದರು.

ಎಲ್ಲಾ ವರ್ಗದವರನ್ನು ಬೆಳೆಸಿದವರು ದಿ.ಚಿಕ್ಕಮಾದು

ಹೆಚ್.ಡಿ.ಕೋಟೆ: ತಾಲೂಕಿನಲ್ಲಿ ಎಲ್ಲಾ ಸಮುದಾಯವನ್ನು ಬೆಳೆಸಿದ ಕೀರ್ತಿ ಮಾಜಿ ಶಾಸಕ ದಿ.ಎಸ್.ಚಿಕ್ಕಮಾದು ಅವರಿಗೆ ಸಲ್ಲುತ್ತದೆ ಎಂದು ಶಾಸಕ ಅನಿಲ್ ಚಿಕ್ಕಮಾದು ಅವರ ತಾಯಿ ನಾಗಮ್ಮ ತಿಳಿಸಿದ್ದಾರೆ.

ಪಟ್ಟಣದ ತಾಲೂಕು ಆಡಳಿತ ಭವನದ ಶಾಸಕರ ಕಚೇರಿಯಲ್ಲಿ ದಿ.ಎಸ್.ಚಿಕ್ಕಮಾದು ಅಭಿಮಾನಿ ಬಳಗದ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ದಿ:ಚಿಕ್ಕಮಾದು ಅಭಿಮಾನಿ ಬಳಗದ ವತಿಯಿಂದ 4ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಹಾಗೂ ಮೈಸೂರು ವಿವಿ ಸಿಂಡಿಕೇಟ್ ಸದಸ್ಯರಾಗಿ ನೂತನವಾಗಿ ಆಯ್ಕೆಯಾದ ಕ್ಯಾತನಹಳ್ಳಿ ನಾಗರಾಜ್, ಜಿಲ್ಲಾ ಎಸ್‌ಸಿ, ಎಸ್ಟಿ ಜಾಗೃತಿ ಸಮಿತಿ ಸದಸ್ಯ ವೇಣುಗೋಪಾಲ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಮಾತನಾಡಿದ ಅವರು, ಶಾಸಕರಾಗಿದ್ದ ಅವಧಿಯಲ್ಲಿ ಎಂದು ಕೂಡ ರಾಜಕೀಯ ಮಾಡದೆ ರಾಜಕಾರಣ ಮಾಡಿದರು. ಜೆಡಿಎಸ್ ಪಕ್ಷದ ಶಾಸಕರಾಗಿದ್ದರೂ ಕೂಡ ಕಾಂಗ್ರೆಸ್ ಪಕ್ಷದ ಸಂಸದ ದಿ.ಆರ್. ಧ್ರುವನಾರಾಯಣ್ ಅವರ ಜೊತೆ ಉತ್ತಮ ಒಡನಾಟ ಇಟ್ಟುಕೊಂಡು ತಾಲೂಕನ್ನು ಅಭಿವೃದ್ಧಿಪಡಿಸಿದರು ಎಂದರು.

ಅನಿಲ್ ಚಿಕ್ಕಮಾದು ಕೂಡ ಅವರ ತಂದೆ ಹಾದಿಯಲ್ಲಿ ನಡೆದು ಎಲ್ಲಾ ವರ್ಗದ ಜನರಿಗೂ ಸಾಮಾಜಿಕ ನ್ಯಾಯ ದೊರಕಿಸಿ ಕೊಡುವುದರ ಜೊತೆಗೆ ತಾಲೂಕಿಗೆ ಅಂಟಿದ ಹಿಂದುಳಿದ ತಾಲೂಕು ಹಣೆಪಟ್ಟಿ ಎಂಬ ಹೋಗಲಾಡಿಸಲು ಹೋರಾಟ ಮಾಡುತ್ತಿದ್ದಾರೆ ಎಂದರು.

ದಿ.ಎಸ್.ಚಿಕ್ಕಮಾದು ಅಭಿಮಾನಿ ಬಳಗದ ತಾಲೂಕು ಅಧ್ಯಕ್ಷ ಜಿನ್ನಹಳ್ಳಿ ರಾಜನಾಯಕ ಮಾತನಾಡಿದರು.

ಶಾಸಕ ಅನಿಲ್ ಚಿಕ್ಕಮಾದು ಅವರ ಮಾತೃಶ್ರೀ ನಾಗಮ್ಮ ಅವರು ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಇದೇ ಸಂದರ್ಭದಲ್ಲಿ ಚಿಕ್ಕಮಾದು ಅಭಿಮಾನಿ ಬಳಗದ ತಾಲೂಕು ಅಧ್ಯಕ್ಷ ಜಿನ್ನಹಳ್ಳಿ ರಾಜನಾಯಕ, ಕ್ಯಾತನಹಳ್ಳಿ ನಾಗರಾಜು, ರವಿ, ಶಂಬುಲಿಂಗನಾಯಕ, ಅಂಕಪ್ಪ, ಪರಶಿವಮೂರ್ತಿ, ನಾಗರಾಜು, ಮಂಜುನಾಥ್, ರಾಜು ಬಿದರಹಳ್ಳಿ, ಪಿ.ರವಿ, ಸೀತಾರಾಮ್, ನರಸಿಂಹಮೂರ್ತಿ, ಪ್ರಭುಸ್ವಾಮಿ, ಪ್ರದೀಪ್, ವೇಣುಗೋಪಾಲ್, ಧನಂಜಯ, ಮಹೇಶ ನಾಯಕ, ದಾಸನಾಯಕ ಇದ್ದರು.



ಶಾಸಕ ಅನಿಲ್ ಚಿಕ್ಕಮಾದು ಅವರ ತಾಯಿ ನಾಗಮ್ಮರಿಂದ ಕ್ಯಾಲೆಂಡರ್ ಬಿಡುಗಡೆ.

ಮನೆ ಮನೆಗೆ ಮಂತ್ರಾಕ್ಷತೆ, ಆಹ್ವಾನ ಪತ್ರಿಕೆ...



ವರುಣ ವಿಧಾನಸಭಾ ಕ್ಷೇತ್ರದ ಟಿ.ನರಸೀಪುರ ಪುರಸಭಾ ವ್ಯಾಪ್ತಿಯ ಬೈರಾಪುರ ಗ್ರಾಮದಲ್ಲಿ ಅಯೋಧ್ಯೆಯಿಂದ ಬಂದಿರುವ ಮಂತ್ರಾಕ್ಷತೆ ಹಾಗೂ ಆಹ್ವಾನ ಪತ್ರಿಕೆಯನ್ನು ಬೂತ್ ಅಧ್ಯಕ್ಷ ಬಾಲರಾಜು ಹಾಗೂ ದಿಲೀಪ್ ಕುಮಾರ್ ನೇತೃತ್ವದಲ್ಲಿ ಮನೆ ಮನೆಗೆ ನೀಡಲಾಯಿತು. ಆರ್‌ಎಸ್‌ಎಸ್ ಹಿರಿಯ ಮುಖಂಡ ತೋಟದಪ್ಪ ಬಸವರಾಜು, ಬೈರಾಪುರ ಗ್ರಾಮದ ದೊಡ್ಡ ಯಜಮಾನರಾದ ಚಿಕ್ಕಲಿಂಗಯ್ಯ, ಚಿಕ್ಕಯಜಮಾನ ಮಹಾದೇವ (ಮೈಸೂರು), ಬಿ.ಎಲ್. ಮಹಾದೇವ, ತಬಲಾ ರಾಚು, ಮಹಾದೇವ (ತಬಲಾ), ಪುಟ್ಟಸ್ವಾಮಿ, ಶೇಷ, ಸುರೇಶ, ಪುನೀತ್, ರಾಜೇಶ್, ಬಸವರಾಜು, ಚಿನ್ನಪ್ಪ, ಸಿದ್ದರಾಜು, ವಿಶಾಲ್ ಅವರುಗಳು ಉಪಸ್ಥಿತರಿದ್ದರು.

ನಂ.ಗೂಡಲ್ಲಿ ರಸ್ತೆ ಸಂಚಾರ ಸುರಕ್ಷತಾ ಅಭಿಯಾನ

ನಂಜನಗೂಡು: ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರಿಂದ ಪ್ರಾಣಾಪಾಯವಾಗುವುದನ್ನು ತಪ್ಪಿಸಬಹುದು, ಪ್ರತಿಯೊಬ್ಬರು ತಪ್ಪದೇ ಸಂಚಾರ ನಿಯಮಗಳನ್ನು ಪಾಲಿಸುವ ಮೂಲಕ ಅಂಗವಿಕಲತೆ ಹಾಗೂ ಅಮೂಲ್ಯ ಪ್ರಾಣಗಳನ್ನು ರಕ್ಷಿಸಬೇಕು ಎಂದು ಡಿವೈಎಸ್‌ಪಿ ಗೋವಿಂದರಾಜು ಹೇಳಿದರು.

ನಗರದ ಹಲ್ಲಹಳ್ಳಿ ವೃತ್ತದಲ್ಲಿ ಬುಧವಾರ ರಸ್ತೆ ಸುರಕ್ಷತಾ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ವಾಹನ ಚಾಲಕರು ಸಂಚಾರ ನಿಯಮಗಳನ್ನು ಪಾಲಿಸಬೇಕು, ದ್ವಿಚಕ್ರವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ ವಾಹನ ಚಾಲನೆ ಮಾಡಬೇಕು, ವಾಹನ ಚಾಲನೆ ವೇಳೆಯಲ್ಲಿ ಮೊಬೈಲ್ ಬಳಕೆ ಮಾಡಬಾರದು ಮತ್ತು ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಬಾರದು, ರಸ್ತೆಯಲ್ಲಿ ಅಪಘಾತ ಸಂಭವಿಸಿದಾಗ ಸಂತ್ರಸ್ತರಿಗೆ ಸಹಾಯಹಸ್ತ ಚಾಚುವ ಮೂಲಕ ಸರಿಯಾದ ಸಮಯದಲ್ಲಿ ಗಾಯಾಳುವಿಗೆ ಚಿಕಿತ್ಸೆ ದೊರಕುವಂತೆ ಮಾಡಬೇಕು, ಕಾರು ಚಾಲಕರು ಕಡ್ಡಾಯವಾಗಿ ಸೀಟ್ ಬೆಲ್ಟ್ ಧರಿಸುವುದರಿಂದ ಅನಾಹುತಗಳನ್ನು ತಪ್ಪಿಸಬಹುದಾಗಿದೆ, ವಾಹನ ಸವಾರರು ನಗರ ಪ್ರದೇಶದಲ್ಲಿ ವೇಗಮಿತಿಯನ್ನು ಅನುಸರಿಸಬೇಕು, ಜೊತೆಗೆ ಸಂಚಾರ ವಿಭಾಗದ ಪೊಲೀಸರು ನಿಮ್ಮ ಸ್ನೇಹಿತರು, ಅವರು ನಿಮಗೆ ತೊಂದರೆ ಕೊಡಲು ಇರುವುದಿಲ್ಲ ಎಂಬುದನ್ನು ಅರಿತು ಸಂಚಾರ ವಿಭಾಗದ ಸಿಬ್ಬಂದಿಗಳು ನೀಡುವ ಸೂಚನೆಗಳನ್ನು ಅನುಸರಿಸುವ ಮೂಲಕ ಅವರೊಂದಿಗೆ ಸಹಕರಿಸಬೇಕು ಎಂದರು.

ವಿವಿಧ ಶಾಲೆಯ ವಿದ್ಯಾರ್ಥಿಗಳು ರಸ್ತೆ ಸುರಕ್ಷತೆಯ ಘೋಷಣೆಗಳ ನಾಮಫಲಕಗಳನ್ನು ಪ್ರದರ್ಶಿಸಿ ನಗರದ ಆರ್‌ಪಿ ರಸ್ತೆಯಲ್ಲಿ ಜಾಗೃತಿ ಜಾಥಾ ನಡೆಸಿ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು. ಕಾರ್ಯಕ್ರಮದಲ್ಲಿ ಸಿ.ಪಿ.ಐ. ಬಸವರಾಜು, ಸಂಚಾರ ಠಾಣೆಯ ಪಿಎಸ್‌ಐ ಜಯಪ್ರಕಾಶ್, ನಗರ ಠಾಣೆ ಪಿಎಸ್‌ಐ ಪ್ರಕಾಶ್, ವಸಂತ್ ಕುಮಾರ್ ಉಪಸ್ಥಿತರಿದ್ದರು.



ಹಲ್ಲಹಳ್ಳಿ ವೃತ್ತದಲ್ಲಿ ಬುಧವಾರ ರಸ್ತೆ ಸುರಕ್ಷತಾ ಅಭಿಯಾನ ನಡೆಸಲಾಯಿತು.

ಚುಂಚನಕಟ್ಟೆಯಲ್ಲಿ ವೈಭವದ ಬ್ರಹ್ಮರಥೋತ್ಸವ

ಚುಂಚನಕಟ್ಟೆ, ಜ.17– ದಕ್ಷಿಣ ಭಾರತದಲ್ಲಿ ಸುಗ್ಗಿಯ ನಂತರ ನಡೆಯುವ ಇತಿಹಾಸ ಪ್ರಸಿದ್ಧ ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆಯ ಶ್ರೀರಾಮ ದೇವರ ಬ್ರಹ್ಮ ರಥೋತ್ಸವ ಮಂಗಳವಾರ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಅತ್ಯಂತ ವಿಜೃಂಭಣೆಯಿಂದ ಜರುಗಿತು.

ಬೆಳಿಗ್ಗೆ 11.30ರಲ್ಲಿ ಆದಿಚುಂಚನಗಿರಿ ಮಠದ ಮೈಸೂರು ಶಾಖಾ ಮಠದ ಸೋಮನಾಥ ಶ್ರೀ, ಗಾವಡಗೆರೆ ಮಠದ ನಟರಾಜ ಸ್ವಾಮಿಜಿ ಮತ್ತು ಶಾಸಕ ಡಿ.ರವಿಶಂಕರ್ ಅವರು ಶ್ರೀರಾಮನಿಗೆ ವಿಶೇಷ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ನೆರೆದಿದ್ದ ಭಕ್ತರು ಶ್ರೀರಾಮ ದೇವರಿಗೆ ಜಯಕಾರ ಕೂಗಿ ರಥವನ್ನು ದೇವಾಲಯದ ಸುತ್ತ ಒಂದು ಸುತ್ತು ಎಳೆದಾಗ ಈ ಅಭೂತಪೂರ್ವ ದೃಶ್ಯವನ್ನು ಕಣ್ತುಂಬಿಕೊಂಡ ಭಕ್ತ ಸಾಗರ ಭಾವಪರವಶವಾಯಿತು.

ರಥವು ದೇವಾಲಯದ ಸುತ್ತ ಸುತ್ತುವಾಗ ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ್ದ ಮತ್ತು ಸ್ಥಳೀಯ ಭಕ್ತಗಣ ದೇವರಿಗೆ ಬಾಳೆಹಣ್ಣು–ಜವನ ಎಸೆದು ತಮ್ಮ ಭಕ್ತಿ ಸಮರ್ಪಿಸಿದರಲ್ಲದೆ ಸರತಿ ಸಾಲಿನಲ್ಲಿ ನಿಂತು ಸೀತಾ ಸಮೇತ ಶ್ರೀರಾಮ ಮತ್ತು ಲಕ್ಷ್ಮಣ ದೇವರ ದರ್ಶನ ಪಡೆದರು.

ರಥೋತ್ಸವಕ್ಕೆ ಬಂದಿದ್ದವರಿಗೆ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಶಾಸಕ ಡಿ.ರವಿಶಂಕರ್ ಪ್ರಸಾದದ ವ್ಯವಸ್ಥೆ ಮಾಡಿದ್ದರು. ದೇವಾಲಯಕ್ಕೆ ಆಗಮಿಸಿದ್ದವರಿಗೆ ಲಾಡು ವಿತರಣೆ ಮಾಡಿದರೆ, ಯುವ ಜೆಡಿಎಸ್ ಮುಖಂಡ ಹಳಿಯೂರು ಮಧುಚಂದ್ರ ಮತ್ತು ಉದ್ಯಮಿ ಹೆಚ್.ಕೆ.ಶ್ರೀಧರ್, ಕೆ.ಆರ್.ನಗರ ರೋಟರಿ ಮತ್ತು ಕರ್ನಾಟಕ ರಾಜ್ಯ ಗ್ರಾಮಲೆಕ್ಕಿಗರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಭಕ್ತಾದಿಗಳಿಗೆ ಮಜ್ಜಿಗೆ–ಪಾನಕ ವಿತರಣೆ ಮಾಡಲಾಯಿತು.

ಜಾತ್ರೆಗೆ ಬಂದ ಭಕ್ತರನೇಕರು ದೇವಾಲಯದ ಆವರಣದಲ್ಲಿ ಅಡುಗೆ ಮಾಡಿ ಭಕ್ತರಿಗೆ ಊಟ ಬಡಿಸಿ ತಮ್ಮ ಹರಕೆ ತೀರಿಸಿದರು. ಇದರ ಜತೆಗೆ ಬಸವನ ವೃತ್ತದಿಂದ ಶ್ರೀರಾಮ ದೇವಾಲಯದವರೆಗೆ ರಸ್ತೆಯ ಎರಡೂ ಬದಿಯಲ್ಲಿ ಹಾಕಿರುವ ಸಿಹಿತಿಂಡಿ ಮತ್ತು ವಿವಿಧ ಆಟಿಕೆಯ ವಸ್ತುಗಳ ಅಂಗಡಿಗಳು ಜನರ ಮನ ಸೆಳೆದವು. ಅಲ್ಲದೇ ಭರ್ಜರಿ ವ್ಯಾಪಾರ ವಹಿವಾಟು ನಡೆಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ದೊಡ್ಡಸ್ವಾಮೀಗೌಡ, ವನಜಾಕ್ಷಮ್ಮ, ಸುನೀತಾ ರವಿಶಂಕರ್, ಕುಪ್ಪೆ ಗ್ರಾ.ಪಂ ಅಧ್ಯಕ್ಷೆ ಗೀತಾ, ಉಪಾಧ್ಯಕ್ಷೆ ಗೀತಾ, ತಾಪಂ ಮಾಜಿ ಅಧ್ಯಕ್ಷ ಹಾಡ್ಯ ಮಹದೇವಸ್ವಾಮಿ, ಮಾಜಿ ಸದಸ್ಯರಾದ ಗೋವಿಂದೇಗೌಡ, ಚಂದ್ರಶೇಖರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉದಯಶಂಕರ್, ಮಹದೇವ್, ಕಾಂಗ್ರೆಸ್ ಮುಖಂಡ ಶ್ರೀರಾಮಪುರ ಆನಂದ್, ಡೇರಿ ಮಾದು, ಎಚ್.ಜೆ.ರಮೇಶ್, ನೂತನ್ ಗೌಡ, ಸರಿತಾ ಜವರಪ್ಪ, ಉಷಾ ಪ್ರಸನ್ನ, ಹೆಬ್ಬಾಳು ಸೋಮಪ್ಪ ತಹಸೀಲ್ದಾರ್ ಪೂರ್ಣಿಮಾ, ತಾಪಂ ಇ.ಓ ಹರೀಶ್, ಸಾಲಿಗ್ರಾಮ ತಾಲೂಕು ಶಿರಸ್ತೇದಾರ್ ಮೇಲೂರು ಶಿವಕುಮಾರ್, ಉಪತಹಸೀಲ್ದಾರ್ ಕೆ.ಜೆ. ಶರತ್, ಆರ್.ಐ ಚಿದಾನಂದ್, ದೇವಾಲಯದ ಇಓ ಕೆ.ರಘು, ಆರೋಗ್ಯಾಧಿಕಾರಿ ಡಾ.ನಟರಾಜು, ಎಇಇ ಗಳಾದ ಅರ್ಕೇಶ ಮೂರ್ತಿ, ಹಾರಂಗಿ ಗುರುರಾಜ್, ದೇವಾಲಯದ ಅರ್ಚಕರರಾದ ವಾಸುದೇವನ್, ನಾರಾಯಣ ಅಯ್ಯಂಗಾರ್ ಮತ್ತಿತರರು ಇದ್ದರು. ಮುನ್ನೆಚ್ಚರಿಕೆಯ ಕ್ರಮವಾಗಿ ಹುಣಸೂರು ಡಿವೈಎಸ್ಪಿ ಗೋಪಾಲಕೃಷ್ಣ ನೇತೃತ್ವದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್‌ಗಳಾದ ಕೃಷ್ಣರಾಜು, ಶಿವನಂದ್, ಪಿಎಸ್‌ಐಗಳಾದ ಕುಮುದಾ, ರಾಜು, ಅಚ್ಚುತಾ, ಕೋಟೆಗೌಡ ಬಿಗಿ ಭದ್ರತೆ ಏರ್ಪಡಿಸಿದ್ದರು.



ಚುಂಚನಕಟ್ಟೆಯಲ್ಲಿ ಶ್ರೀರಾಮ ದೇವರ ಬ್ರಹ್ಮ ರಥೋತ್ಸವ ನಡೆಯಿತು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಗುಂಟೂರು ಖಾರಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಮೇರಿ ಕ್ರಿಸ್ಮಸ್(ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಟೇರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಟೇರ (ಕ)	4 ಪ್ರದರ್ಶನಗಳು
ರಾಜಕಮಲ್	
ಆಯಲಾಮ್ (ತ)	4 ಪ್ರದರ್ಶನಗಳು
ಸಂಗಂ	
ಕ್ಯಾಪ್ಟನ್ ಮಿರರ್(ಕ) 2 ಪ್ರದರ್ಶನಗಳು	ಕ್ಯಾಪ್ಟನ್ ಮಿರರ್(ತ) 2 ಪ್ರದರ್ಶನಗಳು
ಲಿಡೋ	
ಹನುಮಾನ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಟೈಗರ್–3 (ಹಿಂ)	4 ಪ್ರದರ್ಶನಗಳು
ಪ್ರಭಾ	
ಗುಂಟೂರು ಖಾರಂ(ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ಗುಂಟೂರು ಕಾರಂ (ತೆ):** ಬೆ.9.05ಕ್ಕೆ, ಮ.3.50ಕ್ಕೆ, **ಕಾಟೇರ (ಕ):** ಮ.12.15ಕ್ಕೆ, ರಾ.7ಕ್ಕೆ, ರಾ.10.25ಕ್ಕೆ.
ಸ್ಕ್ರೀನ್ 2	**ಅಯಲಾನ್ (ತ):** ಬೆ.10ಕ್ಕೆ, ಸಂ.4.05ಕ್ಕೆ, **ಮೇರಿ ಕ್ರಿಸ್‌ಮಸ್ (ತ):** ಮ.1.10ಕ್ಕೆ, **ಮೇರಿ ಕ್ರಿಸ್‌ಮಸ್ (ಹಿಂ):** ರಾ.7.15ಕ್ಕೆ, **ಅಬ್ರಾಹಂ ಓಜ್ಲರ್ (ಮ):** ರಾ.10.20ಕ್ಕೆ.
ಸ್ಕ್ರೀನ್ 3	**ಕ್ಯಾಪ್ಟನ್ ಮಿಲ್ಲರ್ (ಕ):** ಬೆ.9.55ಕ್ಕೆ, **ಕ್ಯಾಪ್ಟನ್ ಮಿಲ್ಲರ್ (ತ):** ಮ.1ಕ್ಕೆ, ರಾ.10.20ಕ್ಕೆ, **ಹನುಮಾನ್ (ತೆ):** ಸಂ.4.05ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 4	**ಕಾಟೇರ (ಕ):** ಬೆ.9.35ಕ್ಕೆ, **ಗುಂಟೂರು ಕಾರಂ (ತೆ):** ಮ.1ಕ್ಕೆ, ರಾ.7.15ಕ್ಕೆ, ರಾ.10.25ಕ್ಕೆ, **ಕ್ಯಾಪ್ಟನ್ ಮಿಲ್ಲರ್ (ತ):** ಸಂ.4.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	**ಗುಂಟೂರು ಕಾರಂ (ತೆ):** ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	**ಮೇರಿ ಕ್ರಿಸ್‌ಮಸ್ (ಹಿಂ):** ಬೆ.8.55ಕ್ಕೆ, **ಕಾಟೇರ (ಕ):** ಬೆ.11.50ಕ್ಕೆ, ಸಂ.6.50ಕ್ಕೆ, ರಾ.10.30ಕ್ಕೆ, **ಅಯಲಾನ್ (ತ):** ಮ.3.30ಕ್ಕೆ.
ಸ್ಕ್ರೀನ್ 3	**ಕಾಟೇರ (ಕ):** ಬೆ.8.50ಕ್ಕೆ, **ಕ್ಯಾಪ್ಟನ್ ಮಿಲ್ಲರ್ (ತ):** ಮ.12.25ಕ್ಕೆ, ರಾ.10.10ಕ್ಕೆ, **ಕ್ಯಾಪ್ಟನ್ ಮಿಲ್ಲರ್ (ಕ):** ಮ.3.45ಕ್ಕೆ, **ಮೇರಿ ಕ್ರಿಸ್‌ಮಸ್ (ಹಿಂ):** ರಾ.7.05ಕ್ಕೆ
ಸ್ಕ್ರೀನ್ 4	**ಸೈಂಧವ್ (ತೆ):** ಬೆ.9.10ಕ್ಕೆ, ಮ.3.35ಕ್ಕೆ, **ಹನುಮಾನ್ (ತೆ):** ಮ.12.10ಕ್ಕೆ, ರಾ.10ಕ್ಕೆ, **ಅಯಲಾನ್ (ತ):** ಸಂ.6.40ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ಪಾರ್ಕಿಂಗ್ (ಕ):** ಬೆ.10.35ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ 2 (ಕ):** ಮ.1.10ಕ್ಕೆ, **ಬ್ಯಾಡ್ ಮ್ಯಾನರ್ಸ್ (ಕ):** ಸಂ.4ಕ್ಕೆ, **ಅರ್ಧಂಬರ್ಧ ಪ್ರೇಮ ಕಥೆ (ಕ):** ಸಂ.6.35ಕ್ಕೆ, **ಅನ್ನಪೂರ್ಣಿ (ತ):** ರಾ.9.15ಕ್ಕೆ
ಸ್ಕ್ರೀನ್ 2	**ಅನಿಮಲ್ (ಹಿಂ):** ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ಮ.1.45ಕ್ಕೆ.
ಸ್ಕ್ರೀನ್ 3	**ಸ್ಯಾಮ್ ಬಹದ್ದೂರ್ (ಹಿಂ):** ಬೆ.10.10ಕ್ಕೆ, ಸಂ.4.50ಕ್ಕೆ, **ಅನಿಮಲ್ (ಹಿಂ):** ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10.45ಕ್ಕೆ, **ಅನಿಮಲ್ (ಹಿಂ):** ಮ.2.40ಕ್ಕೆ, **ನೆಪೋಲಿಯನ್ (ಇಂ):** ಸಂ.6.25ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, **ಡಂಕಿ (ಹಿಂ):** ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, **ನೆರು (ಮ):** ರಾ.10.10ಕ್ಕೆ, **ಸಲಾರ್ –1 (ಮ):** ಸಂ.6.35ಕ್ಕೆ, **ಸಲಾರ್–1 (ಹಿಂ):** ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, **ಸಲಾರ್–1 (ಕ):** ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, **ಸಲಾರ್– 1(ತೆ):** ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅಂಬಿಗರಹಳ್ಳಿಯ ಶಿವೇಗೌಡ ನಿಧನ




ಕೆ.ಆರ್. ನಗರ, ಜ.17– ಇಲ್ಲಿಗೆ ಸಮೀಪದ ಅಂಬಿಗರಹಳ್ಳಿಯ ಹಿರಿಯ ಮುಖಂಡ ಶಿವೇಗೌಡ ಅವರು ಬುಧವಾರ ಬೆಳಗಿನ ಜಾವ ನಿಧನರಾದರು. ಅವರಿಗೆ 90 ವರ್ಷ ವಯಸ್ಸಾಗಿತ್ತು. ಮೃತರಿಗೆ ಕನ್ನಡಪ್ರಭ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ಅಂಶಿ ಪ್ರಸನ್ನಕುಮಾರ್ ಸೇರಿದಂತೆ ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ, ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್, ಕೆ.ಆರ್. ನಗರ ಶಾಸಕ ಡಿ. ರವಿಶಂಕರ್, ಕೆಪಿಸಿಸಿ ಸದಸ್ಯ ದೊಡ್ಡಸ್ವಾಮೇಗೌಡ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್ ಸೇರಿದಂತೆ ಹಲವಾರು ಮಂದಿ ಗಣ್ಯರು, ಪತ್ರಕರ್ತರು ಮೃತರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ಮೃತರ ಅಂತ್ಯಸಂಸ್ಕಾರ ಅಂಬಿಗರಹಳ್ಳಿ ಗ್ರಾಮದ ಜಮೀನಿನಲ್ಲಿ ಬುಧವಾರ ಮಧ್ಯಾಹ್ನ ನೆರವೇರಿತು. ಹಿರಿಯ ಪತ್ರಕರ್ತರಾದ ಸಿ.ಕೆ. ಮಹೇಂದ್ರ, ಎಂ.ಆರ್. ಸತ್ಯನಾರಾಯಣ, ಧರ್ಮಾಪುರ ನಾರಾಯಣ, ಕೆ.ಆರ್. ನಗರ ತಾಲೂಕು ಕಸಾಪ ಅಧ್ಯಕ್ಷ ಡಿಂಡಿಮ ಶಂಕರ್, ಜಿಲ್ಲಾ ಕೋಶಾಧ್ಯಕ್ಷ ಜಿ.ಪ್ರಕಾಶ್, ಮಾಜಿ ಗೌರವ ಕಾರ್ಯದರ್ಶಿ ಕೆ.ಎಸ್. ನಾಗರಾಜ್, ಕೆ.ಆರ್.ನಗರದ ಬಹುತೇಕ ಪತ್ರಕರ್ತರು, ಮುಖಂಡರಾದ ಕೆಎಲ್. ರಮೇಶ್, ರಾಜಶೇಖರ್, ನಂದೀಶ್, ಆಶಾ ನಂದೀಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕೆ.ಆರ್. ನಗರದ ಎಂ.ಎಸ್.ಮಹದೇವ್, ಸಾಲಿಗ್ರಾಮದ ಉದಯಶಂಕರ್, ವಕ್ತಾರ ಸೈಯದ್ ಜಾಬೀರ್, ಶಾಸಕ ಡಿ. ರವಿಶಂಕರ್ ಅವರ ಆಪ್ತ ಸಹಾಯಕ ನವೀನ್ ರಂಗಶೆಟ್ಟಿ, ಕೆ.ಆರ್. ನಗರ ತಾಲೂಕಿನ ಬಹುತೇಕ ಪತ್ರಕರ್ತರು ಅಂತ್ಯಸಂಸ್ಕಾರದಲ್ಲಿ ಭಾಗವಹಿಸಿದ್ದರು.

ಬೆಟ್ಟದಪುರ ಸರೋಜಮ್ಮ



ಬೆಟ್ಟದಪುರ, ಜ.17– ಬೆಟ್ಟದಪುರದ ನಿವಾಸಿ ಶ್ರೀಮತಿ ಸರೋಜಮ್ಮ(90) ಬೆಳಗಿನ ಜಾವ ತಮ್ಮ ಸ್ವಗೃಹದಲ್ಲಿ ವಯೋಸಹಜ ಕಾಯಿಲೆಯಿಂದ ನಿಧನ ಹೊಂದಿದರು.

ದಿವಂಗತರು ಮೂವರು ಪುತ್ರಿಯರು, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಬೆಟ್ಟದಪುರದ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ, ಗಾವಡಗೆರೆ ಮಠದ ಶ್ರೀ ನಟರಾಜ ಸ್ವಾಮೀಜಿ, ಅರಕಲಗೂಡು ಚಿಲುಮೆ ಮಠದ ಜಯದೇವ ಸ್ವಾಮೀಜಿ, ಮನೆಹಳ್ಳಿ ಮಠದ ಶ್ರೀ ಗುರುಸಿದ್ದಲಿಂಗ ಸ್ವಾಮೀಜಿ, ಮಾಜಿ ಶಾಸಕರಾದ ಕೆ.ಮಹದೇವ್, ಹೆಚ್.ಸಿ.ಬಸವರಾಜ್, ಸಚಿವ ಕೆ.ವೆಂಕಟೇಶ್ ಅವರ ಪುತ್ರ ನಿತಿನ್ ವೆಂಕಟೇಶ್, ಜೆಡಿಎಸ್ ಮುಖಂಡ ಗಗನ್, ವೀರಶೈವ ಲಿಂಗಾಯತ ಸಮಾಜದ ತಾಲೂಕು ಅಧ್ಯಕ್ಷ ಚಂದ್ರಶೇಖರ್, ಮೈಮುಲ್ ನಿರ್ದೇಶಕ ರಾಜೇಂದ್ರಪ್ಪ, ಕೊಡಗು ಜಿಲ್ಲಾ ವೀರಶೈವ ಸಂಘದ ಅಧ್ಯಕ್ಷ ಶಿವಪ್ಪ, ಬೆಟ್ಟದಪುರ ವೀರಶೈವ ಸಮಾಜದ ಅಧ್ಯಕ್ಷ ಶಿವದೇವ್, ಪಟೇಲ್ ನಟೇಶ್ ಗ್ರಾಮದ ವೀರಶೈವ ಸಮಾಜದ ಮುಖಂಡರು ಹಾಗೂ ಗ್ರಾಮಸ್ಥರು ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದರು. ಇವರ ಅಂತ್ಯಕ್ರಿಯೆಯನ್ನು ಬೆಟ್ಟದಪುರದ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ಬುಧವಾರ ಸಂಜೆ ನೆರವೇರಿಸಲಾಯಿತು

ಮೂರ್ಖರಿಗೆ ಜನರು ಚಪ್ಪಾಳೆ ತಟ್ಟಬಾರದು

ಅನಂತ್‌ಕುಮಾರ್ ವಿರುದ್ಧ ಸಿಎಂ ಸಿದ್ದರಾಮಯ್ಯ ಕಿಡಿ



ಬೆಳಗಾವಿ: 'ಅವನೊಬ್ಬ ಮೂರ್ಖ...' ಅಂತ ಏಕವಚನದಲ್ಲೇ ಸಂಸದ ಅನಂತ್‌ಕುಮಾರ್ ಹೆಗಡೆ ವಿರುದ್ಧ ಮುಖ್ಯ ಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

ಬೆಳಗಾವಿ ಜಿಲ್ಲೆಯ ಬೈಲ ಹೊಂಗಲದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಉತ್ಸವ ಹಾಗೂ ವಿವಿಧ ಅಭಿವೃದ್ಧಿ ಕಾರ್ಯಗಳ ಉದ್ಘಾಟಿಸಿ ಬಳಿಕ ಮಾತನಾಡಿದ ಅವರು, ರಾಯಣ್ಣನ ದೇಶ ಪ್ರೇಮ, ದೇಶ ಭಕ್ತಿ ಬೆಳೆಸಿಕೊಳ್ಳಬೇಕು. ಪರಸ್ಪರರು ದ್ವೇಷ ಮಾಡಬಾರದು, ಪ್ರೀತಿಸುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು. ಅವನೊಬ್ಬ ಮೂರ್ಖ, ಮಸೀದಿ ಧ್ವಂಸಗೊಳಿಸಿ ದೇವಸ್ಥಾನ ಕಟ್ಟಿಸುವುದಾಗಿ ಹೇಳಿಕೆ ನೀಡಿದ್ದಾನೆ. ಈ ಹಿಂದೆ ಆದ ಸಣ್ಣ ತಪ್ಪಿನಿಂದ ಆಗಿದ್ದನ್ನೇ ಈಗ ಕೆದಕುತ್ತಿದ್ದಾರೆ. ಇಂತಹ ಮೂರ್ಖರಿಗೆ ಜನರು ಚಪ್ಪಾಳೆ ತಟ್ಟುತ್ತಾರೆ, ಆದರೆ ಇಂಥವರಿಗೆ ಚಪ್ಪಾಳೆ ತಟ್ಟಬಾರದು ಎಂದು ವಾಗ್ದಾಳಿ ನಡೆಸಿದರು.

ಗ್ಯಾರಂಟಿ ಯೋಜನೆ ಜಾರಿಯಾಗಲ್ಲ ಎಂದಿದ್ರು, ನಾವು ಯೋಜನೆ ಜಾರಿಗೆ ತಂದಿದ್ದೇವೆ. ರಾಜ್ಯ ಆರ್ಥಿಕವಾಗಿಯೂ ಸದೃಢವಾಗಿದೆ. ಗ್ಯಾರಂಟಿ ಜಾರಿ ಜೊತೆಗೆ ರಾಜ್ಯದ ಅಭಿವೃದ್ಧಿಯನ್ನೂ ಮಾಡುತ್ತೇವೆ ಎಂದು ಹೇಳುವ ಮೂಲಕ ರಾಜ್ಯ ದಿವಾಳಿ ಆಗಿದೆ ಎನ್ನುತ್ತಿರುವ ಪ್ರತಿಪಕ್ಷಗಳಿಗೆ ತಿರುಗೇಟು ನೀಡಿದರು. ರಾಜ್ಯದ ಜನರ ಆಶೀರ್ವಾದದಿಂದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದೆ. ಎಲ್ಲ ಧರ್ಮಿಯರಿಗೂ ಗ್ಯಾರಂಟಿ ಯೋಜನೆ ಜಾರಿಗೊಳಿಸಿದ್ದೇವೆ. ನಂದಗಡದ ಮ್ಯೂಸಿಯಂ ನಿರ್ಮಾಣಕ್ಕೆ ಕೂಡ ಶೀಘ್ರವೇ ಆದ್ಯತೆ ನೀಡುತ್ತೇವೆ ಎಂದರು.

ಯೋಗಾಸನ, ಪ್ರಾಣಾಯಾಮ, ಅಂತರ್‌ದೃಷ್ಟಿ ವಿದ್ಯೆ ಶಿಬಿರ

ಮೈಸೂರು,ಜ.17–ಮೈಸೂರಿನ ಪರಮಹಂಸ ಯೋಗ ಮಹಾವಿದ್ಯಾಲಯದ ಆಶ್ರಮದಲ್ಲಿ ಅಯೋಧ್ಯೆ ರಾಮಮಂದಿರ ಉದ್ಘಾಟನೆ ಪ್ರಯುಕ್ತ ಸರ್ವರೋಗಗಳ ನಿವಾರಣೆಗಾಗಿ 30 ದಿನಗಳ ಯೋಗಾಸನ, ಪ್ರಾಣಾಯಾಮ, ಪಿರಮಿಡ್ ಧ್ಯಾನ ಹಾಗೂ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ಅಂತರ್‌ದೃಷ್ಟಿ ವಿದ್ಯೆ ಶಿಬಿರವನ್ನು ಜ.22ರಿಂದ ಫೆ.21ರವರೆಗೆ ಏರ್ಪಡಿಸಲಾಗಿದೆ. ಶಿಬಿರವು ಪ್ರತಿದಿನ ಬೆಳಗ್ಗೆ 6.30ರಿಂದ 7.30, 11ರಿಂದ 12, ಸಂಜೆ 4ರಿಂದ 5, 5ರಿಂದ 6 ಹಾಗೂ 6ರಿಂದ 7ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 90355 06790 ಅಥವಾ 95915 10101 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

2ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಶಶಿರೇಖಾ.ಎಸ್
ನಿಧನ: 18.01.2022
ದುಃಖತಪ್ತರು: ಪತಿ ರಾಜು, ಮಗಳು ಸಂಜನ, ತಾಯಿ ಪ್ರೇಮ, ತಮ್ಮ ಚೇತನ್

10ನೇ ವರ್ಷದ ಸವಿನೆನಪು



ಶ್ರೀಮತಿ ಸುಶೀಲಮ್ಮ
ಜವಳಿ ವರ್ತಕರಾದ ಎಲ್.ಎಸ್ ಸುಬ್ಬಕಾಡಯ್ಯರವರ ಧರ್ಮಪತ್ನಿ, ದುಃಖತಪ್ತರು: ಮಗ ಶಶಿಕುಮಾರ್ ಎಲ್.ಎಸ್ ಮತ್ತು ಮಕ್ಕಳು

ಪರಿವರ್ತನ ವಿವಿಧೋದ್ದೇಶ ಮಹಿಳಾ ಸೌಹಾರ್ದ ಸಹಕಾರಿ ಸಂಘ ನಿ., ಮೈಸೂರು
ಅಭಿನಂದನೆಗಳು



ದಿ: 12-01-2024 ರಂದು ಶುಕ್ರವಾರ ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆ ನಡೆಸಲಾಗಿ ಅದರಲ್ಲಿ ಅಧ್ಯಕ್ಷರಾಗಿ ಶ್ರೀಮತಿ ಕೆ.ಎಸ್. ಲಲಿತ ಮತ್ತು ಉಪಾಧ್ಯಕ್ಷರಾಗಿ ಶ್ರೀಮತಿ ಭಾಗ್ಯಮ್ಮ ರವರು ವಿಜೇತರಾಗಿರುತ್ತಾರೆ, ಈ ಸಂದರ್ಭದಲ್ಲಿ ನಿರ್ದೇಶಕರುಗಳಾದ ಶ್ರೀಮತಿ ಮಂಜುಳಮ್ಮ ಸಿ, ಜ್ಯೋತಿ ಎಸ್.ಎ. ರತ್ನಮ್ಮ ಹೆಚ್.ಜಿ, ವಿಜಯ ಎಂ, ಶಿವಮ್ಮ, ರಶ್ಮಿ ಎನ್. ಹಾಗೂ ಚುನಾವಣೆ ಅಧಿಕಾರಿಗಳಾದ ಶ್ರೀ ಆರ್. ಪವನ್‌ಕುಮಾರ್ ರವರುಗಳು ಉಪಸ್ಥಿತರಿದ್ದರು. -ADVT

PAPER PUBLICATION

Our client, Sri. Nandan. G. aged about 32 years, son of Ganapathi Bhat. P., residing at No.272, 15th Cross, Aravinda nagara 1st Stage, Mysuru, is intending to purchase the schedule property from T.B. Gangadharappa, aged about 57 years, son of Late. Bettappa. T.N., residing at No.490/B, Jogihalli Road, Vidyanagara, Chikkanayakanahalli, Tumkur-572214.

If anybody has got any claim over the schedule property, they can file their objection with authentic documents in support of their objection and claims if any, within 7 days from the date of this publication, failing which, my client will go ahead with the transaction with respect to the schedule property.

SCHEDULE: Property bearing Residential Site No.4876, situated at 3rd Stage, Dattagalli, Mysuru, measuring East to West 9 Mtrs. x North to South 12 Mtrs. totally measuring 108 Sq. Mtrs. bounded on: East by: Property bearing Site No. 4875; West by: Property bearing Site No. 4877; North by : Property bearing Site No. 4867; South by: Road.

Sd/- O. SHAMA BHAT, B.A.LL.B., Reg. No. KAR 417/77, Sd/- O. SATHISHA, B.Sc. LL.B., Reg. No:KAR 721/89
ADVOCATES, No. 20/c, 2nd Floor, Near Airlines Hotel, Jayalakshmi Vilas Road, Chamarajapuram, Mysuru-570004.
Phone: 0821-2429851
Date: 09-01-2024


ಎರಡನೇ ವರ್ಷದ ಸವಿನೆನಪು



ಶ್ರೀ ಕಣಿಯಯ್ಯ
ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ಶ್ರೀಮತಿ ಸುಂದ್ರಮ್ಮ ಹಾಗೂ ಮಕ್ಕಳು ಮತ್ತು ಕುಟುಂಬವರ್ಗದವರು, ತಿಪ್ಪೂರು, ಕೆ.ಆರ್.ನಗರ

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೊದಲನೇ ವರ್ಷದ ಪುಣ್ಯಸ್ಮರಣೆ



ಶ್ರೀ ಕೆ. ಮಂಜೇಗೌಡ
ನಿಧನ: 18.01.2023
ನಮಗೆಲ್ಲಾ ಮಾರ್ಗದರ್ಶಕರೂ, ಬಾಳಿನುದ್ದಕ್ಕೂ ನಮ್ಮ ಹಿತವನ್ನೇ ಬಯಸುತ್ತಾ, ಪ್ರೀತಿ, ವಾತ್ಸಲ್ಯ, ಮಮತೆಯಿಂದ ಸಲಹಿದ ನಿಮ್ಮ ಚರಣಾರವಿಂದಗಳಿಗೆ ನಮನ. ಅಗಲಿದ ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಸದ್ಗತಿ, ಚಿರಶಾಂತಿ ಕರುಣಿಸಲಿ ಎಂದು ಪ್ರಾರ್ಥಿಸುವ
ದುಃಖತಪ್ತರು: ಪತ್ನಿ, ಮಕ್ಕಳು, ಅಳಿಯಂದಿರು, ಭಾವ ಅಕ್ಕ, ಮೊಮ್ಮಗ ಮತ್ತು ಬಂಧುಮಿತ್ರರು

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನಂಜನಗೂಡು
ಹುಲ್ಲಹಳ್ಳಿ ರಸ್ತೆ, ನಂಜನಗೂಡು, ಮೈಸೂರು ಜಿಲ್ಲೆ.
apmcnanjangud@gmail.com
ದೂರವಾಣಿ ಸಂ.08221-226309

ಸಂಖ್ಯೆ: ಕೃಉಮಾಸ(ನಂ)/597/2023–24 ದಿನಾಂಕ:11.01.2024

"ಪ್ರಕಟಣೆ"

ಈ ಮೂಲಕ ಪೇಟೆಕಾರ್ಯಕರ್ತರುಗಳಿಗೆ/ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, **ಮೆ// ಸುಮಿತ್ರಾ ಟ್ರೇಡರ್ಸ್ ಮಾ// ಶ್ರೀಮತಿ ಸುಮಿತ್ರಾ ಕೋಂ ಲೇಟ್ ಎಂ.ಪುಟ್ಟಸ್ವಾಮಿ, #285, ಒಕ್ಕಲಿಗರ ಬೀದಿ, ವರುಣಾ ಹೋಬಳಿ, ಯಡಕೊಳ ಅಂಚೆ, ಸಿದ್ದರಾಮನ ಹೊಂಡಿ, ಮೈಸೂರು ತಾಲ್ಲುಕು, ಮೈಸೂರು** ಇವರ ಹೆಸರಿಗೆ ನಂಜನಗೂಡು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿನ ನಿವೇಶನ ಸಂಖ್ಯೆ: **31 (12 * 24 ಮೀ ಅಳತೆ)** ಅನ್ನು **ಲೀಸ್–ಕಂ–ಸೇಲ್** ಆಧಾರದ ಅನ್ವಯ ಹಂಚಿಕೆಯಾಗಿದ್ದು, ನಿವೇಶನದ **ಲೀಸ್–ಕಂ–ಸೇಲ್** 10 ವರ್ಷಗಳ ಅವಧಿ ಪೂರ್ಣಗೊಂಡ ತರುವಾಯ ಕ್ರಯಪತ್ರ ಪಡೆದುಕೊಂಡಿರುತ್ತಾರೆ. ಸದರಿ ನಿವೇಶನದ ಮಾಲೀಕರಾದ ಶ್ರೀಮತಿ ಸುಮಿತ್ರಾ ಇವರು ಪ್ರಸ್ತುತ ನನಗೆ ವಯೋ ಸಹಜವಾಗಿರುವುದರಿಂದ ಮತ್ತು ಆರೋಗ್ಯ ದಿನೇ ದಿನೇ ಹದಗೆಡುತ್ತಿರುವ ಪ್ರಯುಕ್ತ ನಿವೇಶನ ಸಹಿತ ಗೋದಾಮನ್ನು ನನ್ನ ಮಗನಾದ **ಶ್ರೀ ಎಸ್.ಪಿ ನವೀನ್ ಕುಮಾರ್** ಬಿನ್ **ಲೇಟ್ ಎಂ. ಪುಟ್ಟಸ್ವಾಮಿ,** ಮಾಲೀಕರು. **ಮೆ// ಧೀರಜ್ ಟ್ರೇಡರ್ಸ್,** #251, ವರುಣಾ ಹೋಬಳಿ, ಯಡಕೊಳ ಅಂಚೆ, ಸಿದ್ದರಾಮನ ಹೊಂಡಿ, ಮೈಸೂರು ತಾಲ್ಲುಕು, ಇವರ ಹೆಸರಿಗೆ ವರ್ಗಾವಣೆ ಮಾಡಿಕೊಡುವಂತೆ ಈ ಕಛೇರಿಗೆ ಮನವಿಯನ್ನು ಸಲ್ಲಿಸಿರುತ್ತಾರೆ.

ಪ್ರಯುಕ್ತ, ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ನಿವೇಶನ **ಸಂಖ್ಯೆ: 31** ಅನ್ನು ಇವರ ಮಗನಾದ **ಶ್ರೀ ಎಸ್.ಪಿ ನವೀನ್ ಕುಮಾರ್** ಬಿನ್ **ಲೇಟ್ ಎಂ. ಪುಟ್ಟಸ್ವಾಮಿ,** ಮಾಲೀಕರು. **ಮೆ//ಧೀರಜ್ ಟ್ರೇಡರ್ಸ್, #251, ವರುಣಾ ಹೋಬಳಿ, ಯಡಕೊಳ ಅಂಚೆ, ಸಿದ್ದರಾಮನ ಹೊಂಡಿ, ಮೈಸೂರು ತಾಲ್ಲುಕು, ಮೈಸೂರು** ಇವರ ಹೆಸರಿಗೆ ವರ್ಗಾವಣೆ ಮಾಡಿಕೊಡುವ ಸಂಬಂಧ ಸಾರ್ವಜನಿಕರು ಅಥವಾ ಪೇಟೆಕಾರ್ಯಕರ್ತರು ಅಥವಾ ಸಂಬಂಧಿಕರಿಂದ ಮತ್ತು ಯಾರಿಂದಲಾದರೂ ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ **15 ದಿವಸದೊಳಗಾಗಿ** ಈ ಕಛೇರಿಗೆ ಲಿಖಿತ ರೂಪದಲ್ಲಿ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ. ನಿವೇಶನದ ಚೆಕ್ಕು ಬಂದಿಯ ವಿವರ ಈ ಕೆಳಕಂಡಂತಿದೆ.

: ಷೆಡ್ಯೂಲ್ ಸ್ವತ್ತಿನ ವಿವರ :

ನಂಜನಗೂಡು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ **ನಿವೇಶನ ಸಂಖ್ಯೆ : 31 ಪೂರ್ವ ಪಶ್ಚಿಮ 24 ಮೀಟರ್ ಉತ್ತರ ದಕ್ಷಿಣ 12** ಮೀಟರ್‌ಗಳುಳ್ಳ ಒಟ್ಟು **288** ಚದರ ಮೀಟರ್ ನಿವೇಶನ ಹಾಗೂ ಅದರಲ್ಲಿರುವ ಕಟ್ಟಡ.

ನಿವೇಶನ ಸಂಖ್ಯೆ: 31 ಕ್ಕೆ ಚೆಕ್ಕುಬಂಧಿ

ಪೂರ್ವಕ್ಕೆ : ಎ.ಪಿ.ಎಂ.ಸಿ ರಸ್ತೆ **ಪಶ್ಚಿಮಕ್ಕೆ :** ಎ.ಪಿ.ಎಂ.ಸಿ ಕಾಂಪೌಂಡ್ ಗೋಡೆ
ಉತ್ತರಕ್ಕೆ : ನಿವೇಶನ ಸಂ–30 **ದಕ್ಷಿಣಕ್ಕೆ :** ಎ.ಪಿ.ಎಂ.ಸಿ ಹರಾಜುಕಟ್ಟೆ

ಸಹಿ/–ಬಿ.ಮಹೇಶ)	ಸಹಿ/– (ಶಿವಕುಮಾರ್ ಕಾಸನೂರ್)
ಕಾರ್ಯದರ್ಶಿ	ಆಡಳಿತಾಧಿಕಾರಿಯವರು
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನಂಜನಗೂಡು	ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನಂಜನಗೂಡು